# Ulidavaru Kandante

Written By

RAKSHIT SHETTY

Copyrights © Rakshit Shetty

EXT. DAY: MALPE HARBOR / DOCKING AREA

ಕೆಲವು ಕಾರ್ಮಿಕರು ಹಡಗನ್ನು ದಡಕ್ಕೆ ಎಳೆಯುತ್ತಿರುತ್ತಾರೆ. ಹಡಗನ್ನು ಎಳೆಯಲು, ಹಗ್ಗ ಮತ್ತು ಮರದ ದಿಮ್ಮಿಗಳನ್ನು ಉಪಯೋಗಿಸಿ ಕೆಲವೊಂದು ವ್ಯವಸ್ಥೆ ಮಾಡಲಾಗಿದೆ. ಎಳೆಯಲು ಸುಲಭವಾಗುವಂತೆ, ಹಡಗಿನ ಕೆಳಗೆ ಮರದ ದಿಮ್ಮಿಗಳನ್ನು, ಸರಿಸಮಾನವಾಗಿ, ಅಡ್ಡ ಹಾಗು ನೇರವಾಗಿ ಜೋಡಿಸಲಾಗಿದೆ. ಹಡಗಿನ ಬೇರೆ ಬೇರೆ ಭಾಗಗಳಿಗೆ ಕಟ್ಟಲಾಗಿರುವ ಹಗ್ಗವನ್ನು ವ್ಯವಸ್ಥಿತ ರೂಪದಲ್ಲಿ ಗಾಣಕ್ಕೆ ಕಟ್ಟಲಾಗಿದೆ. ಕಾರ್ಮಿಕರ ಒಂದು ತಂಡ ದಿಮ್ಸಾಲ್ ಹಾಡುತ್ತಾ ಗಾಣವನ್ನು ತಿರುಗಿಸುತ್ತಿದ್ದರೆ, ಮತ್ತೊಂದು ತಂಡ 'ಆರ್ಯ ಆರ್ಯ' ಎಂದು ಕರೆಯನ್ನು ಕೂಗುತ್ತ, ಹಗ್ಗವನ್ನು ಎಳೆದು, ತಡೆಬಂದಾಗ ದಿಮ್ಮಿಗಳ ಜಾರುವಿಕೆ ಸುಲಭವಾಗುವಂತೆ ಮಾಡಿಕೊಡುತ್ತಾರೆ. ಹಡಗನ್ನು ದಡಕ್ಕೆ ಎಳೆಯುತ್ತಿದ್ದಂತೆಯೇ, camera ಎರಡೂ ತಂಡದ ಕಾರ್ಮಿಕರನ್ನು ದಾಟಿ, ನಿಧಾನವಾಗಿ ಹಡಗಿನ ವಿರುದ್ಧ ದಿಕ್ಕಿನಲ್ಲಿ ಸಮುದ್ರದ ಕಡೆಗೆ ಸಾಗುತ್ತದೆ. Camera ಸಮುದ್ರದ ಕಡೆಗೆ ಸಾಗುತ್ತಿದ್ದಂತೆ, ಓರ್ವ 12 ವರ್ಷದ ಬಾಲಕ (ರಿಚ್ಚಿ) ಸಮುದ್ರ ತೀರದಲ್ಲಿ, ಸಮುದ್ರವನ್ನು ನೋಡುತ್ತಾ, ದಿಮ್ಸಾಲ್ ಗುನುಗುತ್ತಾ ನಿಂತಿರುತ್ತಾನೆ. Camera ಅವನ ಹತ್ತಿರ ಹೋಗಿ ನಿಲ್ಲುತ್ತದೆ. ಅವನ close upಗೆ ಬಂದರೆ, ಅವನು ಮೌನವಾಗುತ್ತಾನೆ. ಅವನ ಕಣ್ಣುಗಳು ಯಾರದ್ದೋ ನಿರೀಕ್ಷೆಯಲ್ಲಿರುವಂತಿದೆ. ಒಂದಷ್ಟು ಕ್ಷಣ ಮೌನವಾಗಿ ಸಮುದ್ರವನ್ನು ನೋಡುತ್ತಾ, ಮತ್ತೆ ದಿಮ್ಸಾಲ್ ಗುನುಗಲು ಪ್ರಾರಂಭಿಸುತ್ತಾನೆ.

CUT TO:

ಕಾರ್ಮಿಕರು ಗಾಣ ದೂಗುವ ಹಾಗು ಹಡಗನ್ನು ಎಳೆಯುವ ಕೆಲವೊಂದು cutin shotsಗಳಿಂದ opening credits ಪ್ರಾರಂಭವಾಗುತ್ತದೆ

INT. NIGHT: LADIES HOSTEL

ರೆಜಿನಾಳ ಕೈಗಳು ಕಾಲಿ ಹಾಳೆಯ ಮೇಲೆ ಬರೆಯುತ್ತಿರುವ close ups. ರೆಜಿನ ಒಬ್ಬಳು ಪತ್ರಕರ್ತೆ. ಅವಳು ಒಂದು article ಬರೆಯುತ್ತಿದ್ದಾಳೆ. Table ಮೇಲೆ ಪುಸ್ತಕಗಳು, ಕೆಲವೊಂದು photos, table lamp, voice recorder ಹಾಗು ಅರ್ಧ ಕುಡಿದಿರುವ coffee cup ಇರುತ್ತದೆ.

ರೆಜಿನ (VOICE OVER)
ಅದು ನನ್ ಹುಟ್ಟೂರು. ಮಲ್ಪೆ. ಅರಭಿ ಸಮುದ್ರ ತೀರದಲ್ಲಿರುವ, ಕರಾವಳಿಯ ಒಂದು ಪ್ರಮುಖವಾದ ಮೀನುಗಾರಿಕಾ ಊರು. ಸಮುದ್ರದ ಅಲೆಗಳು ತನ್ನ ದಡವನ್ನು ದಿನವೂ ಸ್ವಚ್ಛಗೊಳಿಸುವಂತಹ ಊರು. ಆದರೆ ಅಲೆಗಳು ಎಲ್ಲವನ್ನೂ ಮುಟ್ಟಕ್ಕಾಗಲ್ವಲ್ಲಾ?

ರಿಜಿನಾಳ ಮುಖದ extreme close ups

ರೆಜಿನ (VOICE OVER)
ಅವನನ್ನು ನಾನು... ನನ್ನ college ದಿನಗಳಲ್ಲಿ ಒಂದಷ್ಟ್ ಸಲ ಬೇಟಿಯಾಗಿದ್ದೆ. ಅವನು... ನನ್ಮೇಲೆ attract ಆಗಿದ್ದ ಅನ್ಸುತ್ತೆ. ಅಥವಾ... ನನ್ನ irritate ಮಾಡ್ಬೇಕಂತಾನೆ ಹಾಗ್ ಮಾಡಿದ್ನೊ? What would you call that? ಅಥವ ಅವನು ಎಲ್ಲಾರ್ ಜೊತೆ ಹಾಗೆ behave ಮಾಡ್ತಿದ್ನಾ? ಗೊತ್ತಿಲ್ಲ...

CUT TO:

INSERT ಶಂಕರ್ ಪೂಜಾರಿಯ ಮನೆಯ ಅಂಗಳದಲ್ಲಿ, ಶವದ ಸುತ್ತ ಒಣಗಿರುವ ರಕ್ತದ ಕಲೆಗಳ ಮೇಲೆ photo flashಗಳು.

CUT TO:

ರಜಿನಾಳ ಕೈಗಳ close ups

ರೆಜಿನ (VOICE OVER) (CONT.D)
ನಾನು ಊರಿಗ್ ಹೋದಾಗ್ಲೆಲ್ಲ ಕಾಣಿಸ್ ಕೊಳ್ಳೋನು.

Incidentally, ಈ ಘಟನೆ ನಡೆಯೋ ದಿನಾನೂ ಸಿಕ್ಕಿದ್ದ.

EDITOR (VOICE OVER) (CONT.D)

So is it about him? ಈ article... ಅವನ್ ಬಗ್ಗೇನಾ?

Close on ರೆಜಿನ

CUT TO:

INT. DAY: POLICE STATION

Police stationನಲ್ಲಿ, ಸುತ್ತಲು ಹಲವಾರು ಜನರು ಓಡಾಡುತಿರುತ್ತಾರೆ. ಓರ್ವ police constable ಬಂದು ರೆಜಿನಾಳಿಗಾಗಿ ಕೂಗುತ್ತಾನೆ. ಅಲ್ಲಿಯೇ ಪಕ್ಕದಲ್ಲಿ ಕುಳಿತಿದ್ದ ರೆಜಿನ ಎದ್ದು ನಿಲ್ಲುತ್ತಾಳೆ.

CONSTABLE
ರೆಜಿನಾ?

ರೆಜಿನ
ಹೌದು

CONSTABLE
ಆ ಹುಡುಗನ್ನಾ interview ಮಾಡೋಕ್ ಬಂದಿರೋರು ನೀವೇನಾ?

ರೆಜಿನ, ಹೌದು ಅನ್ನುವ ರೀತಿಯಲ್ಲಿ ತಲೆ ಅಲ್ಲಾಡಿಸುತ್ತಾಳೆ

CONSTABLE
ನನ್ ಜೊತೆ ಬನ್ನಿ

ಎಂದು constable ಅಲ್ಲಿಂದ ನಡೆಯುತ್ತಾನೆ. ರೆಜಿನ ಅವನನ್ನು ಹಿಂಬಾಲಿಸಿಕೊಂಡು ಹೋಗುತ್ತಾಳೆ.

ರೆಜಿನ (VOICE OVER) (CONT.D)
ಇಲ್ಲ... ಇಲ್ಲ... ಇದು ಅವನ್ ಬಗ್ಗೆ ಮಾತ್ರ ಅಲ್ಲ.

MALE (VOICE OVER) (CONT.D)
Then why a series? I mean, is it worth it? ಪೂರ್ತಿ ವಿಷಯನ ಒಂದೇ articleನಲ್ ಮುಗ್ಸ ಬಹುದಲ್ವಾ?

REGINA (VOICE OVER) (CONT.D)
ಇಲ್ಲ. ಈ ಒಂದು ಘಟನೆಯ ಹಿಂದೆ ಸುಮಾರು ಕಥೆಗಳು involve ಆಗಿದೆ. Directly and Indirectly. ಬರಿ ಒಂದೆ article ಇಂದ ಎಲ್ಲಾ ಕಥೆಗಳಿಗೆ justification ಕೊಡೊಕ್ಕಾಗಲ್ಲ.

Constable ಮತ್ತು ರೆಜಿನ, ಇಬ್ಬರೂ ನಡೆದು ಕೊಂಡು ದಿನೇಶನ cellಲ್‌ಲನ ಬಳಿ ಬರುತ್ತಾರೆ. ರೆಜಿನ, ದಿನೇಶನನ್ನು ನೋಡಿ smile ಮಾಡುತ್ತಾಳೆ. ತನ್ನ cellಲ್ಲಿನ ಗೋಡೆಗೆ ಅಂಟಿಕೊಂಡಿರುವ cement slabನ ಮೇಲೆ ಕೂತಿರುವ ದಿನೇಶ, ರೆಜಿನಾಳನ್ನು ಕಂಡು uncomfortable feel ಆದರೂ, ಅವಳ smileಲಿಗೆ ಪ್ರತಿಕ್ರಿಯಿಸುತ್ತಾನೆ.

CONSTABLE
Chair ತಂದ್ ಕೊಡ್ಲಾ?

ರೆಜಿನ
ಬೇಡ. Cell open ಮಾಡಿ.

Constable ಒಮ್ಮೆ ದಿನೇಶನ ಕಡೆ ಹಾಗು ಮತ್ತೊಮ್ಮೆ ರೆಜಿನಾಳ ಕಡೆ ನೋಡುತ್ತಾನೆ

ರೆಜಿನ
Its OK. ನನ್ಗವರು ಗೊತ್ತು

ಮನಸ್ಸಿನಲ್ಲಿ ಗೊಂದಲವಿದ್ದರೂ, Constable ರೆಜಿನಾಳಿಗಾಗಿ cell ಬಾಗಿಲನ್ನು ತೆರೆದು ಕೊಡುತ್ತಾನೆ. ರೆಜಿನ ಒಳಗೆ ನಡೆಯುತ್ತಾಳೆ

CUT TO:

INSERT ರೆಜಿನಾ ತನ್ನ hostel roomನ tableನಲ್ಲಿ ಕೂತು ಬರೆಯುವ ದೃಶ್ಯ

EDITOR (VOICE OVER) (CONT.D)
Hmm... And what is your idea?

CUT TO:

ದಿನೇಶ ಭಾವನೆಗಳನ್ನು ಹಿಡಿದಿಟ್ಟುಕೊಳ್ಳಲಾಗದೆ ಅಳುತಿ್ತದ್ದಾನೆ. ರೆಜಿನ, ಅವನು ಸುದಾರಿಸಿಕೊಳ್ಳುವವರೆಗೂ ಕಾಯುತ್ತಾಳೆ. ಸ್ವಲ್ಪ ಹೊತ್ತಿನ ನಂತರ, ದಿನೇಶ ವಾಸ್ಥವತೆಯನ್ನು ಅರಿತು, ಅಳುವುದನ್ನು ನಿಲ್ಲಿಸುತ್ತಾನೆ. ಏನೂ ಹೇಳಲು ತೋಚದೆ ಅವನು

ದಿನೇಶ
Sorry

ರೆಜಿನ
Its OK. ನನಗೆ ಅರ್ಥ ಆಗುತ್ತೆ. ನೀವು time ತೊಗೋಳಿ

ದಿನೇಶ ತನ್ನ ಕಣ್ಣೀರನ್ನ ವರೆಸಿಕೊಳ್ಳುತ್ತಾನೆ,

ರೆಜಿನ (VOICE OVER) (CONT.D)
ನಿಜವಾಗ್ಲೂ ಏನ್ ನಡೀತು ಅಂತ ಯಾಗರ್ಗೂ ಗೊತ್ತಿಲ್ಲ. ಪ್ರತಿಯೊಬ್ರು ಕಥೆ ಕೇಳ್ದಾಗ್ಲೂನು... there is this strange feeling...

Close on ದಿನೇಶ

CUT TO:

INSERT ರೆಜಿನ ತನ್ನ hostel roomನ tableನಲ್ಲಿ ಕೂತು ಬರೆಯುವ ದೃಶ್ಯ.

ರೆಜಿನ (VOICE OVER) (CONT.D)
You feel it is true yet different from the other. ಘಟನೆ ಒಂದೇ ಆದ್ರೂನೂ, ನೋಡಿರುವ ಮುಖಗಳು ಬೇರೆ ಬೇರೆ.

CUT TO:

EXT. DAY: SHANKER POOJARY'S HOUSE

ಶಂಕರ್ ಪೂಜಾರಿ; ಬಿಳಿ ಅಂಗಿ, ಬಿಳಿ ಪಂಚೆ ದರಿಸಿಕೊಂಡು ಆರಾಮ ಕುರುಚಿಯ ಮೇಲೆ ಕುಳಿತಿರುತ್ತಾರೆ. ಎದುರುಗಡೆ ರೆಜಿನ ಕುಳಿತಿರುತ್ತಾಳೆ. Close on ಶಂಕರ್ ಪೂಜಾರಿ, ಹಾಗು camera ನಿಧಾನವಾಗಿ ಹಿಂದಕ್ಕೆ ಚಲಿಸುತ್ತದೆ. ಓರ್ವ ಕೆಲಸದಾಕೆ suggestionನಲ್ಲಿ ಬಂದು ನಿಲ್ಲುತ್ತಾಳೆ. ಯೋಚನಾಮಗ್ನನಾಗಿದ್ದ ಶಂಕರ್ ಪೂಜಾರಿ, ಕೆಲಸದವಳನ್ನು ನೋಡಿ, ನಂತರ ರೆಜಿನಾಳಿಗೆ

ಶಂಕರ್ ಪೂಜಾರಿ
ಎಂತ ಕುಡಿತೀರ? ಚಾನ ಕಾಫಿಯ?

ರೆಜಿನ ಕೆಲಸದಾಕೆಯನ್ನು ನೋಡಿ ಮತ್ತೆ ಶಂಕರ್ ಪೂಜಾರಿಗೆ

ರೆಜಿನ
Coffee

ಶಂಕರ್ ಪೂಜಾರಿ ಕೆಲಸದಾಕೆಗೆ

ಶಂಕರ್ ಪೂಜಾರಿ
ಅರೆಗ್ ಒಂಜಿ ಕಾಫಿ... ಎಂಕ್ ಒಂಜ್ ಚಾ ಕನಲಾ

ಕೆಲಸದಾಕೆ ಹೊರಡುತ್ತಾಳೆ. ಶಂಕರ್ ಪೂಜಾರಿ ಯೋಚನಾ ಮಗ್ನನಾಗುತ್ತಾನೆ. Wide shotಗೆ cut ಆಗುತ್ತದೆ.

ರೆಜಿನ (VOICE OVER) (CONT.D)
Perspectives. ಯಾವ್ದುದ ಸರಿ... ಯಾರ್ ಸರಿ...

CUT TO:

INSERT ರೆಜಿನಾ ತನ್ನ hostel roomನ tableನಲ್ಲಿ ಕೂತು ಬರೆಯುವ ದೃಶ್ಯ.

ರೆಜಿನ (VOICE OVER) (CONT.D)
...ಅವರವರ ದೃಷ್ಟಿಕೋನದಲ್ಲಿ ನಿಂತು ನೋಡ್ದಾಗ ಎಲ್ಲಾನು ಬದಲಾಗುತ್ತೆ. So how am I suppose to come to a conclusion? In fact ನಾನೆ ಒಂದು conclusion ಕೊಟ್ಕೊಂಡು ಕಥೆ ಹೇಳಿದ್ರೆ ಅದು ತಪ್ಪಾಗ್ಬಹುದು.

CUT TO:

INT. DAY: TIMES OF INDIA / EDITOR'S OFFICE

Medium shot on ರೆಜಿನ

ರೆಜಿನ
ಅದ್ರ ಬದ್ಲು... ಯಾವೊಂದು ಚಿಕ್ಕ ಅಂಶಗಳನ್ನು ಬಿಡದೆ, ಅವರವರ ದೃಷ್ಟಿಕೋನದಲ್ಲಿ, ಅವರವರು ಹೇಳಿದಹಾಗೆ ಕಥೆ ಹೇಳಿದ್ರೆ, ಓದುಗರಿಗೆ ಅವರದ್ದೇ ಆದ ಉತ್ತರ ಸಿಗುತ್ತೆ ಅನ್ಸುತ್ತೆ.

Close to the Editor. ಸ್ವಲ್ಪ ಆಲೋಚಿಸಿ

EDITOR
Fair enough. So ಎಷ್ಟ್ article ಬರೀಬೇಕು ಅಂತಿದ್ಯಾ?

ಅವನ ಮುಂದೆ ಕುಳಿತಿರುವ ರೆಜಿನ.

ರೆಜಿನ
ಗೊತ್ತಿಲ್ಲ... 5... ಅಥವಾ 6. It all depends

EDITOR
Hmmm... ಸರಿ. Tuesday editionಗೆ ಮುಂದಿನ 6 article ಬರಿ. We will freeze on that. Hope that will do?

ರೆಜಿನ ಖುಷಿಯನ್ನು ವ್ಯಕ್ತ ಪಡಿಸುತ್ತ

ರೆಜಿನ
Thank you so much

EDITOR
It is your first write up. What would you call it?

ರೆಜಿನಾ ಯೋಚನಾ ಮಗ್ನಳಾಗುತ್ತಾಳೆ

CUT TO:

INSERT ಶಂಕರ್ ಪೂಜಾರಿ ಯೋಚನಾ ಮಗ್ನನಾಗಿದ್ದಾನೆ. ಅವನು ವಾಸ್ತವಕ್ಕೆ ಬಂದು ರೆಜಿನಾಳನ್ನು ಕಂಡು ತನ್ನ ಮೌನ ಮುರಿಯುತ್ತಾ

ಶಂಕರ್ ಪೂಜಾರಿ
ನನ್ಗೊತ್ತಿರುದೆಲ್ಲ ನಿಂಮ್ಗೆ ಹೇಳ್ತೆನೆ

CUT TO:

INSERT ದಿನೇಶ ಅವನ ಸೆಲ್ಲಿನಲ್ಲಿ

ದಿನೇಶ
ನಾನ್ ನೋಡಿರೋದನ್ನೆಲ್ಲ ಹೇಳ್ತೀನಿ

CUT TO:

INSERT ಶೈಲು ಅವನ ಮನೆಯ ರೂಮಿನಲ್ಲಿ

ಶೈಲು
ನನ್ಗೆಂತ ಗೊತ್ತಿತ್ ಅದನ್ ಹೇಳ್ತೆ

CUT TO:

INSERT ಬಾಲು bus standನಲ್ಲಿ ಅವನ ಪಕ್ಕದಲ್ಲಿರುವ ಕೊರಗನಿಗೆ ಬೈಯುತ್ತ,

ಬಾಲು
ಬೋಸುಡಿ. ನಿಂಗ್ ಎಂತ ಗುತಿತಾ? ನೀ ಸುಮ್ಮನ್ ಕೂತ್ಕೊ.
(ರೆಜಿನಾಳಿಗೆ) ನಾ ಹೇಳ್ತೆ...

CUT TO:

INSERT Democracy, ಓರ್ವ ಹತ್ತು ವರ್ಷದ ಬಾಲಕ, ಶಾರದಾಳ ಮನೆಯ ಆಚೆ, ice cream ಚೀಪುತ್ತಿದ್ದಾನೆ. ಶಾರದಾಳು ಅವನ ಜೊತೆ ಇದ್ದಾಳೆ. Democracy 'ಹೇಳ್ತೀನಿ' ಅನ್ನುವ ರೀತಿಯಲ್ಲಿ ತಲೆ ಅಲ್ಲಾಡಿಸುತ್ತಾನೆ.

CUT TO:

INSERT Mid shot on ರೆಜಿನ, ಯೋಚನಾ ಮಗ್ನಳಾಗಿದ್ದಾಳೆ. Suggestionನಲ್ಲಿ Editor ಕೈ desk ಬಡಿದು ಅವಳ ಗಮನ ಸೆಳೆಯುತ್ತಾ

EDITOR
ರೆಜಿನಾ? ಈ articleಗೆ ಏನ್ ಹೆಸರಿಡ್ತೀಯ ಅಂತ ಕೇಳ್ದೆ?

REGINA

I will call it...

CUT TO:

INSERT Close on ರೆಜಿನ ತನ್ನ pen ಅನ್ನು ಮುಖದ ಹತ್ತಿರ ಇಟ್ಟು ಯೋಚಿಸಿ, Close on ರೆಜಿನಾಳ ಕೈ, ಒಂದು ಹೊಸ ಹಾಳೆಯನ್ನು ಮೇಲಿಟ್ಟು, ಅದರ ಮೇಲೆ 'As seen by the rest' ಎಂದು ಬರೆಯುತ್ತಾಳೆ.

REGINA (VOICE OVER) (CONT.D)
... 'As seen by the rest'

DISSOLVES TO:

Film title 'ಉಳಿದವರು ಕಂಡಂತೆ' ಪರದೆಯ ಮೇಲೆ ಬರುತ್ತದೆ.

CUT TO:

INSERT ರೆಜಿನಾಳ hostel roomನಲ್ಲಿ ಎರಡು photoಗಳು; ಒಂದು ಹೊಸ ಹಾಗು ಇನ್ನೊಂದು ಹಳೆಯದು; ಒಂದರ ಪಕ್ಕ ಇನ್ನೊಂದು ಮೇಜಿನ ಮೇಲೆ ಇರುತ್ತದೆ. Table lampನ light ತುಂಬ bright ಆಗಿ photoಗಳ ಮೇಲೆ ಬೀಳುತ್ತಿರುವುದರಿಂದ, ಅದರಲ್ಲಿರು ಚಿತ್ರಗಳು ಸರಿಯಾಗಿ ಕಾಣಿಸುತ್ತಿರುವುದಿಲ್ಲ. ಇನ್ನಷ್ಟು photo ಮತ್ತು ಹಾಳೆಗಳು table ಮೇಲೆ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ.

CUT TO:

INT/EXT. DAY: CHURCH

12 ವರ್ಷದ ಬಾಲಕ ರಿಚ್ಚಿ ಚರ್ಚಿಗೆ ಬರುತ್ತಾನೆ. ಆ ಚರ್ಚಿನ ಪಾದ್ರಿ, ರಿಚ್ಚಿಯ ತಂದೆ; ಒರ್ವ ಗಂಭೀರ ವ್ಯಕ್ತಿತ್ವದ, ಮುಖದಲ್ಲಿ ಮೀಸೆ ಹಾಗು ಕಾಕಿ ಪ್ಯಾಂಟ್, polo t-shirt ಹಾಕಿರುವವನ ಜೊತೆ ಮಾತನಾಡುತ್ತಿರುತ್ತಾರೆ. ರಿಚ್ಚಿ ಅವರಿಬ್ಬರ ಹತ್ತಿರ ಬರುತ್ತಿದ್ದಂತೆಯೇ, ಅವರಿಬ್ಬರ ಗಮನ ರಿಚ್ಚಿಯ ಕಡೆ ಹೋಗುತ್ತದೆ. ಕಾಕಿ ಪ್ಯಾಂಟ್ ದರಿಸಿದ ವ್ಯಕ್ತಿ ರಿಚ್ಚಿಯನ್ನ ನೋಡಿ, ಅವನ ಕಡೆಗೆ ನಡೆಯುತ್ತಾನೆ. ರಿಚ್ಚಿಗೆ ಏನೋ ಅರಿವಾಗುತ್ತದೆ. ಅವನ ಕಡೆಗೆ ಬರುತ್ತಿರುವ ವ್ಯಕ್ತಿ Police Inspector ಎಂದು ತಿಳಿಯುತ್ತಿದ್ದಂತೆಯೇ ಓಡಲು ಪ್ರಾರಂಭಿಸುತ್ತಾನೆ.

CUT TO:

ರಿಚ್ಚಿ ಚರ್ಚಿನ ಹೊರಾಂಗಣದಲ್ಲಿರುವ ದೊಡ್ಡದೊಂದು ಮೈದಾನದ ಕಡೆ ಓಡಿ ಬರುತ್ತಾನೆ. ಅವನ ಹಿಂದೆ ಓಡಿ ಬರುವ Police Inspectorನ ಕೂಗನ್ನು ಕೇಳಿ, ಅಲ್ಲಿಯೇ ನಿಂತಿರುವ ಇಬ್ಬರು constableಗಳು ರಿಚ್ಚಿಯನ್ನು ಹಿಡಿಯಲು ಪ್ರಯತ್ನಿಸುತ್ತಾರೆ.

Knock Knock Track ಪ್ರಾರಂಭವಾಗುತ್ತದೆ

10 ವರ್ಷದ ಬಾಲಕಿ ರೆಜಿನ, ಚರ್ಚಿನ ಪಕ್ಕದಲ್ಲಿ ಚಲಿಸುತ್ತಿರುವ Ambassador ಕಾರಿನ ಹಿಂದಿನ seatನಲ್ಲಿ ಕುಳಿತು, 70ರ ದಶಕದ cameraದ ಜೊತೆ ಆಡುತ್ತಿದ್ದಾಳೆ. ಅವಳ ತಂದೆ ತಾಯಿ ಕಾರಿನ ಮುಂಭಾಗದಲ್ಲಿ ಕುಳಿತಿದ್ದಾರೆ. ರೆಜಿನಾಳ ಗಮನ ಓಡುತ್ತಿರುವ ರಿಚ್ಚಿಯ ಕಡೆ ಹೋಗುತ್ತಿದ್ದಂತೆಯೇ, ಅವಳು ಕಾರಿನ ಕಿಟಕಿಯ ಬಳಿ ಬಂದು ಉತ್ಸುಕಳಾಗಿ ನೋಡುತ್ತಾಳೆ. ಮೈದಾನದ ಮೂಲಕ ಚರ್ಚಿನ ಕಡೆ ಕಾರ್ ಬರುತ್ತಿದ್ದಂತೆಯೇ, ಇಬ್ಬರು constableಗಳು ರಿಚ್ಚಿಯನ್ನು ಹಿಡಿದು ಜೀಪಿನ ಕಡೆಗೆ ಎಳೆದೊಯ್ಯುತ್ತಾರೆ. ಚರ್ಚಿನ ಮುಂಭಾಗದಲ್ಲಿ ಕಾರ್ ಬಂದು ನಿಲ್ಲುತ್ತಿದ್ದಂತೆಯೇ, ರೆಜಿನ ತನ್ನ ಕತ್ತಿನಲ್ಲಿ ನೇತಾಡುತ್ತಿರುವ ಕ್ಯಾಮರಾದೊಂದಿಗೆ ಕೆಳಗಿಳಿಯುತ್ತಾಳೆ. ಜೀಪಿನೊಳಗೆ ತಳ್ಳಲ್ಪಡುತ್ತಿರುವ ರಿಚ್ಚಿಯು ತಂದೆಯನ್ನು ನೋಡುತ್ತಾನೆ. Police Inspector ತಂದೆಯ ಬಳಿ ಮಾತನಾಡುತ್ತಿದ್ದರೂ, ತಂದೆಯ ಗಮನ ರಿಚ್ಚಿಯ ಕಡೆಗೆ ಇರುತ್ತದೆ. ತನಗೆ ತಂದೆಯ ಸಹಾಯ ಸಿಗುವುದಿಲ್ಲವೆಂದು ರಿಚ್ಚಿಗೆ ಅರಿವಾಗಿ, ಅವನು ತಪ್ಪಿಸಿಕೊಳ್ಳಲು ಇನ್ನಷ್ಟು ಪ್ರಯತ್ನಿಸುತ್ತಿರುವಾಗ ಅವನ ಗಮನ ರೆಜಿನಾಳ ಕಡೆಗೆ ಹೋಗುತ್ತದೆ. ರೆಜಿನ ತನ್ನ ಕೈಯಲ್ಲಿ camera ಹಿಡಿದುಕೊಂಡು ಆ ಸನ್ನಿವೇಶವನ್ನು ನೋಡುತ್ತಿದ್ದಾಳೆ. ರಿಚ್ಚಿ ಅವಳನ್ನು ಕಂಡು ಗುರಾಯಿಸುತ್ತಾನೆ. ರೆಜಿನ ನಿರ್ಲಿಪ್ತಳಾಗಿ ನೋಡುತ್ತಾಳೆ. ಇದನ್ನು ಕಂಡ ರಿಚ್ಚಿ, ಓಡಲು ಪ್ರಯತ್ನಿಸುವುದನ್ನು ನಿಲ್ಲಿಸದೆ, ಇನ್ನಷ್ಟು ಗುರಾಯಿಸುತ್ತಾನೆ. ಆಗ ರೆಜಿನ, ರಿಚ್ಚಿಯ ಮುಖಭಾವವನ್ನು ನೋಡಿ ನಗುತ್ತಾ, ತನ್ನ cameraವನ್ನು ಎತ್ತಿ ಹಿಡಿದು ಅವನ photo ತೆಗೆಯುತ್ತಾಳೆ. Cameraದ flashಗೆ flash out ಆದರೆ, ತನ್ನ ಪ್ರಯತ್ನವನ್ನು ನಿಲ್ಲಿಸುವ ರಿಚ್ಚಿಯನ್ನು seatನಲ್ಲಿ ಕೂರಿಸಿಕೊಂಡ

police ಜೀಪು, ನಿಧಾನವಾಗಿ ನಮ್ಮಿಂದ ದೂರ ಸಾಗುತ್ತದೆ. Camera ನಿದಾನವಾಗಿ ರೆಜಿನಾಳಕಡೆಯಿಂದ ದೂರ ಚಲಿಸುತ್ತದೆ.

CUT TO:

End of Opening Credits

INT. DAY: LADIES HOSTEL/ CORRIDOR

Close on ರೆಜಿನಾಳ ಕೈಯಲ್ಲಿರುವ voice recorderಅನ್ನು ON ಮಾಡಿ, ಅದರಿಂದ ಬರುತ್ತಿರುವ ಶೈಲುವಿನ ಮಾತುಗಳನ್ನು ಕೇಳುತ್ತಾ, corridorನಲ್ಲಿ ಸುತ್ತಾಡುತ್ತಾಳೆ.

ಶೈಲು (VOICE)
ರಿಚ್ಚಿ... ಶಣ್ಣಿಂದ್ ಭಯಂಕರ ರಫ್ ಅಂವ. 12 ವರ್ಷ ಇಪ್ಪತ್ತಿಗೆ ಅವನ್ ದೋಸ್ತಿ ರಾಘುಗ್ ಅಂದೇಳಿ ಒಬ್ಬನ್ ಚೂರಿಹಾಕಿ ಕೊಂದೆ ಹಾಕ್ದ. ರಾಘು ಕಡಿಕ್ ಓಡಿ ಹೋದನ್, ಎಲ್ ಹೋದ ಅಂದೇಳೆ ಗೊತ್ತಿಲ್ಲ. ರಿಚ್ಚಿನ್ ಕಡಿಕ್ ತೆಕಂಡ್ ಹೋಯಿ ರಿಮಾಂಡ್ ಹೋಮಿಗ್ ಹಾಕ್ರ್‍ಯ...

Close on ರೆಜಿನ ತನ್ನ ಹಳೆಯ ನೆನಪುಗಳನ್ನು ಮೆಲುಕು ಹಾಕುವಂತೆ ಕಾಣುತ್ತದೆ. Silence.

ರೆಜಿನ (VOICE)
ಆಮೇಲೆ? ಆಮೇಲೇನಾಯ್ತು?

CUT TO:

INT. DAY: SHAILU'S HOUSE / ROOM

ಶೈಲು chair ಮೇಲೆ ಕೂತಿರುತ್ತಾನೆ. ರೆಜಿನ ಅವನ ಮಾತುಗಳನ್ನು record ಮಾಡಲು voice recorder ಹಿಡಿದು ಅವನ ಮುಂದೆ ಕುಳಿತಿರುತ್ತಾಳೆ.

ಶೈಲು
ಆಮೇಲೆ 8 ವರ್ಷದ್ ಮೇಲೆ ರಿಚ್ಚಿನ ರಿಮಾಂಡ್ ಹೋಮ್ನಿಂದ ರಿಲೀಸ್ ಮಾಡ್ರೇ... ಕಡಿಕ್ ಅಂವ ವಾಪಾಸ್ ಮಲ್ಪೆಗ್ ಬಂದ. ಬಂದನ್ ರಾಘುನ ಸುಮಾರ್ ಬದಿಯಾಗ್ ಹುಡ್ಕ್ದ ಅಂಬ್ರ್‍ಯ. ಆರೆ... ರಾಘು ಪತ್ತೆ ಇಲ್ಲಿಯೇ.

ರೆಜಿನ
ಮತ್ತೆ ರಾಘು ಎಲ್ಲಿದ್ದಾನೆ ಅಂತ ನಿಮಗ್ ಹೆಂಗ್ ಗೊತ್ತಾಯಿತು?

ಶೈಲು
ನಂಗೆಲ್ ಗೊತ್ತಿದ್ದೀತ್? ಬೊಂಬಾಯ್ಗ್ ಹೋಪಲೊರಿಗೆ ನಂಗು ಗೊತ್ತಿಲರ್ಲಾ... Actually ಎಂತ ಆಯಿತಂದ್ರೆ, ಈ ಗೋಯ್ ಬೀಜ ಬತ್ತಲ್ಲ... ಒಬ್ಬ ಬ್ಯೆಯ್ಯಗರ್ಗೆ ಶ್ಯಾಂಪಲ್ ತೋಸರ್ಸುಕೆ ಬೊಂಬಾಯಿಗ್ ಹೋಯಿನ್ನೆ. ಅಂವ ಅದನ್ ಹೊಗರ್ಗೆ export ಮಾಡ್ತ್ನಂಬ್ರ್‍ಯ. ಅವನಿಗ್ ನಮ್ ರಾಘು ಗುರ್ತ. ಒಂದಿನ ರಾತ್ರಿ ಉಂಬುಕ್ ಅಂದೇಳಿ ಲೇಡಿಸ್ ಬಾರಿಗೆ ಹೋಯ್ ಕಣಿ, ಅಲ್ಲ್ ರಾಘು ಬಂದಿದ. Pirst Pirst ನಂಗ್ ಗುರ್ತೆ ಆಯಿಲ್ಲ ಮರ್‍ರೆ. 15 ವರ್ಷ ಆಯ್ತ್ ಕಣಿ ಕಂಡ್... ನಾನ್ ಮಲ್ಪೆಗ್ ಕೆಲ್ಸಕ್ ಬಂದಳಿಕೆ, ಅಂವ ಇನ್ನು ಚಣ್ಣ್ ಗಂಡೆ. ಮಾತಾಡ್ತಾ ಮಾತಾಡ್ತಾ ನಾನ್ ಉಡುಪಿಯಂವ ಅಂದೇಳಿ ಹೇಳ್ರ್‍ಯ ಮೇಲೆ, ಅಂವ ನನ್ನೆ ಗುರ್ತಿಡ್ದ.

ರೆಜಿನ
ಈ 15 ವರ್ಷದಲ್ಲಿ ಅವನಿಗೆ ವಾಪಸ್ ಬಬರ್ಬೇಕು ಅಂತ ಅನ್ನಿಸ್ಲೇ ಇಲ್ವಾ?

ಶೈಲು
ಬಪ್ಪನೆ ಅಲ್ಲ ಅಂವ... ಇಲ್ಲಿದ್ ಬರೀ ಕೆಟ್ ನೆನ್ಪೇ ಮರ್ರೆ ಅಂವಂಗೆ... ಬೊಂಬಾಯಿದೆಲ್ಲಾ ಒಳ್ಳೆ ನೆನ್ಪ್ ಉಳ್ಕಂಡಿತ್ ಅಂದೇಳಿ ಅಲ್ಲ... ಆರೆ, ಮನ್ಶಾ ಎಷ್ಟ್ ಸಲ ಅವನ್ ನೆನ್ಪಿಂದ್ ದೂರ ಓಡುಕಾತ್ ಹೇಳಿ?

ರೆಜಿನ
ಬಾಂಬೆಲ್ ಅವನು ಏನ್ ಮಾಡ್ತಿದ್ದಾ?

ಶೈಲು
ಓಡಿ ಹೋಪತಿಗೆ... ಅವನಿಗ್ ಇನ್ನು 14 ವರ್ಷ್ವೆ. ಬೊಂಬಾಯ್ ಪೋರ್ಟಂಗೆ, ಒಂದ್ ಶಣ್ ಕ್ಯಾಂಟಿನಗ್ ಕ್ಲೀನರ್ ಆಯಿ ಇದ್ದಿದ್ದ ಅಂಬ್ರ. ಸ್ವಲ್ಪ ವರ್ಷಗೆ, ಅದೇ ಕ್ಯಾಂಟಿನೆಗೆ ಕ್ಯಾಶರ್ ಆನೆ. ಲೆಕ್ಕಾಗ್ ಹುಷಾರಿದ್ನಲೆ. ಈ ಬಾಂಬೆ ಪೋರ್ಟಗೆ ಚಣ್ ಚಣ್ ಸ್ಮಗ್ಲಿಂಗ್ ಮಾಡ್ತ್ ಕಣೀ, ಹಗೂರ್ಕ್ ಅವರೊಟ್ಟಿಗ್ ಸೇರ್ಕಂಡ. ಕಡೀಕ್ ಒಂದಿನ, ಈ ಸೇನದರ್ ಒಬ್ರದ್ ಮಂಡಿ ಒಡ್ದಾಕಿ ನಂಬ್ರ ಮಾಡ್ಕಂಡ್ನೆ ಹೋಯ್...

ರೆಜಿನ
ಯಾಕೆ?

ಶೈಲು
ಎಂತದೊ ದುಡ್ಡಿನ್ ವಿಷ್ಯಕ್ ಅಂಬ್ರ. ಸ್ಮಗ್ಲಿಂಗಗೆ ಒಂದಿಷ್ಟ್ ದುಡ್ ಮಾಡಿದ್ನಲೆ... ಅಂವ ಬಂದ್ ಇವನತ್ರಾ ಹಪ್ತ ಕೇಂಡ. ಕೊಡುದಿಲ್ಲಾಂದೇಳಿ ಇಂವ ಮಂಡಿ ಒಡ್ದೇ ಹಾಕ್ಲಕ್ಕಾ ಮರ್ರೆ? ಹೋಯ್... ಅಂವ ಅಲ್ಲೆ ಪಡ್ಚ. ಇಷ್ಟ್ ಅಮೆರ್ಮೇಲೆ, ಅವನ್ ಕಡಿಯರಿಂದ ತಪ್ಸ್ಕಂಬ್ಕೆ ಬೇರೆ ಗ್ಯಾಂಗಿನರ್ ಜತಿ ಸೇರ್ಕಂಡ. ಅವ್ರೊಟ್ಟಿಗೆ ಇದ್ದ್ ಇದ್ದ್... ಕಡಿಕ್ ಅದ್ರಿಂದ ಹೊರಗ್ ಬಪ್ಕೆ ಆಯಿಲ್ಯೇ.

ರೆಜಿನ
ಹ್ಮ್...

ರೆಜಿನ Purseನಿಂದ ಒಂದು note pad ಮತ್ತು pen ತೆಗೆದು ಅದರಲ್ಲಿ note ಮಾಡುವಂತೆ

ರೆಜಿನ
ನೀವು ಅವನನ್ನ Bombayನಲ್ಲಿ ಯಾವ್ ladies barನಲ್ಲಿ meet ಮಾಡಿದ್ರಿ...

ಶೈಲು ladies barನ ಹೆಸರನ್ನು ಯೋಚಿಸಲ್ಲು ಶುರುಮಾಡುತ್ತಾನೆ. ರೆಜಿನ ಕಾಯುವಳು. ಶೈಲು ಸಂಕೋಚ ಪಟ್ಟು

ಶೈಲು
ಅದ್... ಮೂರ್ ನಾಲ್ಕ್ ladies ಬಾರಿಗೆ ಕಾಯಮ್ ಹೊತಿರ್ತ್ನಲೆ, ನೀವ್ ರಪ್ಪ ಅಂದೇಳಿ ಕೇಂಡ್ರೆ ಹ್ಯಾಂಗ್ ಹೇಳುದ್?

ಎಂದು ಹೇಳಿ ಮತ್ತೊಮ್ಮೆ ಯೋಚಿಸಿ

ಶೈಲು
ಅದ್ ರೂಪ ladies ಬಾರಾ ಅಂದೇಳಿ

ರೆಜಿನ note down ಮಾಡಿಕೊಳ್ಳುತ್ತಿರುವಹಾಗೆಯೆ background ನಲ್ಲಿ ladies bar ambiance sound ಶುರುವಾಗುತ್ತದೆ. Note padನ ಮತ್ತೆ purse ಒಳಗೆ ಇಡುತ್ತ

ರೆಜಿನ

ಇದಾಗಿ ಸುಮಾರ್ ಎಷ್ಟ್ ಸಮಯ ಆಯ್ಸುತ?

ಶೈಲು
ಒಂದ್ ವರ್ಷದ್ ಈಚೆಗೆ ಇಕರ್ಕೆ

CUT TO:

INSERT ರೆಜಿನ voice recorder ನೊಂದಿಗೆ corridorನಿಂದ ಅವಳ roomನ ಕಡೆಗೆ ಹೊರಡುತ್ತಾಳೆ.

CUT TO:

INSERT Ladies Barನಲ್ಲಿ ಇಬ್ಬರು ಹುಡುಗಿಯರು ಕುಣಿಯುತ್ತಿದ್ದಾರೆ

CUT TO:

INSERT 14 ವರ್ಷದ ರಾಘು canteenನಲ್ಲಿ cleaner ಕೆಲಸ ಮಾಡುತ್ತಿದ್ದಾನೆ

CUT TO:

INSERT ರೆಜಿನ ನಡೆದು ಕೊಂಡು ಹೋಗುತ್ತಿದ್ದಾಳೆ; 21 ವರ್ಷದ ರಾಘು canteenನ counterನಲ್ಲಿ cash count ಮಾಡುತ್ತ ತನ್ನ ಬಲಕ್ಕೆ ತಿರುಗಿ harbor ಕಡೆಗೆ ನೋಡುತ್ತಾನೆ. Boatನ horn ಶಬ್ದ ಕೇಳಿಬರುತ್ತದೆ; ರಾತ್ರಿ, ಬೆಳಕಿನ ವಿರುದ್ಧ, back shot ನಿಂದ ಶುರುವಾಗಿ, ರಾಘು ತನ್ನ ಸುತ್ತಲೂ ನೋಡುತ್ತ ಹಡಗಿಗೆ signal ಕೊಡುತ್ತಿರುವನು; Ladies barನ ಕೆಲವೊಂದು ದೃಶ್ಯಗಳು; ರೆಜಿನ ನಡೆದುಕೊಂಡು ಹೋಗುವುದು; ರಾಘು bottleನಿಂದ ಓರ್ವನ ತಲೆ ಒಡೆಯುವುದು; ರೆಜಿನ ನಡೆದುಕೊಂಡು ಹೋಗುವುದು; close on ರಾಘು ladies barನಲ್ಲಿ ತಂದೆಯ ವಿಚಾರ ತಿಳಿದು ದುಕ್ಕದಲ್ಲಿ ಕುಳಿತಿದ್ದಾನೆ. Wide shotಗೆ cut ಆದರೆ ಅವನ ಪಕ್ಕದಲ್ಲಿ ಶೈಲು ಕುಳಿತಿದ್ದಾನೆ

ಶೈಲು (VOICE)
ಆದಿನ ನಾವ್ ಮಸ್ತ್ ಮಾತಾಡ್ತ. ಮತಾಡ್ತ ಮತಾಡ್ತ, ಅವ್ನ್ ಅಪಯ್ಯ ತೀಕರ್ಕೊಂಡ್ ವಿಶಯ ಹೇಳ್ದ. ಭಯಂಕರ ಬೇಜಾರ್ ಮಾಡ್ಕಂಡ. ಮರ್ದಿನ ಬೆಳ್ಗಿನಜಾವ ಬೊಂಬಾಯ್ ಬಂದರಗ್ ಒಬ್ನೆ ಸಿಕ್ಕುಕ್ ಹೇಳ್ದ.

ರೆಜಿನ ಅವಳ hostel roomನಲ್ಲಿರುವ ಮೇಜಿನ ಬಳಿ ಬಂದು ನಿಲ್ಲುತ್ತಾಳೆ. ಮೇಜಿನ ಮೇಲಿರುವ card boardನಿಂದ ಒಂದು ಕಾಲಿ ಹಾಳೆಯನ್ನು ತೆಗೆದು, ಅಲ್ಲೆ ಪಕ್ಕದಲ್ಲಿರುವ penನನ್ನು ತೆಗೆದು, ಹಾಳೆಯ ಮೇಲೆ 'Chapter 1: Voice of Silence' ಎಂದು ಬರೆಯುತ್ತಾಳೆ.

CUT TO:

EXT. DAY: BOMBAY HARBOR/ ROOF TOP

Back two shot of ರಾಘು ಮತ್ತು ಶೈಲು. ಒಂದು buildingನ ಮೇಲಿರುವ cement tankನ ಮೇಲೆ ಕುಳಿತಿರುತ್ತಾರೆ. ಆಗ screenನ ಮೇಲೆ, 'ಭಾಗ ೧: ಮೌನದ ಮಾತು' ಎಂದು ಬರುತ್ತದೆ. Camera ನಿಧಾನವಾಗಿ ಅವರ ಕಡೆ ಚಲಿಸಿ, ಒಂದು ಕಡೆ ನಿಲ್ಲುತ್ತಿದ್ದಂತೆಯೇ, ರಾಘು ಮೌನ ಮುರಿಯುತ್ತಾನೆ

ರಾಘು
ಯಾವಾಗಾಯ್ತು?

ಶೈಲು
ನಾಕ್ ವರ್ಷ ಆಯ್ತ್. Liver cancer ಅಂಬ್ರ. ನೀನ್ ಓಡಿಹೋದ್ ಬೇಜರೆಗ್, ಕುಡೂದ್ ಜಾಸ್ತಿ ಮಾಡ್ದರ್, ನಿಲ್ಸ್ಲೇ ಇಲ್ಲ.

ರಾಘು
ಅಮ್ಮ?

ಶೈಲು
ಪಾಪ ಇದ್ರ್. ನಾನ್ ಕಾಣ್ದೆ ಸುಮಾರ್ time ಆಯ್ತ್. ಪ್ಯಾಟಿಗೆ ಮೀನ್ ತೆಕಂಬ್ಕ್ ಹೋದಳಿಕ್ಕೆಲ್ಲ ಸಿಕ್ತಿದಿರ್.

ರಾಘು ಸ್ವಲ್ಪ ಹೊತ್ತು ಮೌನವಾಗುತ್ತಾನೆ

ರಾಘು
ಆರಾಮಾಗಿದ್ದಾರ?

ಶೈಲು
ಗೊತ್ತಿಲ್ಲ. ಒಬ್ರೆ ಇಪ್ಪುದಲೆ. ಆರಾಮ ಇಪ್ಪುಕ್ ಹ್ಯಾಂಗ್ ಆತ್ ಮಾರಾಯ?

ರಾಘು ಮೌನವಾಗುತ್ತಾನೆ. ಅದನ್ನು ಕಂಡು ಶೈಲು ಸ್ವಲ್ಪ ಹೊತ್ತು ಮೌನವಾಗಿದ್ದು, ನಂತರ

ಶೈಲು
ಊರಿಗ್ ವಾಪಸ್ ಬಪ್ಪಿಲೆ ಮಾರಾಯ?

ರಾಘು
ಎಲ್ಲಿ... ಮಲ್ಪೆಗಾ? ಅಲ್ಲಿಗೆ ಬಂದು ಎಂತ ಮಾಡ್ಲಿ?

ಶೈಲು
ಯವ್ವಾರು ವ್ಯವಾರ ಮಾಡ್ಲಕ್ಕಲೆ?

ರಾಘು ಅವನ ಮಾತಿಗೆ smile ಮಾಡುತ್ತಾನೆ

ರಾಘು
ಅಷ್ಟು ಸುಲಭ ಇಲ್ಲ. ನಾನು Bombay ಬಿಟ್ಟು ಹೋದ್ರೆ, ಅವ್ರುರ ನನ್ನನ್ನು ಹುಡ್ಕೊಂಡ್ ಬರ್ತರೆ?

ಶೈಲು
ಯಾರ್?

ರಾಘು
ನನ್ನ್ ಒಟ್ಟಿಗೆ ಕೆಲ್ಸ ಮಾಡುವವರು. ಅವರ ಸುಮಾರು secretsಗಳು ನನ್ಗೊತ್ತುಂಟು. ಇನ್ನ್ ಮುಂದೆ ಅವರ್ ಒಟ್ಟಿಗೆ ಕೆಲ್ಸ ಮಾಡುದಿಲ್ಲ ಅಂತ ಹೇಳಿದ್ರೆ, ಅದು ಅವರಿಗೆ ಇಷ್ಟ ಆಗ್ಲಿಕಿಲ್ಲ.

ಶೈಲು
ಹಂಗಾರ್ ಅಬ್ಬಿನ್ ಇಲ್ಲಿಗ್ ಕರ್ಕಬಾ

ರಾಘು
ಈ ನರ್ಕಕ್ಕಾ? ಅವರಿಗೆ ನಾನಿಲ್ಲದೆ ಈಗ ಅಭ್ಯಾಸ ಆಗಿರ್ತದೆ. ಹಾಗೆ ನಡ್ಕೊಂಡ್ ಹೋಗ್ಲಿ

ಶೈಲು
ಹ್ಮ್...

Silence

ರಾಘು
ಉಳಿದವರೆಲ್ಲ ಹೇಗಿದ್ದಾರೆ?

ಶ್ಯೆಲು
ಉಳ್ದರ್ ಅಂದ್ರೆ?

ರಾಘು
ಸುಕುಮಾರ, ಸಭಾಷ್ಟಿನ್, ಸುಧಿ, ಸುನೀಲ... ರಿಚ್ಚಿ???

ಶ್ಯೆಲು
ನಾನ್ ಕಂಡಗ್ ಯಾರು ಉಧ್ಧಾರ ಆಯಿಲ್ಯಾ. ಅಂವ ಸುಕುಮಾರ ಮತ್ತೆ ಸಭಾಷ್ಟಿನ್, ದುಬಾಯಿಗ್ ಕೆಲ್ಸ ಮಾಡ್ತಿದ್ರಂಬ್ರ್. ಅದ್ಯಂತ ಕೆಲ್ಸ ಮಾಡ್ರ್ಹೋ? ಈ ದುಬಾಯಿಗ್ ಹೊದರ್ ಹಣಬರ ನಂಗುತಿಲ್ಯಾ? ಆರೆ... ಊರಿಗ್ ಬಪ್ಪತ್ತಿಗ್ ಮಾತ್ರ, cooling glass ಹೈಕಬತ್ರ್ ಕಾಣ್. ಸುನೀಲ... ಊರಂಗೆ ಹೆಸ್ರಿಗೆ ಒಂದ್ studio ಹೈಕಂಡಿದ್ದ. ಮತ್ತ್ ಕಂಡ್ ಕಂಡ್ ಹೆಣ್ಮಕ್ಳನ್ನ್ ಮೂಸ್ಕಂಡ್ ತಿರ್ಗ್ತ...

ರಾಘು
ನನಗೆ ಅವದರ್ದೆಲ್ಲ ಮುಖಸ ನೆನ್ಪಿಲ್ಲ(Pause)... ರಿಚ್ಚಿ ಒಬ್ಬನ್ನ್ ಬಿಟ್ರೆ... ಅವನೆಂತ ಮಾಡ್ತಿದ್ದಾನೆ?

ಶ್ಯೆಲು
ರಿಚ್ಚಿಯಾ? ಅಂವ ಶಂಕರ್ ಪೂಜಾರಿ ಒಟ್ಟಿಗೆ ಕೆಲ್ಸ ಮಾಡ್ತ... ಈ ಸುಧಿಯು ಅವನೊಟ್ಟಿಗೆ ತಿರ್ಗ್ತಾ. ಶಂಕರ್ ಪೂಜಾರಿ ಗೊತ್ತಿತ್ ಅಲ್ದಾ ನಿಂಗೆ?

ರಾಘು ಶ್ಯೆಲುವನ್ನು ನೋಡಿ, ಹೌದು ಅನ್ನೋ ರೀತಿಯಲ್ಲಿ ತಲೆ ಅಲ್ಲಾಡಿಸುತ್ತಾನೆ

ಶ್ಯೆಲು
ಶಂಕರ್ ಪೂಜಾರಿದ್ ಒಂದ್ ನಂಬ್ರ ಎರಡ್ ನಂಬ್ರ ದಂದೆ ಪೂರ ಇವ್ನೆ ಕಂಡ್ಕಂಬ್ದ್. ಈಗಳೂ ಭಯಂಕರ ರಪ್ಪೆ. ರಿಮಾಂಡ್ ಹೋಮಂಗೆ ಅಷ್ಟು ವರ್ಷ ಇದ್ದ್ ಬಂದ್ರು, ಇನ್ನು ಚರ್ಬಿ ಇಳಿಲ್ಲ...

ರಾಘು ಆಶ್ಚರ್ಯಕರವಾಗಿ ಶ್ಯೆಲುವನ್ನು ನೋಡುತ್ತಾನೆ. ಶ್ಯೆಲು ಅದನ್ನ ಗಮನಿಸಿ

ಶ್ಯೆಲು
ನೀ ಓಡಿ ಹೋರ್ಮೆಲೆ, ಅವ್ನ 8 ವರ್ಷ ರಿಮಾಂಡ್ ಹೋಮಿಗ್ ಹಾಕ್ರ್ ಮಾರ್ರೆ.

ಇಬ್ಬರು ಒಬ್ಬರನ್ನೊಬ್ಬರು ನೋಡಿ uncomfortable ಆದ ಮೌನವಹಿಸುತ್ತಾರೆ. ನಂತರ ರಾಘು ಎದ್ದು ನಿಲ್ಲುತ್ತಾನೆ. ತನ್ನ ಜೇಬಿನಿಂದ ಒಂದಷ್ಟು ಹಣವನ್ನು ತೆಗೆದು ಶ್ಯೆಲುಗೆ ಕೊಡುತ್ತಾ

ರಾಘು
ತೆಗೊಳ್ಳಿ...

ಶ್ಯೆಲು
ಇದ್ಯಂತಕ?

ರಾಘು
ಇಟ್ಕೊಳ್ಳಿ. ಆವಾಗಾವಾಗ ಅಮ್ಮನನ್ನು ಹೋಗಿ ನೋಡ್ತಾ ಇರಿ. ಅವರಿಗೆ ಹಣದ ಅವಶ್ಯಕತೆ ಇದ್ರೆ, ನನಗೆ ತಿಳಿಸಿ. ನಾನು ಕೊಟ್ಟು ಕಳಿಸ್ತೇನೆ.

ಶ್ಯೆಲು
ಅಕ್

ರಾಘು

ನಾನು ಸಿಕ್ಕಿರುವ ವಿಶಯ ಮಾತ್ರ ಯಾರಿಗೂ ಹೇಳ್ಬೇಡಿ.

ರಾಘು ಅಲ್ಲಿಂದ ಹೊರಡುತ್ತಾನೆ. Camera ಅವನ ಮುಖವನ್ನು ಸೆರೆ ಹಿಡಿಯುತ್ತಾ ಹಿಂದಕ್ಕೆ ಚಲಿಸುತ್ತಿದ್ದಂತೆಯೇ, ಕಣ್ಣ ಮುಚ್ಚೆ track ಪ್ರಾರಂಭವಾಗುತ್ತದೆ.

INSERT Camera ಓರ್ವ ಬಾಲಕನ ಕಾಲುಗಳನ್ನು ಮನೆಯ ಮುಂದಿರುವ ಅಂಗಣದಿಂದ ಮನೆಯ ಒಳಗೆ follow ಮಾಡುತ್ತದೆ. ಅಡುಗೆ ಮನೆಯಲ್ಲಿ ತನ್ನ ಕಲಸದಲ್ಲಿ ವ್ಯಸ್ತಳಾಗಿರುವ ತಾಯಿಯನ್ನು ಬಾಲಕ ಹಿಂದಿನಿಂದ ಹೋಗಿ ಅಪ್ಪಿ, ಅವಳ ಕಣ್ಣುಗಳನ್ನು ಮುಚ್ಚಿ, ಕಿವಿಯಲ್ಲಿ ಏನೋ ಹೇಳಿ ಅಲ್ಲಿಂದ ಓಡುತ್ತಾನೆ. ತಾಯಿಯು ಎದ್ದು ತಿರುಗಿ, ಕಣ್ಣುಗಳನ್ನು ತೆರೆದು ತನ್ನ ಮಗನನ್ನು ಹುಡುಕಲು ಪ್ರಾರಂಭಿಸುತ್ತಾಳೆ. ಮನೆಯ ಕೆಲವೊಂದು ಭಾಗಗಳಲ್ಲಿ ಹುಡುಕಿ, ಮಗನನ್ನು ಕಾಣದೆ ಆತಂಕಪಡುತ್ತಾಳೆ.

CUT TO:

EXT. DAY: BOMBAY PORT

ರಾಘು Bombayಯಲ್ಲಿ ತನ್ನ ಕೆಲಸದಲ್ಲಿ ತೊಡಗಿರುವ ಕೆಲವೊಂದು ದೃಶ್ಯಗಳು. ಎಲ್ಲೋ ಒಂದು ಕಡೆ ಒಂದು bag register ಆಗುತ್ತದೆ.

ರಾಘು ಒಂದು buildingನ terraceನ ಮೇಲೆ ಆಕಾಶವನ್ನು ನೋಡುತ್ತ ನಿಂತಿದ್ದಾನೆ

ಶೈಲು (VOICE OVER)
ಸ್ವಲ್ಪ್ ದಿವ್ಸ ಅವನ್ ಅಡ್ರಸ್ಸೇ ಇರ್ಲ. (Pause)
ಆದಾರ್ಮೆಲೆ... ಈ ಘಟನೇ ನೆಡು ಎರಡ್ ವಾರದ್ ಹಿಂದ್
ಫೋನ್ ಮಾಡ್ದ. ಅಮ್ಮನ್ನು ಕರ್ಕಂಡ್ ಈ ದೇಶ ಬಿಟ್ಟ್
ದೂರ... ಓಡಿ ಹ್ವಾಪ್ planಅಂಗ್ ಇದ್ದಿದ. ದುಡ್ಡ್ ಒಟ್ಟಾರ್
ಕೂಡ್ಲೆ ಮತ್ತೆ phone ಮಾಡ್ತೆ ಅಂದೇಳ್ದ.

ರಾಘು ಆಕಾಶವನ್ನು ನೋಡುತ್ತ ನಿಂತಿರಬೇಕಾದರೆ, ದೃಶ್ಯದ ಬಣ್ಣಗಳು ಬದಲಾಗಿ ಅಸಹಜವಾಗಿ ಕಂಡುಬರುತ್ತದೆ. ರಘು ಹಿಂತಿರುಗಿ ನಡೆಯಲು ಪ್ರಾರಂಭಿಸುತ್ತಾನೆ. ದಾರಿಯಲ್ಲಿ ಒಂದು ಕೆಂಪು ಚೀಲವನ್ನು ಎತ್ತಿಕೊಂಡು ವೇಘವಾಗಿ ನಡೆಯುತ್ತಾನೆ. Close shots of ದಾರಿಯಲ್ಲಿ ಹಲವರು ರಾಘುವಿನ ಮೇಲೆ ಹಲ್ಲೆ ಮಾಡುತಾರೆ. ರಾಘು ಅದನೆಲ್ಲ ಎದುರಿಸಿ ಓಡಲು ಪ್ರಾರಂಭಿಸುತ್ತಾನೆ. ಅವನ ಹಿಂದೆ ಹಲವರು ಓಡಿ ಬರುತ್ತಾರೆ. ಎಲ್ಲರಿಂದ ತಪ್ಪಿಸಿಕೊಂಡು ರಾಘು platformನಿಂದ ಒಂದು ದೋಣಿಯಮೇಲೆ ಹಾರುತ್ತಾನೆ. ದೋಣಿಯು ವೇಘವಾಗಿ ಛಲಿಸಲು ಪ್ರಾರಂಭಿಸುತ್ತದೆ. ದೃಶ್ಯದ ಬಣ್ಣಗಳು ನಿಜರೂಪಕ್ಕೆ ಮತ್ತೆ ಮರಳಿ ಬರುತ್ತದೆ.

CUT TO:

EXT. DAY: ROAD / JEEP

ಶೈಲು driver ಪಕ್ಕದಲ್ಲಿ ಕುಳಿತಿದ್ದಾನೆ.

ಶೈಲು (VOICE OVER)
ಒಂದ್ ವಾರ ಬಿಟ್ಕಂಡ್ phone ಮಾಡ್ದ. ಭಯ್ಕಂರ
tensionಅಗ್ ಇದ್ದದ ಕಾಣಿ. ಒಂದಿಷ್ಟ್ ಜನ ಅವನ್
ತೆಗುಕ್ ರೆಡಿ ಆಯಿದ್ದಿರ್ ಅಂಬ್ರ. ಯಾರದ್ದೊ ದುಡ್ಡ್
ಹೊಡ್ಕಬಂದ್ರೆ, ಅವರ್ ಸುಮ್ಮನಾಯ್ಕಂತ್ರ?

ಮುಂದಿನ seatನಲ್ಲಿ ಕುಳಿತಿದ್ದ ಶೈಲು ಹಿಂದಕ್ಕೆ ತಿರುಗಿ

ಶೈಲು
ಎಂತ ಹೆದ್ರಕಂಬೇಡ. ನಾ ಎಲ್ಲ ವ್ಯವಸ್ಥೆ ಮಾಡಿನಾ. ಈ ಜಾಗ
ಯಾರಿಗೂ ಗೊತ್ತಿಲ್ಲ. ಎಷ್ಟ್ ದಿನ ಇರ್ಕಂದೇಳಿ ಮಾಡಿದೆ?

ರಾಘು ಹಿಂದಿನ seatನಲ್ಲಿ ಕೂತಿದ್ದಾನೆ

ರಾಘು

ಎರಡು ದಿವ್ಸದಲ್ಲಿ ಹೊರಟು ಬಿಡ್ತೇನೆ... ಈ ಜಾಗ ಮಲ್ಪೆಯಿಂದ
ಎಷ್ಟು ದೂರ ಉಂಟು?

ಶೈಲು
ಸುಮಾರ್ 35 ಕಿಲೋಮೀಟರ್ ಇರ್ಕ್. ಎಂಟ್ ಗಂಟೆಗೆ ಗಾಡಿ
ಕಳ್ಸ್ . ರೆಡಿ ಆಯಿರ್ ಅಕ. ನೀನ್ ಬಂದಿದೆ ಅಂದೇಳಿ ಅಬ್ಬಿಗ್
ಹೇಳ್ಕನಾ?

ರಾಘು
ಬೇಡ ಬೇಡ...

ರಾಘು driver ಅನ್ನು ನೋಡುತ್ತಾನೆ. ಅದನ್ನು ಕಂಡ ಶೈಲು

ಶೈಲು
ಏ... ನೀ ತಲೆ ಕೆಡ್ಸ್ಕಂಡ್ ಬೇಡ್ದಾ. ಅಂವ ನಮ್ಮವ್ನೆ. ಬೇರೆ
ಯಾರ್ನರು ಕಾಂಬ್ಕಿತ್ತ?

ರಾಘು
ಇಲ್ಲ. ಅಮ್ಮನಿಗೆ ಸಿಕ್ಕಿ ಆದಷ್ಟು ಬೇಗ ಇಲ್ಲಿಂದ ಹೊರಟು
ಬಿಡ್ತೇನೆ.

CUT TO:

INT. DAY: FARM HOUSE

ಕತ್ತಲೆ ಕೋಣೆ, ಶೈಲು ಮತ್ತು ರಾಘು ಬಾಗಿಲನ್ನು ತೆರೆದು ಒಳ ಬರುತ್ತಾರೆ. ಶೈಲು light switch
ಹುಡುಕುತ್ತಿದ್ದಂತೆ, ರಾಘು light ON ಮಾಡುತ್ತಾನೆ.

ಶೈಲು
ಅಂತ ದೊಡ್ಮನಿಯೇನಲ್ಲ, ಸೇಪ್ಟಿ. ಅಡ್ಡಿಲ್ಲಲ್ದಾ?

ರಾಘು ಇಲ್ಲ ಅನ್ನೋ ರೀತೆಯಲ್ಲಿ ತಲೆ ಅಲ್ಲಾಡಿಸುತ್ತಾನೆ

ಶೈಲು
ಅಡ್ಡಿ ಮನೆಯಂಗ್ ಎರಡ್ ದಿನಕ್ ಆಪಷ್ಟ್ ಸಾಮನ್ ಇತ್ತ್ ಅಕ.
ಅಡ್ಗೆ ಮಾಡ್ಕಣ್ಲಕಲ್ದ?

ರಾಘು cigarette light ಮಾಡುತ್ತ ಹೌದು ಅನ್ನೋ ರೀತಿಯಲ್ಲಿ ತಲೆ ಅಲ್ಲಾಡಿಸಿ

ರಾಘು
ಅವರು ನನ್ ಜೊತೆ ಬತರ್ತಾರ?

ಶೈಲು
ಏಯ್. ಗ್ಯಾರೆಂಟಿ ಬತ್ರಾ...

ರಾಘು
ಬರೂದಿಲ್ಲ ಅಂತ ಹೇಳಿದ್ರೆ?

ಶೈಲು ರಾಘುವಿನ ಕಡೆ ನಡೆಯುತ್ತ

ಶೈಲು
ನಿಂದ್ ಒಳ್ಳೆ ಕಥಿ ಆಯ್ತಲ ಮಾರೆ. ಇಪ್ಪುದ್ ಒಬ್ಬ ಮಗ.
ನಿನ್ನೊಟ್ಟಿಗ್ ಬದರ್ದೆ ಇರ್ತ್ರನ? ಕಂಡ್ರೆ ಕೂಡ್ಲೆ ಕೊಣುಕ್ ಸುರು
ಮಾಡ್ತ್ರ್ ಕಾಣ್...

ರಾಘು

ಹ್ಮ್... ಅವರು ನನ್ನ ಒಟ್ಟಿಗೆ ಬರ್ಲಿಕ್ಕೆ ಒಪ್ಪಿದ್ರೆ, ಅವರ passport ready ಮಾಡ್ಲಿಕ್ಕೆ ನಿಮ್ಮ help ಬೇಕಾಗ್ಬಹುದು. ಸುಮಾರ್ ಒಂದ್ ಎರಡು ತಿಂಗ್ಳು ತೆಗೊಳ್ತದೆ. ನಾನ್ ಅಲ್ಲಿವರೆಗೆ ಇಲ್ಲಿ ಇರ್ಲಿಕಾಗುದಿಲ್ಲ.

ಶ್ಯೆಲು
ಅದೆಕ್ಕಲ್ಲ ತಲಿ ಕೆಡ್ಸಕಂಬೇಡ್ವಾ. ನಾ ಕಣ್ಕಂತೆ.

ರಾಘು ತನ್ನ ಜೇಬಿನಿಂದ ಒಂದಷ್ಟು ಹಣವನ್ನು ತೆಗೆದು ಶೈಲು ಕೈಯಲ್ಲಿ ಕೊಡುತ್ತಾ

ರಾಘು
ಇದನ್ನ್ ಇಡ್ಕೊಳಿ. ದುಬಾಯ್ಗೋದ್ಮೇಲೆ ಇನ್ಸ್ವಲ್ಪ ಕಳಿಸ್ತೇನೆ. ನಿಮ್ಮತ್ರ passport ಉಂಟ?

ಶ್ಯೆಲು
ಇಲ್ಲೆ? ಒಂದ್ ಟೈಮಿಗೆ ದುಬಾಯ್ಗ್ ಹೋಪ್ಕೆ ನಾನೂ ಸುಮಾರ್ ಸರ್ಕಸ್ ಮಾಡಿನಾ...

ರಾಘು
ಸರಿ. ನಾನ್ ದುಬಾಯ್ಗೆ ಹೋದ್ಮೇಲೆ, ಅಲ್ಲೆಲ್ಲ ವ್ಯವಸ್ಥೆ ಮಾಡಿ ತಿಳಿಸ್ತೇನೆ. ಅಮ್ಮನ passport ready ಆದ್ಕೂಡ್ಲೆ ನಿಮ್ಮಿಬ್ರಿಗೂ visa ticket ಕಳಿಸ್ತೇನೆ. ನೀವು ಅವರೊಟ್ಟಿಗೆ ದುಬಾಯಿಗೆ ಬರ್ಬೇಕಾಗ್ಬಹುದು.

ಶ್ಯೆಲು
ದುಬಾಯ್ಗಾ? ನಂಗೆಂತಾರು ಕೆಲ್ಸ ಸಿಕ್ವನಾ ಅಲ್ಲ್?

ರಾಘು
ನನ್ನ friends ಇದ್ದಾರೆ. ಮಾತಾಡ್ತೇನೆ.

ಶ್ಯೆಲು
ಅಡ್ಡಿಲ್ಲ. ಬತ್ತೆ ಹಂಗಾರೆ. ನೆನ್ಪಿತ್ತಲ್ಲಾ 8 ಗಂಟಿಗೆ. ಬೇರೆ ಎಂತಾರು ಬೇಕಾರೆ phone ಮಾಡ್. ಅಲ್ಲೆ ಇತ್ತ್ ಅಕಾ...

ರಾಘು
ಸರಿ

CUT TO:

INSERT ಶೈಲು ಮತ್ತು ರೆಜಿನ, ಶೈಲು ಮನೆಯಲ್ಲಿದ್ದಾರೆ. ರೆಜಿನ, ಅವನ ಮಾತುಗಳನ್ನು record ಮಾಡಲು, voice recorder ಅನ್ನು ಅವನ ಮುಂದೆ ಹಿಡಿದು ಕುಳಿತಿದ್ದಾಳೆ

ಶ್ಯೆಲು
8 ಗಂಟಿಗೆ ಗಾಡಿ ಕಳಿಸಿ ಅವನಿಗ್ ಫೋನ್ ಮಾಡ್ದೆ. ಸುಮಾರ್ ವರ್ಷ ಆಮೆಮೇಲ್ ಅಬ್ಬಿನ್ ಕಾಂಬುಕೆ ಹೋಪ್ದಲ್ದಾ... ಗಂಡ್ ಸ್ವಲ್ಪ ನರ್ವಸಾಯಿದ್ದಂಗ್ ಇದ್ದಿತ್.

Close on ರೆಜಿನ, ಶೈಲುವನ್ನು ನೋಡುತ್ತಿರುತ್ತಾಳೆ

CUT TO:

EXT. NIGHT: RATNAKKA'S HOUSE

ಕಣ್ಣಮುಚ್ಚೆ track ಮುಂದುವರೆಯುತ್ತದೆ. ರತ್ನಕ್ಕಾಳ ಮನೆಯ ಹೊರಗೆ ನಿಂತಿರುವ jeepನಿಂದ ರಾಘು ಕೆಳಗಿಳಿದು ಮನೆಯ ಕಡೆಗೆ ನಡೆಯುತ್ತಾನೆ. ರಾಘು ಭಾವುಕನಾಗಿದ್ದಾನೆ. ರಘು ಮನೆಯ ಬಾಗಿಲ ಹತ್ತಿರ ಬಂದು ನಿಂತು ಬಾಗಿಲನ್ನು ಬಡಿಯಲು ಹೊರಟವನು, ಕಸಿವಿಸಿಯಾಗಿ ನಿಂತಿದ್ದಾನೆ. ಕೆಲ ಕ್ಷಣ

ಮೌನವಾಗುತದೆ. ಮತ್ತೆ ಧೈರ್ಯ ತುಂಬಿಕೊಂಡು ನಿಧಾನವಾಗಿ ಬಾಗಿಲನ್ನು ಬಡಿಯುತ್ತಾನೆ. ಒಳಗಿನಿಂದ ಯಾವುದೇ ಪ್ರತಿಕ್ರಿಯೆ ಬರುವುದಿಲ್ಲ. ಇನ್ನಷ್ಟು ಕಳವಳಗೊಳ್ಳುತ್ತಾನೆ. ಇನ್ನೊಮ್ಮೆ ಬಾಗಿಲನ್ನು ಬಡಿದು, ಯಾವುದೇ ಪ್ರತಿಕ್ರಿಯೆ ಬಾರದಿರುವುದನ್ನು ಕಂಡು ಹಿಂಬಾಗಿಲಿನ ಕಡೆ ಹೊರಡುತ್ತಾನೆ. ಅಷ್ಟರಲ್ಲಿ background out of focusನಲ್ಲಿ ಯಾರೊ ಬಾಗಿಲನ್ನು ತೆರೆಯುತ್ತಾರೆ. ಬಾಗಿಲಲ್ಲಿ ರತ್ನಕ್ಕ ನಿಂತಿದ್ದಾಳೆ. ಬಾಗಿಲು ತೆರೆಯುವ ಸದ್ದು ಕೇಳುತ್ತಿದ್ದಂತೆ, ರಾಘುವಿನ ಕಣ್ಣು ತುಂಬಿ ಕೊಳ್ಳುತ್ತದೆ. ಅಲ್ಲಿಯೇ ನಿಲ್ಲುವ ರಾಘು, ಹಿಂತಿರುಗಲು ಹಿಂಜರಿಯುತ್ತಾನೆ. ಕ್ಷಣದಲ್ಲಿ ಧೈರ್ಯ ತುಂಬಿಕೊಂಡು ತಾಯಿಯ ಕಡೆಗೆ ತಿರುಗುತ್ತಾನೆ. ತಾಯಿಯನ್ನು ನೋಡುತ್ತಿದ್ದಂತೆಯೇ, ಅವನ ಕಣ್ಣೀರು ಉಕ್ಕಿ ಬರುತ್ತದೆ.

ಶೈಲು (VOICE)
ಅಂವ, ಅಬ್ಬಿನ್ ಕಂಡ್ಕಂಡ್, ವಾಪಸ್ ಬಂದ್ ನಂಗ್ ಫೋನ್ ಮಾಡ್ದ.

CUT TO:

INSERT ಶೈಲು ಮತ್ತು ರೆಜಿನ, ಶೈಲು ಮನೆಯಲ್ಲಿದ್ದಾರೆ. ರೆಜಿನ, ಅವನ ಮಾತುಗಳನ್ನು record ಮಾಡಲು, voice recorder ಅನ್ನು ಅವನ ಮುಂದೆ ಹಿಡಿದು ಕುಳಿತಿದ್ದಾಳೆ

ಶೈಲು
ರಾತ್ರಿ ಸುಮಾರ್ 11.30 11.45 ಆಯಿದಿತ್. ಭಯ್ಕಂರ ಕುಷಿಯಗ್ ಇದ್ದಿದ್ದ. ಅಬ್ಬಿ ಅವನ್ ಒಟ್ಟಿಗೆ ಬಪ್ಪುಕೆ ಒಪ್ಕಂಡಿದ್ದೀರ್ ಅಂಬ್ರ್. ಮರ್ದಿವ್ಸ ಸಾಯಿಂಕಾಲ 7 ಗಂಟೆಗ್ ಪುನ ಗಾಡಿ ಕಳ್ಸುಕ್ ಹೇಳ್ದ. ಅಬ್ಬಿ ಊಟಕ್ ಬಪ್ಪುಕೆ ಹೇಳಿದ್ದೀರ್ ಅಂಬ್ರ್

CUT TO:

INSERT ರೆಜಿನ ತನ್ನ hostel roomನಲ್ಲಿರುತ್ತಾಳೆ. ಆವಳ ಕೈ voice recorder ಅನ್ನು pause ಮಾಡುತ್ತದೆ. ಮೇಜಿನ ಮೇಲಿದ್ದ ಗಡಿಯಾರ ರಾತ್ರಿ 2 ಗಂಟೆಯನ್ನು ತೋರಿಸುತ್ತಿರುತ್ತದೆ. ರೆಜಿನ ಏನೋ ಯೋಚನೆಯಲ್ಲಿ ಮಗ್ನಳಾಗಿದ್ದಾಳೆ. ಹಾಳೆಯ ಮೇಲೆ ಏನನ್ನೋ ಬರೆಯಲು ಪ್ರಾರಂಭಿಸುತ್ತಾಳೆ

CUT TO:

INSERT ಮಧ್ಯರಾತ್ರಿಯ ಸಮಯದಲ್ಲಿ farm houseನ ಹಿಂಬಾಗದ ಜಗುಲಿಯ ಮೇಲೆ ರಾಘು ಕುಳಿತು smoke ಮಾಡುವ ಕೆಲವೊಂದು ದೃಶ್ಯ. Smoke ಮಾಡುತ್ತಾ, ಏನೋ ಯೋಚನೆ ಮಾಡುತ್ತಿದ್ದಾನೆ.

Extreme close on ರಾಘು. ಅವನ ಕಣ್ಣುಗಳಲ್ಲಿ ನೀರು ತುಂಬಿವೆ. ತಾಯಿ ಕೊಟ್ಟಿರುವ ತನ್ನ ಆಟಿಕೆಯನ್ನು ನೋಡುತ್ತ feel ಮಾಡುತ್ತಿರುತ್ತಾನೆ.

CUT TO:

INSERT ರೆಜಿನಾಳು ಯೋಚನೆ ಮಾಡಿ ಬರೆಯುತ್ತಿರುವ close ups ಹಾಗು ರಾಘು feel ಮಾಡುತಿರುವ ದೃಶ್ಯಗಳು ಒಂದಾದಮೇಲೊಂದು ಬರುತ್ತವೆ. ರೆಜಿನಾಳು ಇಲ್ಲಿ ರಾಘುವಿನ ಯೋಚನಾ ವೈಕರಿಯೆನ್ನು ಗ್ರಹಿಸಲು ಪ್ರಯತ್ನಿಸುತ್ತಿರಬಹುದು.

ರೆಜಿನಾ ಕೈಯಲ್ಲಿದ್ದ watchನಲ್ಲಿ time ನೋಡಿ, ತುಂಬ ಹೊತ್ತಾದಂತೆ ಭಾವನೆಯನ್ನು ಕೊಟ್ಟು, table lamp ಅನ್ನು ಆರಿಸುತ್ತಾಳೆ. ಕತ್ತಲೆ

CUT TO:

EXT. DAY: FARM HOUSE

ರಾಘುವಿನ ತಲೆಯಿಂದ, ಕತ್ತಲಿಂದ ಬೆಳಕಿನಡೆಗೆ, camera ರಾಘುವನ್ನು reveal ಮಾಡುತ್ತದೆ. ರಾಘು farm houseನ ತೋಟದಲ್ಲಿ ಬೆಳಗಿನ ಸೂರ್ಯನನ್ನು ನೋಡುತ್ತ smoke ಮಾಡುತ್ತಿದ್ದಾನೆ.

CUT TO:

Farm houseನ ಹೊರಗಡೆ, Maruti 800 ಬಂದು ನಿಲ್ಲುತ್ತದೆ. ರೆಜಿನ, ಒಬ್ಬ ಹುಡುಗನ ಜೊತೆ

carನಿಂದ ಇಳಿದು farm house ಕಡೆಗೆ ನಡೆದುಕೊಂಡು ಬರುವಳು

CUT TO:

ತೋಟದ ಹಿಂಬಾಗದಲ್ಲಿ ನಿಂತಿರುವ ರಾಘುವಿನ close ups

CUT TO:

ಹುಡುಗ ಬಾಗಿಲನ್ನು ತೆರೆಯುತ್ತಾನೆ. ರೆಜಿನ, ಮನೆಯ ಒಳಗೆ ಬರುತ್ತಾಳೆ. ಮನೆಯ ಕಿಟಕಿಗಳು ಮುಚ್ಚಿದ್ದು, ಒಳಗೆ ಕತ್ತಲು ಆವರಿಸಿದೆ. ರೆಜಿನ ಮನೆಯ ಸುತ್ತಲು ಒಮ್ಮೆ ಕಣ್ ಹಾಯಿಸುತ್ತ, ಹಿಂಬಾಗಿಲ ಕಡೆ ನೋಡಿ, ಅದರ ಕಡೆ ನಡೆದು, ಅದನ್ನು ತೆರೆಯುತ್ತಾಳೆ. Camera ಅವಳನ್ನು ದಾಟಿ ಬಾಗಿಲ ಕಡೆ ಚಲಿಸುತ್ತದೆ. ರಾಘು ಅದೇ ಬಾಗಿಲಿನಿಂದ ಒಳ ಬರುತ್ತಾನೆ. Camera ಅವನ ಜೊತೆ ಹಿಂದಕ್ಕೆ ಬಂದರೆ, ಮನೆಯಲ್ಲಿ ಅವನು ವಾಸಿಸುತ್ತಿದ್ದ ವಾತಾವರಣವಿದ್ದು, ಮನೆಯ ಕಿಟಕಿಯಿಂದ ಬೆಳಕು ಬರುತ್ತಿರುತ್ತದೆ.

CUT TO:

ರೆಜಿನ, ಮನೆಯ ಹಿಂಬಾಗಿಲ ಕಡೆಯಿಂದ ತೋಟದ ಕಡೆಗೆ ಬರುವಳು. ತೋಟದಲ್ಲಿ ಅವಳ ಕೆಲವೊಂದು close ups.

CUT TO:

ರಾಘು, ಅಡುಗೆ ಮನೆಯಲ್ಲಿ ಅಡುಗೆ ಮಾಡುತ್ತಿರುವನು. ಮಾಡಿದ ಅಡುಗೆಯನ್ನು, table ಮೇಲೆ ತಂದು ಇಟ್ಟು ತಿನ್ನಲು ಪ್ರಾರಂಭಿಸುತ್ತಾನೆ.

CUT TO:

ರೆಜಿನ ಮತ್ತೆ ಹಿಂಬಾಗಿಲಿನಿಂದ ಮನೆಯ ಒಳಗೆ ಬರುವಳು. Hallನಲ್ಲಿರುವ ಕಿಟಕಿಯನ್ನು ನೋಡಿ, ಅದನ್ನು ತೆರೆಯುತ್ತಾಳೆ.

ಶ್ಯೈಲು (VOICE OVER)
ಮರ್ದಿನ ಮದ್ಯಾನ ನಾನ್ ಅವ್ನಿಗ್ ಫೋನ್ ಮಾಡ್ದೆ

ರೆಜಿನ ಹಿಂತಿರುಗಿ phoneಅನ್ನು ನೋಡುತ್ತಾಳೆ. Camera phone ಬಳಿ ಚಲಿಸಿ ನಿಲ್ಲುತ್ತದೆ. Phone ring ಆಗುತ್ತದೆ. ರಾಘುವಿನ ಕೈ ಬಂದು phone ಎತ್ತುತ್ತದೆ. ರಾಘು phoneನಲ್ಲಿ ಮಾತನಾಡುತ್ತಾನೆ

ಶ್ಯೈಲು (VOICE OVER)
ನಾವಿಬ್ರು ಸ್ವಲ್ಪ ಹೊತ್ತ್ ಮಾತಾಡ್ತೆ. ಅಷ್ಟೊತ್ತಿಗೆ, ಅವನಿಗೆ
ಹೊರಗೆ ಕಾರ್ ಬಂದ್ ಶಬ್ದ ಕೇಂತ್ ಅಂಬ್ರೆ.

ರಾಘು phone ಅಲ್ಲೆ ಪಕ್ಕದಲ್ಲಿಟ್ಟು, ಕಿಟಕಿಯ ಬಳಿ ಹೋಗಿ ಹೊರಗೆ ನೋಡುತ್ತಾನೆ. ಗೇಟಿನ ಬಳಿ ಒಂದು Omni car ಬಂದು ನಿಂತಿದೆ. Carನಿಂದ ಇಬ್ಬರು ಕೆಳಗಿಳಿಯುತ್ತಿದ್ದಾರೆ. ಒಬ್ಬ ಮುಂದಕ್ಕೆ ಬಂದು gate open ಮಾಡುತ್ತಾನೆ, ಇನ್ನೊನಬ್ಬ ತನ್ನ gun ತೆಗೆದು ಹಿಂಬದಿಯಲ್ಲಿ ಸಿಕ್ಕಿಸಿಕೊಳ್ಳುತ್ತಾನೆ. ಅದನ್ನು ನೋಡಿ ಬೆಚ್ಚಿದ ರಾಘು, ಕಿಟಕಿಯನ್ನು ಮುಚ್ಚಿ, phone ಬಳಿ ಬಂದು ಶ್ಯೈಲುವಿನ ಹತ್ತಿರ

ರಾಘು
ಅವರು ಒಳಗೆ ಬತರ್ತಾ ಇದ್ದಾರೆ. ನೀವ್ ಯಾರಿಗಾದ್ರು
ನಾನಿಲ್ಲಿರೂದು ಹೇಳಿದ್ರ?

ಶ್ಯೈಲು
ಏಯ್... ಇಲ್ಲ ಮರಾಯ. ನಾ ಯಾರಿಗೂ ಹೇಳ್ಲ್ಯಾ...

ರಾಘು ಸಂದೇಹ ಪಟ್ಟು

ರಾಘು

ಮತ್ತೆ ಹೇಗೆ? ಒಬ್ಬನ ಕೈಯಲ್ಲಿ gun ನೋಡ್ದಹಾಗೆ ಆಯ್ತು.
ಸರಿ... ನಾನು ನಿಮ್ಗೆ ಮತ್ತೆ phone ಮಾಡ್ತೇನೆ

ರಾಘು ತನ್ನ bagನಲ್ಲಿದ್ದ gun ತೆಗೆದುಕೊಂಡು hallಗೆ ಬಂದು ಬಾಗಿಲಿನ ಬಳಿ ನಿಲ್ಲುತ್ತಾನೆ. ಮತ್ತೆ ಕಿಟಕಿಯ ಹತ್ತಿರ ಹೋಗಿ, ಕಿಟಕಿಯ ಸಂದಿಯಿಂದ ನೋಡುತ್ತಾನೆ. ಇಬ್ಬರು ಬಾಗಿಲಕಡೆ pass ಆಗುತ್ತಾರೆ ಆದರೆ ಅವರ ಮುಖವು ಸ್ಪಷ್ಟವಾಗಿ ಕಾಣಿಸುವುದಿಲ್ಲ. ರಾಘು, ಮತ್ತೆ ಬಾಗಿಲ ಬಳಿ ಹೋಗಿ gun ಹಿಡಿದು ನಿಲ್ಲುತ್ತಾನೆ. ಹೊರಗಿಂದ ಯಾರೋ ಬಾಗಿಲನ್ನು ಬಡಿಯುವರು. ರಾಘು ಅವರ ಮುಂದಿನ ಚಾಲನೆಗಾಗಿ ಕಾಯುತ್ತಾ, ಬಗಿಲಿನ ಬಳಿಯೇ ನಿಲ್ಲುತ್ತಾನೆ. ಇನ್ನೆರಡು ಬಾರಿ ಬಾಗಿಲು ಬಡೆದ ಮೇಲೆ, ಹೊರಗಿಂದ ಯಾವುದೇ ಶಬ್ದ ಬರುವುದಿಲ್ಲ. ಇದನ್ನು ಅರಿತ ರಾಘು, ಪುನಃ ಹೋಗಿ ಕಿಟಕಿಯಿಂದ ಇಣುಕಿ ನೋಡಿದಾಗ, ಇಬ್ಬರೂ ವಾಪಸ್ ನಡೆದುಕೊಂಡು ಹೋಗುವುದನ್ನು ನೋಡಿ ಸಮಾಧಾನಗೊಳ್ಳುತ್ತಾನೆ. ಅವರಿಬ್ಬರು Omniಯನ್ನು start ಮಾಡಿಕೊಂಡು ಅಲ್ಲಿಂದ ಹೊರಡುತ್ತಾರೆ. ರಾಘು ನಿಟ್ಟುಸಿರು ಬಿಡುತ್ತ ಕಿಟಕಿಯನ್ನು ತೆರೆದು, phone ಬಳಿ ಬಂದು, gunನ phone ಪಕ್ಕದಲ್ಲಿಟ್ಟು, ದುಬಾಯಿಗೆ trunk call connect ಮಾಡಲು ಹೇಳುತ್ತಾನೆ. Connect ಮಾಡಿ ಹಿಂದೆ call ಮಾಡ್ತೀವಿ ಎಂದು ಸೂಚಿಸುತ್ತಾರೆ. ರಾಘು ನಡೆದುಕೊಂಡು ಬಂದು ಮಂಚದ ಮೇಲೆ ಕುಳಿತು, cigarette ಅಂಟಿಸಿಕೊಂಡು, ಭಯದಿಂದ ಬೆವರುತ್ತಾ, ಯೋಚನಾಮಗ್ನನಾಗುತ್ತಾನೆ.

CUT TO:

INSERT ರೆಜಿನ, ಅವಳ hostel roomನಲ್ಲಿ ಏನೊ ಬರೆಯುತ್ತಿದ್ದಾಳೆ

ರೆಜಿನ (VOICE OVER)
ಅವನಿದ್ದಿದ್ farm houseಗೆ ಹೋಗಿದ್ದೆ. I could feel his presence there. I could feel what he felt. ಅವನಿಗಾಗ್ತಾ ಇದ್ದಿದ್ ಗೊಂದಲದ ಅನುಭವ ನಂಗಾಯಿತು.

CUT TO:

ರೆಜಿನ, ರಾಘು ಕುಳಿತಿದ್ದ ಕಾಲಿ ಮಂಚವನ್ನು ನೋಡುತ್ತಾಳೆ. ಆ ಮನೆಯ ಮುಂಬಾಗಿಲಿನಿಂದ ಸ್ವಲ್ಪ ಹಿಂದೆ ನಿಂತಿದ್ದ ಅವಳು, ನೇರವಾಗಿ ಬಾಗಿಲಿನ ಕಡೆ ನೋಡುತ್ತಾಳೆ. ಬಾಗಿಲವರೆಗು ನಡೆದು, ಬಾಗಿಲನ್ನು ಮುಚ್ಚಿ, ಮತ್ತೆ ಅದೇ ಜಾಗಕ್ಕೆ ಬಂದು ನಿಲ್ಲುತ್ತಾಳೆ. ಬರಿ ಒಂದೇ ಕಿಟಕಿಯಿಂದ ಮನೆಯ ಒಳಗೆ ಬೆಳಕು ಬಂದು; ರಾಘು ಆ ಮನೆಯಲ್ಲಿರಬೇಕಾದರೆ, ಆ ಸಂದರ್ಭದಲ್ಲಿದ್ದ ವಾತಾವರಣ; ಪುನಃ ನಿಮರ್ಮಾಣವಾಗುತ್ತದೆ. ರೆಜಿನ, ಮತ್ತೊಮ್ಮೆ ಮಂಚದ ಕಡೆ ನೋಡುತ್ತಾಳೆ. ಮಂಚದ ಮೇಲೆ smoke ಮಾಡುತ್ತಾ, ರಾಘು ಕುಳಿತಿದ್ದಾನೆ. ಅವನು ಬೆವರುತ್ತಿದ್ದಾನೆ.

ರೆಜಿನ (VOICE OVER)
ಅಲ್ಲಿ ನಡೆದಿರೊ ದೃಶ್ಯಗಳನ್ನು ನಾನು ಪುನಃ ನೋಡ್ದೆ...

CUT TO:

INSERT ತನ್ನ hostel roomನಲ್ಲಿ ಕುಳಿತಿರುವ ರೆಜಿನ, ಒಂದು ವಾಕ್ಯ ಬರೆದು ಮುಗಿಸಿದಂತೆ ದಪ್ಪನೆಯ full stop ಹಾಕುತ್ತಾಳೆ.

ರೆಜಿನ (VOICE OVER)
ಕಥೆಯ ಒಂದು ಭಾಗ ಕೊನೆಯ ಹಂತಕ್ಕೆ ಬಂದಂತೆ ಭಾಸವಾಯ್ತು...

ನಂತರ ಮೂರು ಉದ್ದನೆಯ ಗೆರೆಯನ್ನು ಎಳೆದು, ಅವುಗಳ ನಡುವೆ ಎರಡು star markಗಳನ್ನ ಹಾಕುತ್ತಾಳೆ (----------X--------X----------)

ನಂತರ ಒಂದು ಹೊಸ ಹಾಳೆಯನ್ನ ತೆಗೆದು ಮೇಲಕ್ಕೆ ಇಡುತ್ತಾಳೆ...

ರೆಜಿನ (VOICE OVER)
ಕಥೆಯ ಇನ್ನೊಂದು ಭಾಗ ಪ್ರಾರಂಭವಾಗ್ತಿರುವಂತಿತ್ತು...

...ಕಾಲಿ ಹಾಳೆಯ ಮೇಲೆ 'Chapter 2: Richard Anthony aka Richie' ಎಂದು

ಬರೆಯುತ್ತಾಳೆ

CUT TO:

INT. DAY: FARM HOUSE

ರಾಘು, cigarette ಸೇದುತ್ತ, ಬೆವರುತ್ತ, ಮಂಚದ ಮೇಲೆ ಕುಳಿತು ನಿಟ್ಟುಸಿರು ಬಿಡುತ್ತ, ತನ್ನನ್ನ ಸಮಾದಾನಪಡಿಸಿಕೊಳ್ಳುತ್ತಿರುತ್ತಾನೆ. ರೆಜಿನ, ಅದನ್ನು ನೋಡಿ ನಂತರ ಮುಬಾಗಿಲನ್ನು ನೋಡುತ್ತಾಳೆ. ಇನ್ನೊಮ್ಮೆ ರಾಘುವಿನ ಕಡೆ ನೋಡಿದಾಗ, ದೃಶ್ಯದ ಬಣ್ಣಗಳು ಬದಲಾಗುತ್ತದೆ. ಮತ್ತೆ ಬಾಗಿಲನ್ನು ನೋಡಿದಾಗ, ಅಲ್ಲಿಯೂ ಬಣ್ಣಗಳು ಬದಲಾಗಿ ಬಾಗಿಲಿನ ಇಡೆಯಿಂದ harsh light ಬರುತ್ತದೆ. ರಿಚ್ಚಿ theme ಶುರುವಾಗುತ್ತಿದ್ದ ಹಾಗೆ, camera ನಿಧಾನವಾಗಿ ಬಾಗಿಲ ಕಡೆ ಚಲಿಸಿದಾಗ, ಬಾಗಿಲಿನ ಇಡೆಯಿಂದ ಹಗುರವಾಗಿ smoke ಬರಲು ಪ್ರಾರಂಭವಾಗುತ್ತದೆ. First bit ಮುಗಿತಿದ್ದ ಹಾಗೆ, ರಿಚ್ಚಿ ಬಾಗಿಲನ್ನು ಒಡೆದು ಒಳಬರುತ್ತಾನೆ.

ರಿಚ್ಚಿ

ಫಟಾ poster, ನಿಕ್ಲಾ hero... Your attention please

Silhouetteನಲ್ಲಿದ್ದ ರಿಚ್ಚಿ ಒಳ ಬರುತ್ತಾನೆ. ರಿಚ್ಚಿ, ತನ್ನ ಕತ್ತಿಗೆ ಸೇವಂತಿ ಹೂವಿನ ಮಾಲೆ, ಕಣ್ಣಿಗೆ aviator glass ದರಿಸಿ, ಕೈಯಲ್ಲಿ gun ಹಿಡಿದು, cigar ಸೇದುತ್ತಿದ್ದಾನೆ. ರಿಚ್ಚಿ, ರಾಘುವಿನ ಕಡೆ ತಿರುಗಿ

ರಿಚ್ಚಿ

As the Cuban kid always said 'And here we meet once again'.

Camera ರಾಘುವಿನ ಕಡೆಯಿಂದ ನಿಧಾನವಾಗಿ ರಿಚ್ಚಿಯ ಕಡೆಗೆ ಸಾಗುತ್ತಿದ್ದಂತೆ, screenನ ಒಂದು ಕಡೆ 'ಭಾಗ ೧: ರಿಚ್ಚರ್ಡ್ ಆಂಟೊನಿ aka ರಿಚ್ಚಿ' ಎಂದು ಬರುತ್ತದೆ.

CUT TO:

INSERT ತನ್ನ ಸೆಲ್ನಲ್ಲಿ ಕುಳಿತಿರುವ ದಿನೇಶನ ಕಣ್ಣುಗಳಲ್ಲಿ ನೀರು ತುಂಬಿವೆ

ದಿನೇಶ

ನಾನ್ ಏನಂತ ಹೇಳ್ಲಿ? ನಾನ್ ನನ್ನ್ ಒಡಹುಟ್ಟಿದವನ್ನ ಕಳ್ಕೊಂಡೆ.

CUT TO:

INSERT ಶಂಕರ್ ಪೂಜಾರಿ ತನ್ನ ಆರಾಮ ಕುರುಚಿಯಲ್ಲಿ ಕೂತಿರುತ್ತಾರೆ

ಶಂಕರ್ ಪೂಜಾರಿ

ರಿಚ್ಚಿ ನನ್ನ ಮಗನ ಹಾಗೆ ಇದ್ದ...

CUT TO:

INSERT ಬಾಲು, ಸಂಪೂರ್ಣವಾಗಿ ಕುಡಿದು, ಜಿಗುಪ್ಸೆಯಿಂದ ಕಣ್ಣೀರು ಹಾಕಿಕೊಂಡು, bus stopನಲ್ಲಿ ಕುಳಿತಿದ್ದಾನೆ. ಸ್ವಲ್ಪ ಹೊತ್ತು ಗೋಳಾಡಿ

ಬಾಲು

ಬೋಳೀ ಮಗ. ನಾಯಿಸೂಳೆ ಮಗ ಅಂವ...

CUT TO:

INSERT ಶೈಲು ತನ್ನ ಮನೆಯಲ್ಲಿ ಕೂತು, ನೆನಪುಮಾಡಿಕೊಂಡು ನಗುತ್ತ

ಶೈಲು
ಆವಂದ್ ಒಂದ್ ಕಥೆ ಇತ್ ಗೊತ್ತಿತ್ತಾ? ಈ ರಿಮಾಂಡ್ ಹೋಮಂಗ್ ಇಪ್ಪತಿಗೆ, ಒಬ್ಬ policeನನ್, ಮಕ್ಕಳಿಗ್ ಸಮಾ ಹೊಡಿತಿದ್ದ ಅಂಬ್ರ್. ಇಂವ ಅಂವನ್ ಮೇಲೆ ಸಿಟ್ಟಿಗೆ, ಅಲ್ಲಿಂದ್ ಬಪ್ಪತಿಗೆ, ಕೈಕೋಚ್ ಮಾಡಿ ಅವನ್ uniform ಕದ್ಕಂಡ್ ಬಂದ. ಕಡಿಕೆ ಆ police belt ಹಾಯಿಕಂಡ್ ಊರಿಡಿ ತಿರ್ಗ್ತಿದ್ದ. ಹಂಗಾರೆ ಎಂತ ಹಡಿ ಮಾರ್ರೆ ಇಂವ

CUT TO:

EXT. DAY: FISHING BOAT

ರಿಚ್ಚಿ theme song ಪ್ರಾರಂಭವಾಗುತ್ತದೆ. ಒಂದು ಹಡಗಿನಲ್ಲಿ ನಾಲ್ಕು ಜನ, ಅಪರಾದಿಗಳಂತೆ, ಮೊಣಕಾಲಿನ ಮೇಲೆ ನಿಂತಿದ್ದಾರೆ. ಅವರ ಕೈಗಳನ್ನು ಹಿಂದಕ್ಕೆ ಕಟ್ಟಲಾಗಿದೆ. Camera ಅವರ ಮೇಲಿನಿಂದ ಚಲಿಸಿ, ಹಡಗಿನ ತುದಿಯಲ್ಲಿ ಕುಳಿತಿರುವ ರಿಚ್ಚಿಯ ಬಳಿ ಬಂದು ನಿಲ್ಲುತ್ತದೆ. ಅವನು ಒಂದು ಕೈಯಲ್ಲಿ beer bottle ಹಿಡಿದು, ಇನ್ನೊಂದು ಕೈಯಿಂದ ಹಲ್ಲನ್ನು ಉಜ್ಜಿ, beerಇಂದ ಬಾಯಿ ಮುಕ್ಕುಳಿಸಿ, ಉಗಿದು ನಂತರ ಎದ್ದು ನಿಂತು, ಉಳಿದ beerಅನ್ನು ಕುಡಿದು ಕಾಲಿ ಮಾಡುತ್ತಾನೆ. ಅಲ್ಲಿಂದ ಕೆಳಗಿಳಿದು ಬಂದು, ಅವನ pant ಹಾಕುತ್ತಾ ಲುಂಗಿಯನ್ನು ಜಾರಿಸಿ, police beltಅನ್ನು cowboy styleನಲ್ಲಿ ಹಾಕಿಕೊಂಡು, ಅದರಿಂದ cow boy styleನಲ್ಲಿ gun ತೆಗೆದು ಎರಡು ಬಾರಿ ತಿರುಗಿಸಿ, ಮತ್ತೆ ಒಳಗೆ ಹಾಕಿ ಮತ್ತೆ ತೆಗೆದು, ಇನ್ನೊಮ್ಮೆ ಹಾಕಿ ತೆಗೆಯುತ್ತಾನೆ. ಆಗ, ಅಲ್ಲಿ ಕಾಯುತ್ತಿದ್ದ photographer, ದಿನೇಶನನ್ನು ಕಂಡು

PHOTOGRAPHER
ಅಣ್ಣ, ಎಂಕ್ late ಆವೊಂದುಂಡಣ್ಣ. 11 ಗಂಟೆಗೆ ಮುಹೂರ್ತದ್ದು photo ತೆಗಿಬೇಕಿತ್ತು. ಇಲ್ಲೆ 12 ಆಯಿತಣ್ಣ. ಇನ್ನು ಅವರ ಸಾವಿದ್ photo ತೆಗೆಯುದ್, ನೀವೆ ಹೇಳಿ?

Photographerನನ್ನು ಹೊಡೆದು ಬಡೆದು, ಅವನ ಕೆಲಸದ ಮಧ್ಯದಿಂದ ಎತ್ತಿಹಾಕಿಕೊಂಡು ಬಂದಹಾಗೆ ಕಾಣಿಸುತ್ತದೆ.

ದಿನೇಶ
ಏ. ಅವನ್ ಖುಷಿಗೆ 2 photo ತೆಗ್ದು ಹೋಗೊ ಮಾರಾಯ. ತಲೆ ತಿನ್ಬೇಡ

Photographer ಒಮ್ಮೆ ಸಮುದ್ರವನ್ನು ನೋಡುತ್ತ

PHOTOGRAPHER
ಈ ನೀರಿನ್ ಮಧ್ಯೆ ಕರ್ಕೊಂಡು ಬಂದು ಹೋಗು ಅಂತೇಳಿದ್ರೆ, ಎಲ್ಲಿಗ್ ಹೋಗುದ್?

ರಿಚ್ಚಿ ನಾಲ್ವರ ಕಡೆ ನಡೆದು ಕೊಂಡು ಬರುತ್ತಾನೆ. ಅವರ ಮುಂದೆ pose ಕೊಟ್ಟು ನಿಂತಾಗ, ಅಲ್ಲೆ ಕಾಯುತ್ತಿದ್ದ photographer ಅವರ photo ತೆಗೆಯುತ್ತಾನೆ.

EXT. DAY: NET WEAVING WORKSHOP AT MALPE HARBOR

ಮೂವರು workshopನಲ್ಲಿ ಬಲೆಗಳನ್ನು ಹೊಲಿಯುತ್ತಿದ್ದಾರೆ

ವ್ಯಕ್ತಿ1
ಶಂಕರ್ ಪೂಜಾರಿ ಬಗ್ಗೆ ನನ್ಗೊತ್ತಿಲ್ವಾ ಮಾರ್ರೆ? ಇವ್ರಿಗೆಲ್ಲ ಅವ ದೊಡ್ಡ ಜನ... ಎಲ್ಲ ಅಡ್ಡಕಸ್ಬಿ ದಂದೆಯಿಂದ ಮಾಡಿದ್ದ ಕಾಸ್ ಅಲ್ಲ...

ವ್ಯಕ್ತಿ2
ಒಂದ್ timeಅಲ್ಲಿ Bombayಯನ್ನು ಪೂರ್ತಿ ಅಲ್ಲಾಡಿಸಿದ್ರಲ್ಲ ಮಾರ್ರೆ...

ವ್ಯಕ್ತಿ1
ಎಂತ ಸಾವ ಅಲ್ಲಾಡಿಸಿದ್ದ? Bombay ಇಂದ ಎಂತಕ್ಕೆ ಓಡಿ ಬಂದದ್ದ್ ಅವ್ನು? ಎಲ್ಲ ಸೇರ್ಸಿ ಓಡ್ಸಿರುದು. ಅಲ್ಲಿ ಕಾಲಿಡ್ಲಿಕ್ಕೆಸ ಬಿಡುದಿಲ್ಲ ಅವನಿಗೆ ಗೊತ್ತುಂಟ? ಗಡಿಪಾರ್ ಅಲ್ಲ ಮಾರ್ರೆ ಅವ...

ಮೂವರು ಮಾತನಾಡಿ ಹೊರಗೆ ನೋಡಿದರೆ ಅಲ್ಲಿ ಸುಧಿ cigarette ಎಳೆಯುತ್ತ ಅವರನ್ನು ನೋಡಿ ನಗುತ್ತಿದ್ದಾನೆ.

CUT TO:

ಮಳೆ ಬರುತ್ತಿದೆ. Workshopನ ಮುಂಭಾಗವು ಟರ್ಪಲ್ನಿಂದ ಮುಚ್ಚಲಾಗಿದೆ. Camera ನಿಧಾನವಾಗಿ ಮುಂಭಾಗದ ಕಡೆ ಚಲಿಸಿದರೆ ರಿಚ್ಚಿ ವ್ಯಕ್ತಿ1ಅನ್ನು ನೆಲದಲ್ಲಿ ಎಳೆದುಕೊಂಡು ಹೊರ ಬರುವನು. ಅವನ್ನು ಎಳೆದುಕೊಂಡು ಬಂದರಿನ ಮುಖ್ಯಭಾಗದವರೆಗೆ ಬರುವನು. ಜನರು ಅವನ ಸುತ್ತ ನಿಂತಿದ್ದಾರೆ. ರಿಚ್ಚಿ ವ್ಯಕ್ತಿ1ನಿಗೆ ಹೊಡೆಯುವ ಕೆಲವೊಂದು ದೃಶ್ಯಗಳು...

CUT TO:

INSERT ರೆಜಿನ, ಅವಳ drawing roomನಲ್ಲಿ ಮೇಜಿನ ಮೇಲಿದ್ದ ಒಂದು ಹಳೆಯ photoವನ್ನು ನೋಡುತ್ತಾಳೆ. ಅವಳು ಚಿಕ್ಕವಳಾಗಿದ್ದಾಗ ತೆಗೆದಿರುವ ರಿಚ್ಚಿಯ photo.

CUT TO:

EXT. DAY: BOAT WORKSHOP

ರೆಜಿನ, ಕೋಪದಿಂದ, ಆತುರದಿಂದ ನಡೆದುಕೊಂಡು; ರಿಚ್ಚಿ, ದಿನೇಶ ಹಾಗು ಸುಧಿ tea ಕುಡಿದುಕೊಂಡು ಕುಳಿತಿರುವ boat workshopಗೆ ಬರುತ್ತಾಳೆ. ಅವಳ ಕೈಯಲ್ಲಿರುವ dummy cameraವನ್ನು, ಅವರ table ಮೇಲೆ ಸಿಟ್ಟಿನಿಂದ ಕುಕ್ಕುತ್ತಾಳೆ.

ರೆಜಿನ (ಕಿರುಚುತ್ತ)
ನಿನ್ ಮೂಗ್ನ ಒಳಗ್ ತೂರಿ, ಆ ಹಾಳಾದ್ photoನ ಹೊರಗೆ ತೆಗೆಯಕ್ ಆಗುತ್ತಾ ನೋಡು. ಎಷ್ಟು ಸಲಾ ಹೇಳಿದ್ದೀನಿ, ಇದು ಬರೀ dummy camera ಅಂತ. ನೀನ್ ಹೇಳಿದ್ದ್ ಮಾತ್ ನಂಬಲ್ವಲ್ಲಾ?

ರಿಚ್ಚಿ, ಅವನ ಸ್ನೇಹಿತರನ್ನು ನೋಡಿ ನಗುತ್ತಾನೆ. ಅವರಿಬ್ಬರು, ಅವನ ಜೊತೆ ನಗುತ್ತಾರೆ. ರೆಜಿನ irritate ಆಗುತ್ತಾಳೆ

ರೆಜಿನ (ಕಿರುಚುತ್ತ)
(ಮೂವರಿಗು) ಯಾಕ್ ನಗ್ತಾ ಇದ್ದೀರ? Do I look crazy? You guys are crazy. ಮುಖ ನೋಡ್ಕೊಳ್ಳಿ ಒಬ್ಬಬ್ಬರದ್ದು...

ರಿಚ್ಚಿ (ಕಿರುಚುತ್ತ)
ಥುಪ್

ಏನೊ ಹೇಳಲು ಬಂದ ರೆಜಿನ ಸುಮ್ಮನಾಗುತ್ತಾಳೆ. ಅವಳು ಸುಮ್ಮನಾಗುವುದನ್ನು ನೋಡಿ ರಿಚ್ಚಿ ಅವನ ಸ್ನೇಹಿತರನ್ನು ನೋಡಿ ನಗುತ್ತಾನೆ. ಅವನ ಸ್ನೇಹಿತರು ಅವನ ಜೊತೆ ನಗುತ್ತಾರೆ. ರಿಚ್ಚಿ, ರಿಜಿನಾಳನ್ನು ಕಂಡು

ರಿಚ್ಚಿ
Sorry. ಎಂತದ, ಒಳ್ಳೆ ಹೇಳ್ತ ಇದ್ರಿ. continue ಮಾಡಿ

ರೆಜಿನ, ರಿಚ್ಚಿಯ ಸ್ನೇಹಿತರನ್ನು ನೋಡಿ ಮತ್ತೆ ರಿಚ್ಚಿಯನ್ನು ನೋಡುತ್ತ

ರೆಜಿನ (ಕಿರುಚುತ್ತ)

ಯಾವುದೋ ತೆಗಿದೆ ಇರೋ photoಗೋಸ್ಕರ, ನನ್ನ್ life
ಹಿಂದೆ ಬಿದ್ದಿದಿಯಲ್ಲಾ? I am done with you. ದಯವಿಟ್ಟು
ಇನ್ನುಂದೆ ನಂಗ್ ಕಾಟ...

ರಿಚ್ಚಿ (ಕಿರುಚುತ್ತ)
ಛುಪ್

ಏನೊ ಹೇಳಲು ಬಂದ ರೆಜಿನ ಸುಮ್ಮನಾಗುತ್ತಾಳೆ. ಅವಳು ಸುಮ್ಮನಾಗುವುದನ್ನು ನೋಡಿ ರಿಚ್ಚಿ ಅವನ ಸ್ನೇಹಿತರನ್ನು ನೋಡಿ ನಗುತ್ತಾನೆ. ಅವನ ಸ್ನೇಹಿತರು ಅವನ ಜೊತೆ ನಗುತ್ತಾರೆ. ರಿಚ್ಚಿ, ರಿಜಿನಾಳನ್ನು ಕಂಡು

ರಿಚ್ಚಿ
ಎಷ್ಟು cute ಇದ್ದಾಳಲ್ಲ? (ಟೀ ಕುಡಿಯುತ್ತ) ಟೀಯಲ್ಲಿ
ಒಂಚೂರ್ ಸಕ್ಕರೆ ಕಡಿಮೆ. ಸರಿಯಮ್ಮ... ನೀನು
continue ಮಾಡು.

ರೆಜಿನ irritate ಆಗುತ್ತಾಳೆ. ಮತ್ತೆ ಮಾತನಾಡುವಷ್ಟರಲ್ಲಿ ರಿಚ್ಚಿ ಛುಪ್ ಎನ್ನುವಂತೆ, ಬಾಯಿಯನ್ನು ತೆರೆಯುತ್ತಾನೆ. ಅದನ್ನು ಕಂಡು ರೆಜಿನ, ಅವಳ ಮಾತನ್ನು ಹಿಡಿದುಕೊಳ್ಳುತ್ತಾಳೆ. ನಂತರ ಅವನು ಸುಮ್ಮನಾದನೆಂದು ಮತ್ತೆ ಮಾತನಾಡಲು ಹೊರಟಾಗ, ಏನೊ ಹೇಳುವಷ್ಟರಲ್ಲಿ ರಿಚ್ಚಿ ಇನ್ನೊಮ್ಮೆ ಛುಪ್ ಎನ್ನುವಂತೆ ಬಾಯಿಯನ್ನು ತೆರೆಯುತ್ತಾನೆ. ರೆಜಿನ ಸುಮ್ಮನಾಗುತ್ತಾಳೆ. ಇದನ್ನು ಕಂಡ ರಿಚ್ಚಿ

ರಿಚ್ಚಿ
ಎಂತಾಯಿತು? Speak baby.

ರೆಜಿನ, ಇನ್ನಷ್ಟು irritate ಆಗಿ ಅಲ್ಲಿಂದ ಹೊರಡುವಷ್ಟರಲ್ಲಿ ರಿಚ್ಚಿ

ರಿಚ್ಚಿ
ಒಂದು ನಿಮಿಷ... ನಿನ್ದು ಎಲ್ಲಾ ಮಾತ್ ಆಡಿ ಆದ್ರೆ... ನಾನ್
ಒಮ್ಮೆ camera ನೋಡ್ತೇನೆ...

ರಿಚ್ಚಿ cameraವನ್ನು ತೆಗೆದು ಪರೀಕ್ಷೆ ಮಾಡಿ ನೋಡುತ್ತಾನೆ

ರಿಚ್ಚಿ
ಇಲ್ಲಮ್ಮ. ಇದು, ಆ camera ಅಲ್ಲ

ಎಂದು cameraವನ್ನು ಪುನಃ table ಮೇಲೆ ಇಡುತ್ತಾನೆ

ರೆಜಿನ
What? ನಿನ್ ತಲೆ ಸರಿಯಾಗಿದ್ಯಾ? It is the same
camera.

ರಿಚ್ಚಿ
No it is not. ಆ cameraದಲ್ಲಿ flash ಇತ್ತು. ನನಗೆ
ನೆನಪುಂಟು.

ರೆಜಿನ
ಅರೇ... Dummy cameraದಲ್ಲಿ flash ಇರೋದಿಕ್ಕೆ ಹೇಗ್
ಸಾಧ್ಯ?

ರಿಚ್ಚಿ
Thats the point... ನನಗೆ ಆ cameraದಲ್ಲಿ flash
ಇದ್ದ ಹಾಗೆ ನೆನಪು. So ಅದು dummy camera ಆಗ್ಲಿಕ್ಕೆ
chanceಏ ಇಲ್ಲ. ನನ್ನ photo ನನ್ಗೆ ಕೊಟ್ಟು ಬಿಡು.
ಆಮೇಲೆ ನಾನು ನಿನ್ನ ಮುಖಸ ನೋಡುದಿಲ್ಲ.

ಎಂದು ರಿಚ್ಚಿ ಅಲ್ಲಿಂದ ಹೊರಡುತ್ತಾನೆ. ಅವನ ಜೊತೆಗೆ ಅವನ ಸ್ನೇಹಿತರು ಹೊರಡುವರು. ಆಗ ರೆಜಿನ

ಅವನನ್ನು ಹಿಂಬಾಲುಸುತ್ತಾ

ರೆಜಿನ
ಅರೆ. ನನ್ ಹತ್ರ ಆ photo ಇಲ್ಲಾಂದ್ರೆ ನಾನೆಲ್ಲಿಂದ ತಂದ್ ಕೊಡ್ಲಿ?

RICHI
Not my problem lady. ಬೆರಳ್ ಹಾಕಿ ತುರ್ಸ್ಲಿಕ್ಕಿಂತ ಮುಂಚೆ, ಕಿವಿ ನಿಮ್ದಾ ಅಂತ ನೋಡ್ಕೊಳ್ಬೇಕಿತ್ತು.

ರೆಜಿನ
ನಾನು ಆವಾಗ ಇನ್ನು ಚಿಕ್ ಹುಡುಗಿ...

ರಿಚ್ಚಿ
ನಾನ್ಸ ಆವಾಗ ಚಿಕ್ಕ್ ಹುಡ್ಗನೇ...

ರೆಜಿನ
ಹೌದು. ಆ ಚಿಕ್ಕ್ ಹುಡ್ಗನ್ ಹಿಂದೆ police ಓಡ್ತಿರೊ ನೆನಪು...

ನಡೆದುಕೊಂಡು ಹೋಗುತ್ತಿರುವ ರಿಚ್ಚಿ, ನಿಂತು

ರಿಚ್ಚಿ
ಬೇಕ ಶೀರ? (ರೆಜಿನಾಳ ಕಡೆ ನೋಡುತ್ತ) ನೋಡು ಮಾರೇತಿ, ದೊಂಡೆಗ್ ಕೋಲ್ ಹಾಕ್ಬೇಡ...

ರೆಜಿನ
OK fine, I am sorry. ಆ photo ನನ್ ಕೈಯಿಂದ ಕಳ್ ಹೋಗಿದೆ. ಈಗ್ಲಾದ್ರು ನನ್ನ ನೆಮ್ಮದಿಯಾಗ್ ಬಿಟ್ಟ್ ಬಿಡ್ತೀಯ?

ರಿಚ್ಚಿ ಯೋಚಿಸುತ್ತಾನೆ

ರೆಜಿನ
Please...

ರಿಚ್ಚಿ ಸ್ವಲ್ಪಹೊತ್ತು ಗಾಡವಾಗಿ ಯೋಚಿಸಿ ದಿನೇಶನಿಗೆ

ರಿಚ್ಚಿ
ದಿನೇಶಾ... ರಾಮಣ್ಣನ hotelನಲ್ಲಿ ಮೀನ್ fry try ಮಾಡಿದ್ಯಾ? ನಿಜವಾಗ್ಲು ಹೇಳ್ತಿದ್ದೇನೆ... ಉಡುಪಿಯಲ್ಲಿ ಸಿಕ್ಕುವ best ಮೀನ್ fry ಮಾರ್ರೆ...

ದಿನೇಶ ಹಾಗು ಸುಧಿ, ಒಳಗೊಳಗೆ ನಗುತ್ತಾರೆ. ಅದನ್ನು ರೆಜಿನ ಕೋಪದಿಂದ ನೋಡುತ್ತಾಳೆ. ಅವರಿಬ್ಬರು ಸುಮ್ಮನಾಗುತ್ತಾರೆ. ರೆಜಿನ ಮತ್ತೆ ತಿರುಗೆ ರಿಚ್ಚಿಯ ಕಡೆ ನೋಡಿದಾಗ, ರಿಚ್ಚಿ ನಗು ತಡೆಯಲಾರದೆ, ಅವನ shadesಅನ್ನು ಹಾಕಿಕೊಂಡು ರೆಜಿನಾಳಿಗೆ

ರಿಚ್ಚಿ
I will try my best darling

ಎಂದು ಹೇಳಿ ಅವನ ಸ್ನೇಹಿತರ ಜೊತೆ ಹೊರಡುತ್ತಾನೆ. ರೆಜಿನ, ಅವನು ಹೋಗುವುದನ್ನು ಕೋಪದಿಂದ ನೋಡುತ್ತಾಳೆ.

CUT TO:

INT. NIGHT: LADIES HOSTEL/ CORRIDOR

Phone ring ಆಗುತ್ತಿದೆ. ರೆಜಿನ hostel corridorನಲ್ಲಿ ನಡೆದುಕೊಂಡು ಹೋಗಿ phone ಹತ್ತಿರ ಬಂದು table ಮೇಲಿರುವ receiverಅನ್ನು ಎತ್ತಿ ಮಾತನಾಡುವಳು.

ರೆಜಿನ
Hello...

ತಾಯಿ (VOICE)
Bangaloreನಲ್ಲಿದ್ರುನು ಮನೆಗ್ ಬರಕ್ಕಾಗಲ್ವ?

ರೆಜಿನ
ಅಮ್ಮ (frustrated pause) ಸರಿ. Next week ಬರ್ತೀನಿ...

ತಾಯಿ
ಒಂದ್ ತಿಂಗ್ಳಿಂದ next week, next week ಅಂತ ಹೇಳ್ತನೇ ಇದ್ದೀಯ.

ರೆಜಿನ
ಅಮ್ಮ ಇವಾಗ್ ಸ್ವಲ್ಪ busy ಇದ್ದೀನಿ. ಬೆಳಗ್ಗೆ phone ಮಾಡ್ಲಾ?

ತಾಯಿ
ಎರಡ್ ವಾರದ್ ನಂತ್ರ ಅಪ್ಪನ್ birthday ಇದೆ. ನೆನ್ಪಿದ್ಯಾ?

ರೆಜಿನ
ನೆನ್ಪಿದೆ ಅಮ್ಮಾ. ಸರಿ ಹಾಗಾದ್ರೆ. ಅಪ್ಪನ್ birthdayಗೆ ಬರ್ತೀನಿ. OKನಾ

ತಾಯಿ
ಬೇಡ. Next ವೀಕೆ ಬಂದ್ ಬಿಡು

ರೆಜಿನ smile ಮಾಡಿ receiver ಕೆಳಗಿಡುವಳು.

CUT TO:

ರೆಜಿನ ಮರಳಿ ಬಂದು table ಮೇಲೆ ಕೂತು card boardನಲ್ಲಿರುವ ಹಾಳೆಯನ್ನು ನೋಡುವಳು. ಹಾಳೆಯ ಮೇಲೆ 'Chapter 2: Richard Anthony aka Richie' ಎಂದು ಬರೆದಿದೆ. ರೆಜಿನ ಹೊಸ ಹಾಳೆಯನ್ನು ತೆಗೆದು ಮೇಲೆ ಇಡುತ್ತಾಳೆ.

CUT TO:

INT. DAY: CHURCH

ರೆಜಿನ churchನಲ್ಲಿ pray ಮಾಡುತ್ತಿರುವಾಗ, backgroundನಲ್ಲಿ churchನ Father ಬಂದು ನಿಲ್ಲುತ್ತಾನೆ. ಅವಳು prayer ಮುಗಿಸುವವರೆಗೂ Father ಕಾದು, ಅವಳು prayer ಮುಗಿಸಿ ಎದ್ದು ನಿಂತಾಗ, backgroundನಲ್ಲಿ

FATHER
ನನ್ನನ್ನು ನೋಡ್ಲಿಕ್ಕೆ ಬಂದಿರೂದು ನಿವೇನ?

ರೆಜಿನ ಹಿಂತಿರುಗಿ Fatherಅನ್ನು ನೋಡಿ smile ಮಾಡುತ್ತಾಳೆ

ರೆಜಿನ
ಹೌದು. ನೀವು, ರಿಚ್ಚಿ ತಂದೆ ಅಲ್ವ?

ಅವಳ ಮಾತನ್ನು ಕೇಳಿ Fatherನ ಮುಖ ಸಪ್ಪಗಾಗುತ್ತದೆ

FATHER
ಹೌದು

ರೆಜಿನ
Well. ನಾನು ನಿಮ್ ಹತ್ರ ಸ್ವಲ್ಪ ಮಾತಾಡ್ಬಹುದ? I wanted some information.

FATHER
ಹ್ಮ. Yes sure? ನಿಮ್ಗೆ ರಿಚ್ಚಿ ಹೇಗ್ ಪರಿಚಯ?

ರೆಜಿನ
ನಾನು ಒಂದಷ್ಟ್ ಬಾರಿ ಅವನನ್ನ meet ಮಾಡಿದ್ದೆ. But this is not personal. I am a journalist. ನಾನು timesಗೆ work ಮಾಡ್ತಿನಿ.

ರೆಜಿನ ಅವಳ cardಅನ್ನು Fatherಗೆ ಕೊಡುತ್ತ

ರೆಜಿನ
This is my card

Father cardಅನ್ನು ನೋಡುತ್ತಾನೆ

ರೆಜಿನ
ನಾನು ನಡ್ದಿರೊ incident ಬಗ್ಗೆ ಒಂದು article ಬರೀತಾ ಇದ್ದೀನಿ. You know...

FATHER
Yes. I understand. If you don't mind, officeಗೆ ಹೋಗಿ ಮಾತಾಡ್ಬಹುದ?

ರೆಜಿನ
Sure..

Churchನ ಒಂದು ಮೂಲೆ ಇಂದ, top angleನಲ್ಲಿ wide shot. ಅವರಿಬ್ಬರು office ಕಡೆ ಹೊರಡುವರು. ರೆಜಿನ churchನ Portugal design ನೋಡುತ್ತ

ರೆಜಿನ
ನಾನ್ ಚಿಕ್ಕಂದಿನಲ್ಲಿ ಬರ್ತಾ ಇದ್ದೆ ಇಲ್ಲಿಗೆ

FATHER
Really?

ರೆಜಿನ
ಹೌದು. ಪ್ರತಿ ವರ್ಷ ಉಡುಪಿಗೆ vacationಗೆ ಅಂತ ಬಂದಾಗ, ನನ್ನ ತಂದೆ ತಾಯಿ, ಕರ್ಕೊಂಡ್ ಬರ್ತಾ ಇದ್ರು.

ಇಬ್ಬರು frame out ಆಗುತ್ತಾರೆ

CUT TO:

ರೆಜಿನ ಹಾಗು Father, Churchನ officeನಲ್ಲಿ ಕುಳಿತಿದ್ದಾರೆ

ರೆಜಿನ
I am really sorry to bother you with this

FATHER
Its OK.

ಸ್ವಲ್ಪ ಆಲೋಚಿಸಿ

FATHER
Tell me how can I help you

ರೆಜಿನ ಕೇಳಲು ಹಿಂಜರಿಯುತ್ತ

ರೆಜಿನ
ನೀವು ಕೊನೆಯಬಾರಿ ನಿಮ್ಮ ಮಗನ್ನ ಯಾವತ್ತ್ meet
ಮಾಡಿದ್ರಿ?

FATHER
ಆ incident ಆದ ಹಿಂದಿನ ದಿವ್ಸ ಬಂದಿದ್ದ

CUT TO:

EXT. DAY: CHURCH / MARUTI OMNI

ರಿಚ್ಚಿ Omni carನ driver seatನ ಪಕ್ಕದ seatಅನ್ನು ಹಿಂದೆ ಬಾಗಿಸಿಕೊಂಡು ಒರಗಿ, ಕಣ್ಮುಚ್ಚಿ ಕುಳಿತಿದ್ದಾನೆ. ಅವನ ಮುಖದ ಮೇಲೆ gun ಇರುತ್ತದೆ. ದಿನೇಶ driver seatನಲ್ಲಿ ಕುಳಿತಿದ್ದಾನೆ. ಸುಧಿ ಹಿಂದಿನ seatನಲ್ಲಿ ಕುಳಿತಿದ್ದು ರಿಚ್ಚಿಯನ್ನು ಎಬ್ಬಿಸುತ್ತ

ಸುಧಿ
ರಿಚ್ಚಿ... ರಿಚ್ಚಿ... ಏಳ...

ರಿಚ್ಚಿ ಎದ್ದು ಒಂದು ಕಣ್ಣನ್ನು ಅರ್ದ ತೆರೆದು ನೋಡುತ್ತಾನೆ. ಸುಧಿ churchನ ಕಡೆ ಸನ್ನೆ ಮಾಡಿ

ಸುಧಿ
ನಿನ್ ತಂದೆ wait ಮಾಡ್ತಿದ್ದಾರ

ರಿಚ್ಚಿ ಎದ್ದು churchನ ಬಳಿ ನೋಡುತ್ತಾನೆ. ರಿಚ್ಚಿಯ ತಂದೆ churchನ ಹೊರಗಡೆ ನಿಂತು Omniಯನ್ನು ನೋಡುತ್ತಿದ್ದಾರೆ. ರಿಚ್ಚಿ ಅವನ seatಅನ್ನು ಸರಿಪಡಿಸಿ carನಿಂದ ಹೊರಬರುತ್ತಾನೆ. ಕೈಯಲ್ಲಿದ್ದ gunಅನ್ನು ಸೊಂಟದಲ್ಲಿದ್ದ police beltನಲ್ಲಿ ಸಿಕ್ಕಿಸಿ churchನ ಕಡೆ ನಡೆಯುತ್ತಾನೆ. ಅವನ ತಂದೆ ರಿಚ್ಚಿ gun ಒಳಗಿಡುವುದನ್ನು ನೋಡುತ್ತಾರೆ. ರಿಚ್ಚಿ ತಂದೆಯ ಬಳಿ ಬರುತ್ತಿದ್ದಂತೆ ಗೇಲಿಮಾಡಿಕೊಂಡು

ರಿಚ್ಚಿ
ನೀವು ಉಜಾಲಗೆ ಮೊರೆ ಹೋಗಿದ್ದೀರ?

FATHER
So you have new toy to play around with

ರಿಚ್ಚ
You dint buy me one as a kid

Father gun ಕಡೆ ತೋರಿಸುತ್ತ

FATHER
ದೇವರ್ ಮನೆಗೆ ಬರ್ಬೇಕಾದ್ರೆ ಅದನ್ನೆಲ್ಲ ತಬರ್ಬೇಕ?

ರಿಚ್ಚಿ
ಅಯ್ಯೋ. ಖಂಡಿತ... ಎಲ್ಲರಿಗಿಂತಸ ನನಗೆ ಅವನನ್ನ ಕಂಡ್ರೆನೆ
ಭಯ.

ಅವನ ಮಾತನ್ನು ಕೇಳಿ Father ಬೇಸರಗೊಂಡು, ಸಿಟ್ಟಿಗೇಳುತ್ತ. ಏನೊ ಹೇಳಲು ಹೋದವರು, ಒಂದು family church ಒಳಗೆ ಬರುವುದನ್ನು ನೋಡಿ, ತನ್ನನ್ನು ಸಮಾದಾನಪಡಿಸಿಕೊಂಡು, ಅವರು passಆಗಿ ಹೋಗುವಾಗ, ಅವರನ್ನು ಕಂಡು smile ಮಾಡುತ್ತಾರೆ. ಇದನ್ನು ಕಂಡ ರಿಚ್ಚಿ

ರಿಚ್ಚಿ (CURIOUS)
ಎಂಚಿನ ಸಾವ್ಯಾ... ಅಧಾನಕ್ಕಾಗಿ ಆ smileಅನ್ನು ಮುಖದ್ಮೇಲೆ ಹೇಗೆ ತತಿರ್ತೀರ ನೀವು? ನಟಭಯಂಕರ.

ಎಂದು ರಿಚ್ಚಿ ಅವನ ತಂದೆಯ ಗಲ್ಲವನ್ನು ಹಿಡಿದು ಚುಡಾಯಿಸುತ್ತಾನೆ. Fatherಗೆ irritate ಆಗುತ್ತದೆ

FATHER
With a smile my son, you can go a long way

ರಿಚ್ಚಿ
If I have to go a long way dad, I rather take a gun along.

FATHER
Anyway. ನನ್ಗೆ ನಿನ್ನ time waste ಮಾಡ್ಲಿಕ್ಕೆ ಇಷ್ಟ ಇಲ್ಲ

ರಿಚ್ಚಿ
ಅಯ್ಯಯ್ಯೋ. ನೀವು ಅಷ್ಟೆಲ್ಲ ತಲೆಬಿಸಿ ಮಾಡ್ಕೊಳ್ಬೇಡಿ. ನನ್ನ time, ನಿಮ್ಮ timeಅಷ್ಟು ಅಮೂಲ್ಯ ಹಾಗು ಪವಿತ್ರವಾದದ್ ಅಲ್ಲ.

FATHER
OK. Let me get to the point...

ರಿಚ್ಚಿ
Yes... Please...

FATHER
...ಮೂರ್ ದಿವ್ಸದ್ ಹಿಂದೆ ನೀನು ನಿಕ್ಸನ್ ಒಟ್ಟಿಗೆ ಗಲಾಟೆ ಮಾಡಿ ಮೂಗ್ ಒಡ್ಡಾಕ್ಕಿದ್ಯಂತೆ. ಹೌದ?

ರಿಚ್ಚಿ
ಬೋಡ ಶೀರ? ಅ... ಈ ನಿಕ್ಸನ್ ಅಂದ್ರೆ ಯಾರು? ಮೂರ್ ದಿವ್ಸದ್ ಹಿಂದೆ ನಾನು ಸುಮಾರ್ ಜನ್ರತ್ರ ಗಲಾಟೆ ಮಾಡಿದ್ದೇನೆ. And I keep breaking noses man. That is my business.

Father irritate ಆಗುತ್ತಾರೆ

FATHER
ರಿಚ್ಚಿ... I am talking about Mr. Gonzales son. Gonzales ಅವರು ನಿನ್ನೆ ಬಂದು ನನ್ನತ್ರ ಮಾತಾಡಿದ್ರು. ನಾನು churchಲ್ಲಿ ಕೂತು ದೇವರ ಬಗ್ಗೆ ಹೇಗ್ ಬೋದನೆ ಮಾಡ್ಲಿ, when my own son is...

ರಿಚ್ಚಿ
Your own son? ನೀವು Mr. Gonzales ಹತ್ರ ಕೇಳ್ಬೇಕಿತ್ತು, ನಾನು ಅವರ ಮಗನಿಗೆ ಎಂತಕ್ಕೆ ಹೊಡ್ದೇ ಅಂತ... And by the way, ನಾನು ಅವನ ಮೂಗು ಎಂತ ಒಡ್ಡಾಕಿಲ್ಲಲ್ಲ. It was just a small punch.

May be a little bigger than what you call small... ಆದರೆ, ಆ ಬೊಳಿಮಗ ಅವನ್ ಮೂಗ್ ಒಡ್ದಾಕ್ಲಿಕ್ಕಿಂತ ಮುಂಚೆನೆ ಓಡಿ ಹೋದ.

FATHER
ರಿಚ್ಚಿ... ನೀನ್ ಎಂತಕೆ ಈತರ ಮಾಡ್ತಿದ್ದಿ?

ರಿಚ್ಚಿ ಹಿಂದೆ Omniಯ ಕಟೆಗೆ ನಡೆಯುತ್ತ

ರಿಚ್ಚಿ
ನಾನ್ ಎಂತಸ ಮಾಡ್ತ ಇಲ್ಲ ಸಾರ್. ನೀವು ಸುಮ್ನೆ ಇದ್ದದ್ದನ್ನೆಲ್ಲ ತೆಕೊಂಡ್ ಬಂದು... Now if your point is over, ನಾನು ಹೊರಡ್ತೆನೆ. Thank you, welcome...

ಅವನು ಹೋಗುವುದನ್ನು ನೋಡುವ Father

FATHER
ರಿಚ್ಚಿ...

ರಿಚ್ಚಿ
ಅಯ್ಯೊ. ಮಂಡೆ ತಿನೊಡ್ಚಿ ಸರ್. ನನ್ಗೆ ತುಂಬ ಕೆಲ್ಸ ಇದೆ. May Jesus, 'peace be upon him', bless you and Mr. Gonzales. (ಗೊಣಗುತ್ತ)If not his son

ರಿಚ್ಚಿ ಹೋಗಿ carನಲ್ಲಿ ಕುಳಿತುಕೊಳ್ಳುತ್ತಾನೆ. Car ಅಲ್ಲಿಂದ ಹೊರಡುವುದನ್ನು Father ನೋಡುತ್ತಾನೆ

CUT TO:

INSERT Church officeನಲ್ಲಿ ಬಹಳ ಬೇಸರದಲ್ಲಿರುವ Father

FATHER
ಅದೆ ಕೊನೆಯಬಾರಿ ನಾನು ಅವನನ್ನು ನೋಡಿದ್ದು.

ರೆಜಿನ Father ಅನ್ನು ನೋಡುತ್ತಿದ್ದಾಳೆ

CUT TO:

INSERT Cell ಬಾಗಿಲನ್ನು ತರೆದು, constable ಒಳಗೆ ಕುರ್ಚಿಯನ್ನು ತಂದಿಡುತ್ತಾನೆ. ರೆಜಿನ constableಅನ್ನು ನೋಡುತ್ತ

ರೆಜಿನ
Thank you

Constable smile ಮಾಡಿ ಹೊರಡುತ್ತಾನೆ. ದಿನೇಶ ರೆಜಿನಾಳನ್ನು ನೋಡುತ್ತಿದ್ದಾನೆ

CUT TO:

ದಿನೇಶ driving seatನಲ್ಲಿ ಕುಳಿತಿದ್ದಾನೆ. ಸುಧಿ ಹಿಂದಿನ seatನಲ್ಲಿ ಕುಳಿತಿದ್ದಾನೆ. ರಿಚ್ಚಿ church ಕಡೆಯಿಂದ ನಡೆದುಕೊಂಡು ಬಂದು

ರಿಚ್ಚಿ
ಅಯ್ಯೊ. ಮಂಡೆ ತಿನೊಡ್ಚಿ ಸರ್. ನನ್ಗೆ ತುಂಬ ಕೆಲ್ಸ ಇದೆ. May Jesus, 'peace be upon him', bless you and Mr. Gonzales. (ಗೊಣಗುತ್ತ) If not his son

ಎಂದು ಹೇಳಿ ರಿಚ್ಚಿ ಬಂದು Omni ಒಳಗೆ ತನ್ನ seatನಲ್ಲಿ ಕುಳಿತುಕೊಳ್ಳುತ್ತಾನೆ

ರಿಚ್ಚಿ
ನಿಕ್ಸನ್ ಎಲ್ಲಿ ಸಿಗ್ತಾನೆ?

ಸುಧಿ
ಎಂತಕೆ?

ರಿಚ್ಚಿ
ಕೆಲ್ಸ ಉಂಟು

ಸುಧಿ
ಎಂತ ಕೆಲ್ಸ?

ರಿಚ್ಚಿ ತನ್ನ seatಅನ್ನು ಹಿಂದಕ್ಕೆ ಬಾಗಿಸಿಕೊಂಡು, ತನ್ನ ಮುಖದ ಮೇಲೆ gun ಇಟ್ಟು, ಕಣ್ಮುಚ್ಚಿಕೊಂಡು

ರಿಚ್ಚಿ
ಅವನ ಮೂಗ್ ಒಡ್ದಾಕ್ಬೇಕು...

Omni ಅಲ್ಲಿಂದ ಹೊರಡುತ್ತದೆ

CUT TO:

EXT. DAY: CRICKET GROUND

Maruti Omni, ground ಪಕ್ಕದಲ್ಲಿ ಬಂದು ನಿಲ್ಲುತ್ತದೆ. ರಿಚ್ಚಿ carನಿಂದ ಕೆಳಗಿಳಿದು groundನ ಕಡೆಗೆ ನಡೆಯುತ್ತಾನೆ. ದಿನೇಶ ಹಾಗು ಸುಧಿ Omni ಇಂದ ಹೊರಬಂದು ನಿಲ್ಲುತ್ತಾರೆ

ಸುಧಿ
ರಿಚ್ಚಿ... ಮೆಲ್ಲ ಮಾರ್ಁರ

ರಿಚ್ಚಿ ಹಿದಕ್ಕೆ ತಿರುಗಿ

ರಿಚ್ಚಿ
ಒರ ಉನ್ತವನ?

Groundನಲ್ಲಿ ಹುಡುಗರು cricket ಆಡುತ್ತಿದ್ದಾರೆ. ನಿಕ್ಸನ್, ಅವನ ಮೂಗಿಗೆ ಚಿಕ್ಕ plaster ಹಾಕಿಕೊಂಡು batting ಮಾಡುತ್ತಿದ್ದಾನೆ. ರಿಚ್ಚಿ ನಿಕ್ಸನ್ ಕಡೆಗೆ ನಡೆಯುತ್ತ

ರಿಚ್ಚಿ
ಎಂತ ಸಾವ. ನಿನ್ನ ತಂದೆ ಊರಿಡೀ ನಾನ್ ನಿನ್ ಮೂಗು ಒಡ್ದ್
ಹಾಕಿದ್ದೆ ಅಂತ ಹೇಳ್ತಾ ಬರ್ತಿದ್ದಾರೆ ಮಾರ್ರೆ.

ರಿಚ್ಚಿ, ಅರ್ಧ ಭಾಗಿಕೊಂಡು ನಾಟಕಿಯವಾಗಿ ನಿಕ್ಸನ್ನನ್ನು ಗಮನಿಸುತ್ತ, ತನ್ನ gun ತೆಗೆದು ಹತ್ತಿರ ಬರುತ್ತಿದ್ದಂತೆಯೇ

ರಿಚ್ಚಿ
oh hooo... ಮೂಗ್ ಒಡ್ದೋಗಿಁಲಲ್ವಲ್ಲಾ. ಇಲ್ಲ್ ಬಾ...
ಇಲ್ಲ್ ಬಾ...

ರಿಚ್ಚಿ ಹತ್ತಿರ ಬರುತ್ತಿದ್ದಂತೆಯೇ, ನಿಕ್ಸನ್ ಅದನ್ನು ಗಮನಿಸಿ ಓಡಲು ಯತ್ನಿಸುವ ಮೊದಲೇ, ರಿಚ್ಚಿ ಅವನನ್ನ ಕೆಳಗೆ ಹಾಕಿ, ಅವನ ಮೇಲೆ ಏರಿ ಕುಳಿತು, ತನ್ನ gunನ ಹಿಂಬದಿಯಿಂದ ಅವನ ಮೂಗಿನ ಮೇಲೆ ರಕ್ತ ಬರುವಂತೆ ಹೊಡೆದು, ಅವನ ಮೂಗನ್ನು ಒಡೆದು ಹಾಕುವನು. ಅದನ್ನು ಇನ್ನೊಮ್ಮೆ ನಾಟಕೀಯವಾಗಿ ಗಮನಿಸಿ

ರಿಚ್ಚಿ

ಹ್ಮ. ಈಗ ಒಂದು rangeಗೆ ಕಾಣಿಸ್ತಾ ಇದೆ. ನೋಡಿದವರಿಗೆ ಮೂಗು ಸರಿಯಾಗಿ ಒಡ್ದೋಗಿಲ್ಲ ಅಂತ ಅನ್ನಿಸಿದ್ರೆ, ನನ್ನ ಮಯರ್ಯಾದೆ ಹೋಗುದಿಲ್ವ ಮಾರಾಯ? ರಿಚ್ಚಿ ಯಾದರ್ದಾದ್ರು ಮೂಗ್ ಒಡ್ದಾಕಿದ್ರೆ, ಅದು ಹೀಗೆ ಕಾಣ್ಬೇಕು (ಮೇಲಕ್ಕೆ ಏಳುತ್ತ) No hard feelings ya. Purely professional.

ಎದ್ದು groundನಲ್ಲಿರೊ ಬೇರೆ ಹುಡುಗರ ಕಡೆಗೆ ಗಮನ ಹರಿಸುತ್ತಾನೆ. ಎಲ್ಲರೂ, ಬಾಯಿ ಬಾಯಿ ಬಿಟ್ಟು ನೋಡುತಿದ್ದಾರೆ. ರಿಚ್ಚಿ bowlerನನ್ನು ಕಂಡು

ರಿಚ್ಚಿ

ಎಂತ?

Bowler, ನಿಕ್ಸನ್ನನ್ನು ಕಂಡು ರಿಚ್ಚಿಯನ್ನು ನೋಡುತ್ತಾನೆ. ರಿಚ್ಚಿ, ನಿಕ್ಸನ್ನನ್ನು ಕಂಡು bowler ಕಡೆಗೆ ನೋಡುತ್ತ

ರಿಚ್ಚಿ

ಹೋ... ಅಡಚಣೆಗಾಗಿ ವಿಷಾದಿಸುತ್ತೇವೆ. ತಾಂತ್ರಿಕ ಕಾರಣಗಳಿಂದಾಗಿ ಕಾರ್ಯಕ್ರಮವನ್ನು ಮುಂದೂಡಲಾಗಿದೆ.

ಎಂದು frame out ಆಗುತ್ತಾನೆ. ಮತ್ತೊಮ್ಮೆ frameನ ಒಳಗೆ ಬಂದು

ನಿಮ್ಗೇ bowling ಹಾಕ್ಬೇಕ?

Bowler ಕಣ್ ಕಣ್ ಬಿಟ್ಟು ನೋಡುತ್ತಿದ್ದಾನೆ. ರಿಚ್ಚಿ, ನಿಕ್ಸನ್ ಬಳಿ ಇರುವ batಅನ್ನು ಹಿಡಿದು battingಗೆ ನಿಲ್ಲುತ್ತಾನೆ.

ರಿಚ್ಚಿ

Ye. Come on. ಅವನ್ ಬದ್ಲು ನಾನ್ ಆಡ್ತೆನೆ

Bowlerಗೆ, ಏನು ಮಾಡಬೇಕೆಂದು ತೋಚದೆ ಭಯದಿಂದ ನಿಂತಿದ್ದಾನೆ

ರಿಚ್ಚಿ

ಹೋ... ಹಾಕ್ ಮಾರ್ರೆ

Bowler ಓಡಿ ಬಂದು bowling ಮಾಡುತ್ತಾನೆ. ರಿಚ್ಚಿ, ಜೋರಾಗಿ batಅನ್ನು ಬೀಸುತ್ತಾನೆ. Ball middle stumpಗೆ ಬಡಿದು out ಆಗುತ್ತಾನೆ. ರಿಚ್ಚಿ, ಹಿಂದಿರುವ wicketಅನ್ನು ನೋಡಿ,

ರಿಚ್ಚಿ

ಬೇಕ ಶೀರ?

ನಂತರ bowlerಗೆ ನಿಕ್ಸನ್ ಕಡೆ ತೋರಿಸುತ್ತ

ರಿಚ್ಚಿ

ಬೋಳಿಮಗ out ಆದ ಅಲ್ಲ?

Batಅನ್ನು ನಿಕ್ಸನ್ ಕಡೆ ಎಸೆದು, ಅವನಿಗೆ ಒದೆಯುತ್ತ

ರಿಚ್ಚಿ

ನಾಚಿಕೆ ಆಗುದಿಲ್ವನ? ಸರಿಯಾಗೆ ಆಡ್ಲಿಕ್ಕೆಸ ಬರುದಿಲ್ಲ ನಿಂಗೆ

ರಿಚ್ಚಿ Omni ಕಡೆಗೆ ನಡೆದುಕೊಂಡು ಹೋಗುತ್ತಾನೆ. ದಿನೇಶ ಮತ್ತು ಸುಧಿ Omniಯ ಹೊರಗಡೆ ನಿಂತಿದ್ದಾರೆ. ರಿಚ್ಚಿ ಅವರ ಹತ್ತಿರ ಬರುತ್ತಿದ್ದಂತೆ ನಗಲು ಪ್ರಾರಂಭಿಸುತ್ತಾರೆ. ರಿಚ್ಚಿ ನಗುತ್ತಾ ತನ್ನ gunಅನ್ನು ಹೊರ ತೆಗೆದು

ರಿಚ್ಚಿ

ಎಂತದ ಇಬ್ರು ನೆಗಾಡ್ತ ಇದ್ದೀರ? Shoot ಮಾಡ್ಬೇಕ
ಬೋಳಿಮಕ್ಳೆ?

CUT TO:

EXT. DAY: MALPE HARBOR

ರಿಚ್ಚಿ, ದಿನೇಶ ಹಾಗು ಸುಧಿ Omni carನಲ್ಲಿ, ಮಲ್ಪೆ harborನ gate ಹತ್ತಿರ ಬಂದು horn ಹೊಡೆಯುತ್ತಾರೆ. ರಿಚ್ಚಿ ತನ್ನ ಹಿಂದೆ ಬಾಗಿರುವ seatನಲ್ಲಿ ಮಲಗಿರುತ್ತಾನೆ. ದಿನೇಶ, ಹಿಂದೆ ಕುಳಿತಿರುವ ಸುಧಿಯನ್ನು ನೋಡಿ

ದಿನೇಶ
ಈಗ್ ನೋಡು. ಹೇಗ್ ಓಡ್ ಬರ್ತಾನಂತ.

ಮುದಿ ವಯಸ್ಸಿನ ಒಬ್ಬ watchman, shelterನಿಂದ ಹೊರಗೆ ಬರುತ್ತಾನೆ. Omniಯನ್ನು ನೋಡಿ ರಭಸದಿಂದ gateನ ಕಡೆ ನಡೆದುಕೊಂಡು ಹೋಗುತ್ತಾನೆ. ಅದನ್ನು ನೋಡುತ್ತ ದಿನೇಶ ಮತ್ತೆ horn ಮಾಡುತ್ತಾನೆ. ರಭಸವಾಗೆ ಹೋಗುತ್ತಿರುವ watchman, ಓಡಿ ಹೋಗಿ gate open ಮಾಡುತ್ತಾನೆ. Omni ಮುದುಕನನ್ನು ದಾಟಿಕೊಂಡು harbor ಒಳಗೆ ಹೋಗುತ್ತ

ಸುಧಿ
ಪ್ರಾಯ ಆಯ್ತು ಅಜ್ಜೆರೆ. ನಿಮ್ಮತ್ರ ಇನ್ನು ಆಗುದಿಲ್ಲ

ಮುದುಕ ತನ್ನ ಹಲ್ಲುಗಳನ್ನು ತೋರಿಸುತ್ತ ಕಿಸಿದು gate close ಮಾಡುತ್ತಾನೆ.

Omni, ಒಂದು platformಗೆ ಬರುತ್ತ, ಸುಧಿ ಅಲ್ಲಿ ನಿಂತಿರುವ bulletಅನ್ನು ನೋಡಿ, ದಿನೇಶನನ್ನು ಉದ್ದೇಶಿಸಿ

ಸುಧಿ
ಏನಾದ್ರು ಹಾಕ್‌ಲಕ್ ಉಂಟಾ?

ದಿನೇಶ ಸುಧಿಯನ್ನು ನೋಡಿ ನಂತರ ರಿಚ್ಚಿಯ ಕಡೆ ಸನ್ನೆ ಮಾಡುತ್ತಾನೆ. ರಿಚ್ಚಿ ಮಲಗಿರುತ್ತಾನೆ. ದಿನೇಶ ಅವನನ್ನು ಎಬ್ಬಿಸುತ್ತ

ದಿನೇಶ
ರಿಚ್ಚಿ. ಏಳೊ. ಬಂದರ್ ಬಂತೊ

ರಿಚ್ಚಿ ಏಳುತ್ತಾನೆ

ರಿಚ್ಚಿ
ಎಂತ ಸಾವ್ ಮಾರ್ರೆ ನಿಂದು

ಸುಧಿ
ಎಂಚ? ಪಾಡ್ರೆ ಉಂಡ?

ರಿಚ್ಚಿ ನಿದ್ದೆ ಕಣ್ಣಿನಲ್ಲಿ

ರಿಚ್ಚಿ
ಎಂತ?

ದಿನೇಶ
wattis?

ರಿಚ್ಚಿ ಅಲ್ಲಿ ಇಲ್ಲಿ ನೋಡುತ್ತ

ರಿಚ್ಚಿ
ಹೌದಾ. ಎಲ್ಲಿ?

ಸುಧಿ
ತಬರ್ಬೇಕಾ...

Omni platformನಲ್ಲಿ ಬಂದು ನಿಲ್ಲುತ್ತದೆ. ಸುಧಿ ಕೆಳಗಿಳಿದು

Close on ಸುಧಿ...

ಸುಧಿ (ಕೂಗುತ್ತ)
ಪ್ರಣಯರಾಜಾ...

Echo... ಸುಧಿ, ಎಲ್ಲಾ ಕಡೆ ನೋಡಿ, ನಂತರ ರಿಚ್ಚಿಯನ್ನುದ್ದೇಶಿಸಿ

ಸುಧಿ
ಎಷ್ಟ್ ತಸ್ಬೇಕಾ?

ರಿಚ್ಚಿ
ಒಂದ್ crate ತಸರ್ಸ್ರಾ. ಆಮೇಲೆ ನೋಡುವ

ಒಂದು ಹಡಗಿನ ಒಳಗಿನಿಂದ ಮುನ್ನ, ಕೋಪದಿಂದ ಹೊರಬಂದು

ಮುನ್ನ
ಅವನ್ ಅಮ್ಮನ್.............. ಯಾವನೊ ಅವನು?

ಅದನ್ನು ಕೇಳಿದ ಸುಧಿ, ಮುನ್ನನ ಕಡೆ ನೋಡುತ್ತ

ಸುಧಿ
ಎಂತ?

ಮುನ್ನ, ಸುಧಿಯನ್ನು ಕಂಡು ಸಪ್ಪಗಾಗುತ್ತಾನೆ. ಏನು ಹೇಳಬೇಕೆಂದು ತೋಚದೆ

ಮುನ್ನ
ನನ್ನ್ ಪಾಡಿಗ್ ನಾನ್ ಕೆಲ್ಸ ಮಾಡ್ತಾ ಇವ್ನಿ.
ಸುಮ್ಮಿರಕಾ್ಕಗಕ್ಕಿಲ್ವ?

ಸುಧಿ
ಇವ್ನ್ ಭಾಷೆ ಬೇರೆ ಅರ್ಥ ಆಗುದಿಲ್ಲಲ್ಲ ಮರ್ರೆ? ಎಂತ ಆಯ್ತು
ಇವಾಗ?

ಮುನ್ನ ಏನು ಹೇಳಬೇಕೆಂದು ತೋಚದೆ

ಮುನ್ನ
ಹೆಸರಿಟ್ಟ್ ಕರಿಯಕ್ಕಾಗಕ್ಕಿಲ್ವಾ? ಏನ್ ಪ್ರಣಯರಾಜ ಗಿಣಯರಾಜ
ಅಂದ್ರೆ?

ಸುಧಿ
ಊರಿಡಿ ನಿನ್ನನ್ನು ಅದೇ ಅಲ್ವ ಮಾರ್ರೆ ಕರಿಯೂದು?

ಮುನ್ನ ಸ್ವಲ್ಪ ಹೊತ್ತು ಯೋಚಿಸಿ

ಮುನ್ನ
ನಂಗದೆಲ್ಲ ಇಷ್ಟ ಆಗಕಿಲ್ಲ... ಸುಮ್ಕೆ ಹೆಸರಿಟ್ಟ್ ಕರಿ

ಸುಧಿ
ಆಹ... ಉಂಬೆನ ಒಂಜಿ

ಮುನ್ನ ಸುಧಿಯನ್ನೇ ನೋಡುತ್ತಿದ್ದಾನೆ

ಸುಧಿ
ಸರಿ ಮಾರಾಯ. (Pause) Democracy ಎಲ್ಲಿ

Democracy ಹಡಗಿನ ಒಳಗಡೆ ಇಂದ ಓಡಿ ಬಂದು, ಮುನ್ನನನ್ನು ಕೋಪದಿಂದ ನೋಡಿ

DEMOCRACY
ಹೇಳಿದ್ ಅರ್ಥ ಆಗುದಿಲ್ವ ನಿಂಗೆ? ಚಿಕ್ಕ ಹುಡಗನನ್ನು ಆ ಕತ್ತಲೆಯಲ್ಲಿ ಒಬ್ಬನ್ನೆ ಬಿಟ್ಟು ಬರ್ತಿಯಲ್ಲಾ ನೀನು???

ಮುನ್ನ Democracyನ ಲೆಕ್ಕಿಸದೆ ಸುಧಿಯ ಕಡೆ ನೋಡುತ್ತಾನೆ

ಸುಧಿ
ಏಯ್ Democracy. ಇಲ್ಲಿ ಬಾರ

ಮುನ್ನ
ಯಾಕೆ?

ಸುಧಿ
ಕಳ್ಸು ಮಾರ್ರೆ. ಸ್ವಲ್ಪ ಕೆಲ್ಸ ಇದೆ

ಮುನ್ನ Democracyನ ನೋಡಿ ಏನೋ ಹೇಳುತ್ತಾನೆ. ನಂತರ Democracy ಸುಧಿ ಕಡೆ ಓಡಿ ಬರುತ್ತಾನೆ. ಸುಧಿ ಅವನನ್ನು ಹತ್ತಿರ ಕರೆದು

ಸುಧಿ
ಇಲ್ಲಿ ಬಾ... ಇಲ್ಲಿ ಬಾ...

CUT TO:

EXT. DAY: MALPE HARBOR

Democracy, beer crateಅನ್ನು ನೆಲದ ಮೇಲಿಟ್ಟು ರಿಚ್ಚಿ, ದಿನೇಶ ಹಾಗು ಸುಧಿಯನ್ನ ನೋಡುತ್ತಾನೆ. ರಿಚ್ಚಿ, Omniಯ slide doorಅನ್ನು open ಮಾಡಿಕೊಂಡು Aviator glass ಹಾಕಿಕೊಂಡು ಕುಳಿತಿದ್ದಾನೆ. ದಿನೇಶ ಹಾಗು ಸುಧಿ ಪಕ್ಕದಲ್ಲೆ ನಿಂತಿದ್ದಾರೆ. ದಿನೇಶ, ಸುಧಿಯನ್ನು ಕಂಡು

ದಿನೇಶ
ಚಿಕ್ಕ್ ಹುಡುಗನ್ ಕೈಲಿ beer ತರಿಸ್ತಿಯಲ್ಲೊ. ಅವನಿಗೆ ಆ crate ಎತ್ತಕ್ಕೂ ಆಗಲ್ಲ

Democracyಯ ಕಾಲಿನ ಚಪ್ಪಲಿ ಕಿತ್ತು ಹೋಗಿರುತ್ತದೆ. ಅವನು ಅದನ್ನು ಧರಿಸಿ ಸರಿಯಾಗಿ ನಿಲ್ಲಲಾಗದೆ ಒದ್ದಾಡುತ್ತಿರುತ್ತಾನೆ. ರಿಚ್ಚಿ cigaretteಅನ್ನು ಬಾಯಲ್ಲಿಟ್ಟುಕೊಂಡು, Democracy ಅವನನ್ನೆ ಗುರಾಯಿಸುತ್ತಿರುವುದನ್ನು ನೋಡುತ್ತಾನೆ. ರಿಚ್ಚಿ 'ಏನು' ಅನ್ನೊ ರೀತಿಯಲ್ಲಿ ಸನ್ನೆ ಮಾಡುವನು

DEMOCRACY
Raybanನಾ?

ರಿಚ್ಚಿಗೆ ಅರ್ಥವಾಗದೆ ದಿನೇಶನನ್ನು ನೋಡುತ್ತಾನೆ. ದಿನೇಶ ನಗುತ್ತ, glass ಸನ್ನೆ ಮಾಡುತ್ತ

ದಿನೇಶ
Cooling glass... Raybanನಾ ಅಂತ ಕೇಳ್ತಿದ್ದಾನೆ

ರಿಚ್ಚಿ ಮುಗುಳ್ನಗುತ್ತ Democracyಅನ್ನು ಕಂಡು

ರಿಚ್ಚಿ
ಹೌದು. ಎಂತಕೆ?

DEMOCRACY

Originalಅ?

ರಿಚ್ಚಿ
ಹೌದು

DEMOCRACY
ಮನೆಯಲ್ಲಿ ಇನ್ನುಸ ಉಂಟಾ?

ರಿಚ್ಚಿ
ಹೂನ...

DEMOCRACY
ಹಾಗಾದ್ರೆ ಇದು ನಂಗೆ ಕೊಡು...

ರಿಚ್ಚಿ ನಗುತ್ತ

ರಿಚ್ಚಿ
ನಿನ್ಗೆಂತಕ?

DEMOCRACY
ಹಾಕೊಳ್ತೆನೆ...

ರಿಚ್ಚಿ
ಹೆಸ್ರೆಂತ ನಿಂದು?

DEMOCRACY
ಸತೀಶ

ರಿಚ್ಚಿ
Schoolಗ್ ಹೋಗುದಿಲ್ವ?

DEMOCRACY
ರಜೆ ಇದ್ದಾಗ ಹೋಗ್ತೆನೆ. ಆಟಾಡ್ಲಿಕ್ಕೆ

ಸುಧಿ, ನಗಲು ಪ್ರಾರಂಬಿಸುತ್ತಾರೆ. ರಿಚ್ಚಿ cigarette ಅಂಟಿಸುತ್ತ

ರಿಚ್ಚಿ
ಎಂತದ? ಪಿರ್ಕಿಯ?

ಸುಧಿ ನಗುವುದನ್ನು ನಿಲ್ಲಿಸುತ್ತ

ಸುಧಿ
ಎಷ್ಟ್ ಕಲ್ತಿದ್ದಾನೆ ಅಂತ ಕೇಳು...

ರಿಚ್ಚಿ
ಎಷ್ಟ್ ಕಲ್ತಿದ್ಯಾ?

Democracy ಚಪ್ಪಲಿಯನ್ನು ಸರಿಪಡಿಸಲು ಒಂದು ಕಡ್ಡಿಯನ್ನು ಹುಡುಕುತ್ತ,

DEMOCRACY
Democracy for the people, by the people,
to the people.

ರಿಚ್ಚಿ ಅರ್ಥವಾಗದೆ, ಸುಧಿ ಹಾಗು ದಿನೇಶನನ್ನು ನೋಡಿ ನಂತರ Democracyಗೆ

ರಿಚ್ಚಿ

ಎಂತದ ಅದು?

Democracy ಕೈಗೆ ಒಂದು ಕಡ್ಡಿ ಸಿಗುತ್ತದೆ. ತನ್ನ ಚಪ್ಪಲಿಯನ್ನು ಸರಿ ಪಡಿಸಲು ಪ್ರಯತ್ನಿಸುತ್ತಾನೆ.

DEMOCRACY
ಅದೇ ನಾನು last ಕಲ್ತಿರುದು. ಆಮೇಲೆ schoolಗೆ ಹೋಗಿಲ್ಲ

ಸುಧಿ
Schoolಅಲ್ಲಿ cigarette ಎಳಿಬೇಕಾದ್ರೆ ಸಿಕ್ಕಿ ಬಿದ್ದ.

DEMOCRACY
ಬೀಡಿ ಮಾರ್ರೆ ಓ...

ಕಡ್ಡಿ ಉಪಯೋಗ ಆಗದೆ ಅದನ್ನು ಎಸಕಿ ಸುಧಿ ಹತ್ತಿರ ಹೋಗತ್ತಾನೆ

ಸುಧಿ
ಓ... ಬೀಡಿಯ? ಬೀಡಿ ಆದ್ರೆ ಪರ್ವಾಗಿಲ್ಲ

ಎಂದು ನಗುತ್ತಾನೆ

DEMOCRACY
ಸ್ವಲ್ಪ pen ಕೊಡಿ

ಸುಧಿ ತನ್ನ ಜೇಪಿನಲ್ಲಿದ್ದ pen ತೆಗೆದು ಕೊಡುತ್ತಾನೆ. Democracy ತನ್ನ ಚಪ್ಪಲಿಯನ್ನು ಸರಿಪಡಿಸಿ penಅನ್ನು ಸುಧಿಗೆ ವಾಪಸ್ಸು ಕೊಡುತ್ತಾನೆ

DEMOCRACY
Thank you...

ರಿಚ್ಚಿ ಹಾಗು ದಿನೇಶ ಅದನ್ನು ಕಂಡು ನಗುತ್ತಾರೆ

ರಿಚ್ಚಿ
ಬೇಕಿತ್ತ ಶೀರ?

Backgroundನಲ್ಲಿ ಮುನ್ನ ಬಂದು Democracyನ ಕರೆಯುತ್ತಾನೆ. Democracy ಅವನ ಕರೆಗೆ ಓಗುಡುತ್ತಾ, ರಿಚ್ಚಿಯ ಬಳಿ

DEMOCRACY
ಸರಿ. ನಾನು ಬತರ್ತೇನೆ...

ರಿಚ್ಚಿ
ಒಂದ್ ನಿಮ್ಷ. ಇಲ್ಲಿಗ್ ಬಾ

Democracy ರಿಚ್ಚಿಯ ಬಳಿ ಬರುತ್ತಾನೆ. ರಿಚ್ಚಿ 100 ರುಪಾಯಿ ತನ್ನ pocketನಿಂದ ತೆಗೆದು ಕೊಡುತ್ತಾನೆ. Democracy ಆ noteಅನ್ನು ಆಕಾಶಕ್ಕೆ ಹಿಡಿದು ನೋಡುತ್ತಾನೆ

DEMOCRACY
Thanks

ಎಂದು ಓಡುತ್ತಾನೆ. ರಿಚ್ಚಿ ಓಡುವ ಹುಡುಗನನ್ನು ನೋಡುತ್ತ ಎದ್ದು ನಿಲ್ಲುವಾಗ

ರಿಚ್ಚಿ
ಯಾರ ಅವನು?

ಎಂದು ಕೇಳುತ್ತ ಹಿಂದಿರುವ ಹಡಗನ್ನು ಏರುತ್ತಾನೆ. ಸುಧಿ ಅವನನ್ನು ಹಿಂಬಾಲಿಸುತ್ತ

ಸುಧಿ
ವಾಸು ಮಗ. ಯಾವಗ ನೋಡಿದ್ರೆಸ ಆ ಮುನ್ನನ ಒಟ್ಟಿಗೆ
ಇತರ್ತಾನೆ

ದಿನೇಶ createಅನ್ನು ಎತ್ತುತ್ತ

ದಿನೇಶ
ಎಲ್ಲಿಗೆ ನಮ್ಮ ಪಯಣ?

ರಿಚ್ಚಿ ಹಡಗಿನ steeringಅನ್ನು ತಿರುಗಿಸುತ್ತ

ರಿಚ್ಚಿ
Lets go for a Ride man

CUT TO:

ಹಡಗು ಅಲ್ಲಿಂದ ಹೊರಡುತ್ತ

CUT TO:

EXT. DAY: FISHING BOAT

ಸುಧಿ ಹಡಗನ್ನು ಚಲಾಯಿಸುತ್ತಿದ್ದಾನೆ. Wide shot ಹಡಗಿನ ಹೊರಗಿನಿಂದ, ದಿನೇಶ ಹಗ್ಗ ಕಟ್ಟಿರುವ ಅಲ್ಯುಮೀನ್ಯಮ್ ಬಾಂಡ್ಲಿಯನ್ನು ನೀರಿಗೆ ಎಸೆದು, ನೀರನ್ನು ಮೇಲಕ್ಕೆ ಎತ್ತಿ ಅದರಿಂದ ತನ್ನ ಕೈ ತೊಳೆದುಕೊಂಡು, ಅಲ್ಲಿರುವ beer bottleಅನ್ನು ತೆಗೆದು ಕೊಂಡು ಹಡಗಿನ ಮುಂಬಾಗದಲ್ಲಿರುವ ರಿಚ್ಚಿಯ ಕಡೆ ನಡೆಯುವನು. ದಿನೇಶ ಹತ್ತಿರ ಹೊಗುತ್ತಿದ್ದಂತೆಯೇ beer ಕುಡಿಯುತ್ತಾ ಕೂತಿರುವ ರಿಚ್ಚಿ

ರಿಚ್ಚಿ
हम पंछी उन्मुक्त गगन के

पिंजरबद्ध न गा पाएँगे

कनक-तीलियों से टकराकर

पुलकित पंख टूट जाएँगे ।

ದಿನೇಶ ರಿಚ್ಚಿಯನ್ನು ಕಂಡು

ದಿನೇಶ (ನಗುತ್ತ)
ನಿರಂಜನ್ sir ನೆನ್ಪಿದ್ಯಾ? ನಮ್ಮ್ ಕರ್ಮಕ್ಕೆ ಹಿಂದಿ ಅರ್ಥ
ಆಗ್ತಿರ್ಲಿಲ್ಲ ಅಂತ, ಆ ಹಾಡ್ನ ಕನ್ನಡಕ್ ಅನುವಾದ
ಮಾಡ್ಕೊಟ್ಟಿದ್ರಲ್ವ.

ರಿಚ್ಚಿ (ನಗುತ್ತ)
ನಿರಂಜನ್ sir. ಅವನ್ ವಾಲಿ ಕಳೂಕೆ.
ಕೈದಿಗಳಾಗಿರುವ ಮಕ್ಕಳಿಗೆ, ಕೈದಿ ಹಕ್ಕಿಗಳ ನೋವು ಅರ್ಥ
ಆಗುದ್ ಬೇಡ್ವೆ? ಒಳ್ಳೆ ಶೀರ ಅಲ್ಲ? (Pause) ನಾವು
ಹಕ್ಕಿಗಳು ಸ್ವತಂತ್ರ ಆಗಸದಿ, ಪಂಜರದಲ್ಲಿದ್ದು ಹಾಡಲಾರೆವು...

ದಿನೇಶ
ಯಾಕೋ? Remand home ನೆನ್ಪ್ ಬರ್ತಿದ್ಯಾ?

ರಿಚ್ಚಿ ಕೆಲವು ಕ್ಷಣ ಮೌನವಾಗುತ್ತಾನೆ

ರಿಚ್ಚಿ
Remand home ವಾಲಿ ಕಳೂಕೆ

ಎಂದು ರಿಚ್ಚಿ ಎದ್ದು ನಿಂತು

ರಿಚ್ಚಿ
ದಿನೇಶ. ಯಾವತ್ತಾದ್ರುಸ ಈ boatಇದ್ದು ತುದಿಯಲ್ಲಿ ಸಮುದ್ರದ
ಗಾಳಿಯ ವಿರುದ್ದ ನಿಲ್ಲಿಕ್ಕೆ try ಮಾಡಿದ್ಯಾ?

ರಿಚ್ಚಿ boatನ ತುದಿಯನ್ನು ಹತ್ತಿ ನಿಂತು

ರಿಚ್ಚಿ
Remand homeಅಲ್ಲಿ ಇಬರ್ಬೇಕಾದ್ರೆ, ದಿನಾ ಸಂಜೆ ಕಿಟ್ಕಿ ಹತ್ರ
ನಿಂತು ಹೊರ್ಗಡೆ ಪ್ರಪಂಚ ನೋಡ್ತಾ ಇದ್ದೆ

INSERT Ext shot of 5 ಮಹಡಿಯ building. ಪ್ರತಿಯೊಂದು ಮಹಡಿಯಲ್ಲಿ ಸುಮಾರು ಕಿಟಕಿಗಳು. Camera ನೆಲದಿಂದ ಮೇಲಕ್ಕೇರಿ 3ನೇ ಮಹಡಿಯ ಒಂದು ಕಿಟಕಿಯ ಬಳಿ ಹೋದರೆ, ಬಾಲಕ ರಿಚ್ಚಿ ಕಿಟಕಿಯ ಬಳಿ ನಿಂತು ಹೊರಗೆ ನೋಡುತ್ತಿರುವನು. ಅವನ ಕಣ್ಣುಗಳು ಏನನ್ನೋ ನಿರೀಕ್ಷಿಸುತ್ತಿದೆ

ರಿಚ್ಚಿ (VOICE)
ಅಲ್ಲು ಗಾಳಿ ಬೀಸ್ತಾಯಿತ್ತು. ಆದ್ರೆ ಆ ಗಾಳಿಯಲ್ಲಿ, ಯಾರೋ
ನನ್ನನ್ನು ಕಟ್ಹಾಕಿದ್ದಾರೆ ಅನ್ನೊ ಗಲೀಜ್ ವಾಸನೆ.

Cameraದ ಮುಂದೆ ಸರ್ರನೆ ಹಲವಾರು ಕಿಟಕಿಗಳು passಆಗಲು ಪ್ರಾರಂಭಿಸುತ್ತದೆ. ಪ್ರತಿಯೋಂದು ಕಿಟಕಿಗಳ್ಲಿ ರಿಚ್ಚಿ ನಿಂತಿದ್ದಾನೆ. ಕೊನೆಗೆ ಒಂದು ಕಟಕಿ ಬಂದು cameraದ ಮುಂದೆ ನಿಲ್ಲುತ್ತದೆ. ಬಾಲಕ ರಿಚ್ಚಿಯ ಮುಖಭಾವನೆಗಳು ಇನ್ನು ಬದಲಾಗಿರುವುದಿಲ್ಲ

ರಿಚ್ಚಿ (VOICE)
ಯಾವುದಾದ್ರು ಒಂದ್ ಕಿಟ್ಕಯಿಂದ ಆ ವಾಸ್ನೆ ಇಲ್ದಿದ್ ಗಾಳಿ
ಬೀಸ್ಬದ ಅಂತೇಳಿ ಅಲ್ಲಿರುವ ಪ್ರತಿಯೊಂದು ಕಿಟ್ಕಿಯಲ್ಲ
ಹುಡುಕಿದ್ದೇನೆ.

ರಿಚ್ಚಿ boatನ ತುದಿಯಲ್ಲಿ ಅವನ ಕೈಗಳನ್ನು ಅಗಲಿಸಿ ನಿಂತಿದ್ದಾನೆ

ರಿಚ್ಚಿ
ಹಾ. ಇದೇ ಗಾಳಿ ದಿನೇಶ, ನಾನು ಹುಡುಕ್ತಾ ಇದ್ದದ್ದು

ದಿನೇಶ ಅಲ್ಲೆ ನಿಂತು ಮೌನವಾಗಿ ರಿಚ್ಚಿಯ ಮಾತುಗಳನ್ನು ಕೇಳುತ್ತಿದ್ದಾನೆ.

ರಿಚ್ಚಿ
ನಾವು ಹಕ್ಕಿಗಳು ಸ್ವತಂತ್ರ ಆಗಸದಿ

ಪಂಜರದಲ್ಲಿದ್ದು ಹಾಡಲಾರೆವು

ದಿನೇಶನು ಸಹ ರಿಚ್ಚಿಯ ಜೊತೆಗೂಡಿ ಹಾಡಲು ಪ್ರಾರಂಭಿಸುತ್ತಾನೆ

ಸ್ವರ್ಣ-ಕಂಬಿಗಳಿಗೆ ಅಪ್ಪಳಿಸಿ

ನವಿರು ರೆಕ್ಕೆಗಳು ಮುರಿಯುವುದು

INSERT ತನ್ನ cellನಲ್ಲಿ ಕೂತಿರುವ ದಿನೇಶ

ಹುಲ್ಲಿನ ಗೂಡನು ಕಟ್ಟದಿರಿ

ಆಶ್ರಯವ ತುಳಿದು ಹೊಸಕಿರಿ

ಆದರೆ ರೆಕ್ಕೆಗಳನು ಕೊಟ್ಟರೆ

ಹಾರಲು ವಿಘ್ನವ ಹಾಕದಿರಿ

CUT TO:

EXT. NIGHT: MALPE BEACH

Camp fire ಉರಿಯುತ್ತಿದೆ. ಸುಧಿ ಚೆನ್ನಾಗಿ ಕುಡಿದು ಮಲಗಿದ್ದಾನೆ. ರಿಚ್ಚಿ ತನ್ನ ಕಾಲ್ಮೆಲೆ ಕಾಲು ಹಾಕಿಕೊಂಡು, ತಲೆಯ ಹಿಂದೆ ಕೈ ಇಟ್ಟುಕೊಂಡು, ತನ್ನ ಮುಖದ ಮೇಲೆ ಗನ್ ಇಟ್ಟು ಮಲಗಿದ್ದಾನೆ. ದಿನೇಶ ಹೊರಗಿಂದ ನಡೆದುಕೊಂಡು ಬರುತ್ತಾನೆ.

ದಿನೇಶ (VOICE)
ನೀಲ ಗಗನದ ಸೀಮೆಯ ಮುಟ್ಟಲು

ಮನದಲಿ ಆಸೆಯು ಜಿನುಗಿದವು

ಕೇಸರಿಯನು ಕೊಕ್ಕಿನಲಿ ಕಬಳಿಸಲು

ಅಗಿಯಲು ನಕ್ಷತ್ರ-ದಾಳಿಂಬೆಯ ಕಾಳು

ದಿನೇಶ ಬಂದು ರಿಚ್ಚಿಯ ಬಳಿ ಕೂರುತ್ತಾನೆ. ಅವನ ಕೈಯಲ್ಲಿ ಎರಡು role ಮಾಡಿರುವ ಗಾಂಜಾ ಇದೆ. ಒಂದನ್ನು ರಿಚ್ಚಿಯ ಎದೆಮೇಲಿಟ್ಟು ಇನ್ನೊಂದನ್ನು light ಮಾಡುತ್ತಿರುವಾಗ, ರಿಚ್ಚಿ ಎದ್ದು ತನ್ನ ಎದೆಯ ಮೇಲಿರುವ ಗಾಂಜಾವನ್ನು ಕೈಯಿಂದ ತಳ್ಳುತ್ತಾ.

ರಿಚ್ಚಿ
ಚಃ... ಎಂತದಾ ಅದು?

ದಿನೇಶ
ಯಾಕೊ?

ದಿನೇಶ ಗಾಂಜಾವನ್ನು ಒಮ್ಮೆ ಎಳೆಯುದನ್ನು ಕಂಡ ರಿಚ್ಚಿ

ರಿಚ್ಚಿ
ಇಷ್ಟೊತ್ತಿಗೆ ಅದ್ ಎಲ್ಲಿ ಸಿಕ್ತಾ?

ದಿನೇಶ "ಆಕಡೆ" ಎನ್ನುವಂತೆ ತನ್ನ ಮುಖವನ್ನು ಸನ್ನೆ ಮಾಡಿ ತೋರಿಸಿದಾಗ ರಿಚ್ಚಿ ಆ ಕಡೆ ನೋಡುವನು. ಅಲ್ಲೊಂದು school buildingನಲ್ಲಿ ಏನೊ activity ನಡೆಯುತ್ತಿರುತ್ತದೆ. ಅದನ್ನು ಕಂಡ ರಿಚ್ಚಿ.

ರಿಚ್ಚಿ
ಇಷ್ಟ್ ಹೊತ್ತಿಗೆ ಎಂತ ಮಾಡ್ತಿದ್ದಾರೆ ಅಲ್ಲಿ?

ದಿನೇಶ
ನಾಳೆಗೆ ಹುಲಿಗಳನ್ನ paint ಮಾಡ್ತಿದ್ದಾರೆ..

ರಿಚ್ಚಿ ದಿನೇಶನನ್ನು ಕಂಡು

ರಿಚ್ಚಿ
ಸರಿ ಒಂದು ದಮ್ ಕೊಡು

ದಿನೇಶ ನೆಲದಲ್ಲಿ ಬಿದ್ದಿರುವ ಗಾಂಜಾವನ್ನು ತೋರಿಸುತ್ತಾ

ದಿನೇಶ
ಅಲ್ಲ್ ಕೆಳಗೆ ಇನ್ನೊಂದು ಬಿದ್ದಿದ್ಯಲ್ಲೋ. ಅದನ್ನ್ ಎತ್ಕೊ.

ರಿಚ್ಚಿ ದಿನೇಶನ ಕೈಯಲ್ಲಿರುವುದನ್ನು ಕಸಿದುಕೊಳ್ಳುತ್ತಾ

ರಿಚ್ಚಿ
ಬೊಳಿ ಮಗನೆ. ಎಂತ ಒಂದ್ ಪೂರ್ತಿ ಎಳಿತಿಯಾ ನೀನು?

ಎಂದು ಹೇಳಿ ಒಂದು drag ಎಳೆಯುತ್ತಾನೆ, ಆಗ ಅವನಿಗೆ ಏನೊ ನೆನಪಾಗುತ್ತದೆ

ರಿಚ್ಚಿ
ಏಯ್. ಶಂಕರಣ್ಣನ ಹರಕೆ ಆಟ ಯಾವಾಗ ಮಾರ್ರೆ?

ದಿನೇಶನಿಗು ತಟ್ಟನೆ ನೆನಪಾಗಿ

ದಿನೇಶ
ಅಯ್ಯೊ. ಅದನ್ನೆ ಮರ್ತ್ ಬಿಟ್ವಲ್ಲೊ. ಇವತ್ತೆ ಅನ್ಸುತ್ತೆ.

ರಿಚ್ಚಿ
Time ಎಷ್ಟಾಯಿತು?

ದಿನೇಶ
11 ಆಯ್ತು

ರಿಚ್ಚಿ
ಜಾಸ್ತಿ ತಡಾ ಎಂತ ಆಗ್ಲಲ್ಲ. ಹೊರಡುವ ಬಾ

ಇಬ್ಬರು ಎದ್ದು ಹೊರಡುವರು. ಆಗ ದಿನೇಶ, ಸುಧಿಯನ್ನು ಎಬ್ಬಿಸಲು ಪ್ರಯತ್ನಿಸುವನು, ರಿಚ್ಚಿ ನಡೆದುಕೊಂಡುಹೋಗುವುದನ್ನು ನೊಡಿದ ದಿನೇಶ

ದಿನೇಶ
ಇವನನ್ನ್ ಏನೊ ಮಾಡೋದು?

ರಿಚ್ಚಿ
ಅವನನ್ನ್ ಅಲ್ಲಿಯೆ ಬಿಟ್ಟ್ ಬಿಡ. ಸ್ವಲ್ಪ ಜಾಸ್ತಿಯೆ ಕುಡ್ದಿದ್ದಾನೆ.
ಅವನನ್ನು ಕಕರ್ಕೊಂಡ್ ಹೊಗ್ಲಿಕ್ಕೆ ಆಗುದಿಲ್ಲಾ.

ದಿನೇಶ ರಿಚ್ಚಿಯ ಬಳಿ ಒಡುತ್ತಾ.

ದಿನೇಶ
ಸರಿ... ಸರಿ... ಎಲ್ಲಿಗ್ ಓಡ್ತಿದ್ಯ? ನನ್ಗೊಂದ್ ದಮ್ ಕೊಡು.

ರಿಚ್ಚಿ
ಎಯ್ ಪಂಕಿನ ಹಾಗೆ ಮಾಡ್ಬೇಡ. ಒಂಚುರು ನಿಲ್ಲ

ರಿಚ್ಚಿ ಇನ್ನೊಂದು ದಮ್ ಎಳೆದು ದಿನೇಶನಿಗೆ ಕೊಡುತ್ತಾನೆ

ರಿಚ್ಚಿ
ನಾಳೆ ರಾತ್ರಿಗೆಲ್ಲಾ ರೆಡಿಯಾ?

ದಿನೇಶ
ಹೌದು. ಅಲ್ತಾಪ್ ಎಲ್ಲಾ ನೊಡ್ಕೋತಿದ್ದಾನೆ.

CUT TO:

EXT. NIGHT: SHANKER POOJARY'S HOUSE / PADDY FIELD

ಒಂದಷ್ಟು ಮರಗಳು. ಅಲ್ಲೊಂದು ಪೊದೆಯಹತ್ತಿರ ಯಕ್ಷಗಾನ ಕಲಾವಿದ ಕುಳಿತು ತನ್ನ ಎರಡು ಕಾಲುಳನ್ನು balance ಮಾಡುತ್ತ ಒಂದು ಕೈಯಲ್ಲಿ ಬೀಡಿಯನ್ನು ಹಿಡಿದು ಇನ್ನೊಂದು ಕೈಯಲ್ಲಿ ಮೂತ್ರ ವಿಸರ್ಜನೆಮಾಡುತ್ತಿರುವನು. ರಿಚ್ಚಿ ಹಾಗು ದಿನೇಶ ಕಾಡಿನೊಳಗಿಂದ ನಡೆದುಕೊಂಡು ಬರುತ್ತಾರೆ. ರಿಚ್ಚಿ ದಿನೇಶನನ್ನು ಮುಂದೆ ಹೊಗಲು ಹೇಳಿ ಇವನು ಮೂತ್ರ ವಿಸರ್ಜನೆ ಮಾಡಲು ಅಲ್ಲಿರುವ ಪೊದೆಯ ಬಳಿ

ನಿಂತಿರುವ ಯಕ್ಷಗಾನ ಕಲಾವಿದನ ಪಕ್ಕದಲ್ಲಿ ನಿಂತು

ರಿಚ್ಚಿ
ಎಂತ ಕಲಾವಿದ್ರೇ? ಒಂದ್ ಕೈಯಲ್ಲಿ ಕತ್ತಿ, ಇನ್ನೊಂದ್
ಕೈಯಲ್ಲಿ ನಾಡ ಬಂದೂಕು. ಎಲ್ ದರೋಡೆ ಮಡುಕ್ ಹೋತ್ರಿ?

ಯಕ್ಷಗಾನ ಕಲಾವಿದನ ಬಾಯಿಯಲ್ಲಿ ಬೀಡ ತಿನ್ನುತ್ತಾ, ರಿಚ್ಚಿಯನ್ನು ನೋಡಿ ನಗುತ್ತಾ

ಕಲಾವಿದ
ದರೋಡೆ ಎಂತ ಇಲ್ಲ ಮರಾಯ. ಬಯಸದೆ ಬಂದದ್ದನ್ನು
ಜಾಸ್ತಿಹೊತ್ತು ತಡ್ಕೊಳ್ಳಿಕ್ ಆಗ್ತದ?

ಕಲಾವಿದನ ಮಾತು ಸರಿಯಾಗಿ ಅರ್ತ ಆಗದೆ

ರಿಚ್ಚಿ
ಬಾಯಲ್ಲಿರುವ ಜ್ವಾಲೆಯನ್ನುನ ಹೊರಗೆ ಚೆಲ್ಲಿ ಕಲಾವಿದರೆ. ಇಲ್ಲ
ಅಂದ್ರೆ ನಿಮ್ಮ ತಾಪ ನಿಮ್ಮನ್ನೆ ಸಟ್ಟು ಬಿಡ್ಬಹುದು.

ಎಂದು ಹೇಳಿ ಅವನ ಮೂತ್ರ ವಿಸರ್ಜನೆಯನ್ನು ಮುಗಿಸಿಕೊಂಡು ರಿಚ್ಚಿ ಹೊರಡುತ್ತಾನೆ. ಅಲ್ಲಿಂದ ನೇರವಾಗಿ ಶಂಕರ್ ಪೂಜಾರಿಯ ಬಳಿ ಬರುವನು. ದಿನೇಶ ಅವನನ್ನು ಹಿಂಬಾಲಿಸುತ್ತಾನೆ. ಶಂಕರ್ ಪೂಜಾರಿ ಯಕ್ಷಗಾನ ನೋಡುತ್ತಿದ್ದಾನರೆ. ಅವರ ಬಳಿ ಇನ್ನಷ್ಟು ಅವರ ಕಡೆಯವರು ನಿಂತಿರುತ್ತಾರೆ. ಊರಿನ ಜನರು ಯಕ್ಷಗಾನ ನಡೆಯುತ್ತಿರುವ ರಂಗಸ್ಥಳದ ಮುಂಬದಿಯಲ್ಲಿ ಕುಳಿತಿರುತ್ತಾರೆ. ರಿಚ್ಚಿ ಶಂಕರ್ ಪೂಜಾರಿಯ ಬಳಿ ಬಂದು ನಿಂತಾಗ ಶಂಕರ್ ಪೂಜಾರಿಯು ರಿಚ್ಚಿಯನ್ನು ಕಂಡು

ಶಂಕರ್ ಪೂಜಾರಿ
ಪುಸರ್ಸೊತ್ ಆಂಡಾ ಬರ್ರೇಗ್?

ಅವನ ಮಾತಿಗೆ ಏನು ಉತ್ತರ ಕೊಡದೆ ಸುಮ್ಮನೆ ನೋಡುತ್ತಾನೆ. ನಂತರ ಇಬ್ಬರು ಯಕ್ಷಗಾನ ನೊಡಲು ಪ್ರಾರಂಭಿಸುವರು. ಯಕ್ಷಗಾನ ಪ್ರಸಂಗದಲ್ಲಿ ಮಲ್ಪೆಯಲ್ಲಿರುವ ವಡಪಾಂಡೇಶ್ವರ ಬಲರಾಮನ ವಿಗ್ರಹ ಹಾಗು ಉಡುಪಿ ಶ್ರಿ ಕೃಷ್ಣನ ವಿಗ್ರಹವನ್ನು ಮದ್ವಾಚಾರ್ಯರು ಪ್ರತಿಷ್ಠಾಪಿಸಿರುವ ರೀತಿ ತಿಳಿದು ಬರುತ್ತದೆ. ಅಜರ್ಜುನನು ಧ್ವಾರಕೆಗೆ ಬಂದು, ಎರಡು ವಿಗ್ರಹಗಳನ್ನು ಗೋಪಿಚಂದನದಿಂದ ಮುಚ್ಚಲಾಗಿ, ಅವುಗಳನ್ನು ರುಕ್ಮಿಣಿಯ ತೋಟದಲ್ಲಿ ಅಡಗಿಸಿ ಇಡುವನು. ಮುಂದೆ ಧ್ವಾರಕೆಯಿಂದ ಹೊರಡುವ ಹಡಗಿನಲ್ಲಿ ಮರದ ದಿಮ್ಮಿಯ ರೂಪದಲ್ಲಿ ಸೇರಿಕೊಂಡು, ಆ ಹಡಗು ಮಲ್ಪೆಯ ಬಳಿ ಸಾಗುತ್ತಿರುವಾಗ, ಬಿರುಗಾಳಿಗೆ ಸಿಲುಕಿ ಹಡಗು ಮುಳುಗುವ ಸಂದರ್ಬದಲ್ಲಿ, ಸಮೀಪದಲ್ಲೆ ಧ್ಯಾನ ಮಗ್ನರಾಗಿರು ಮದ್ವಾಚಾರ್ಯರು ತಮ್ಮ ಮಂತ್ರ ಶಕ್ತಿಯಿಂದ ಎಲ್ಲಾ ವ್ಯಾಪಾರಸ್ತರನ್ನು ಕಾಪಾಡುತ್ತಾರೆ. ತಮ್ಮ ಪ್ರಾಣವನ್ನು ಕಾಪಾಡಿದ ಮದ್ವಾಚಾರ್ಯರ ಬಳಿ ವ್ಯಾಪಾರಸ್ತರು ಸಂತೋಷದಿಂದ ಪ್ರತಿಯಾಗಿ ಏನು ಕೊಡಬೇಕೆಂದು ಕೇಳಿದಾಗ, ಮದ್ವಾಚಾರ್ಯರು ಆ ಹಡಗಿನಲ್ಲಿರುವ ಎರಡು ಗೋಪಿಚಂದನದ ದಿಮ್ಮಿಯನ್ನು ಕೇಳುವರು. ಆ ದಿಮ್ಮಿಗಳನ್ನು ಅವರಿಂದ ಪಡೆದು ಅಲ್ಲಿಂದ ಉಡುಪಿಯ ಮಠದ ಕಡೆ ಹೊರಟಾಗ ಮಲ್ಪೆಯ ವಡಪಾಂಡಿಬಳಿ ಒಂದು ದಿಮ್ಮಿಯು ಕೆಳಗೆ ಬಿದ್ದು ಒಡೆದು ಅದರಿಂದ ಬಲರಾಮನ ಮೂರ್ತಿಯು ಹೊರಬರುತ್ತದೆ. ಆಗ ಮದ್ವಾಚಾರ್ಯರು ಆ ಮೂರ್ತಿಯನ್ನು ಅಲ್ಲಿಯೆ ಪ್ರತಿಷ್ಠಾಪನೆ ಮಾಡಿ, ಅದು ವಡಪಾಂಡೆಶ್ವರ ಬಲರಾಮ ದೇವಸ್ಥಾನವಾಗಿ ನಿಮರ್ಮಾಣವಾಗುತ್ತದೆ. ಇನ್ನೊಂದು ದಿಮ್ಮಿಯನ್ನು ಉಡುಪಿಯ ಕಲ್ಯಾಣಿಯಲ್ಲಿಟ್ಟಕೂಡಲೆ ದಿಮ್ಮಿ ಒಡೆದು ಶ್ರಿ ಕೃಷ್ಣನ ವಿಗ್ರಹ ಮೇಲೆ ಬರುತ್ತದೆ. ಅದನ್ನು ಸಮೀಪದಲ್ಲಿ ಪ್ರತಿಷ್ಠಾಪಿಸಿ ಅಲ್ಲಿ ಉಡುಪಿ ಶ್ರೀ ಕೃಷ್ಣ ದೇವಸ್ಥಾನ ನಿಮರ್ಮಾಣವಾಗುತ್ತದೆ.

ಯಕ್ಷಗಾನವನ್ನು ನೋಡುತ್ತಿದ್ದ ಶಂಕರ್ ಪೂಜಾರಿ ರಿಚ್ಚಿಯನ್ನು ಕಂಡು ಏನೋ ಹೇಳಲು ಹೋದವರು ದಿನೇಶನನ್ನು ನೋಡಿ ಸುಮ್ಮನ್ನಾಗುತ್ತಾರೆ. ರಿಚ್ಚಿ ದಿನೇಶನನ್ನು ಕಂಡ ಕೂಡಲೆ ದಿನೇಶನಿಗೆ ಅರಿವಾಗಿ cigarette ಹಚ್ಚಿಕೊಂಡು ದೂರ ಹೋಗಿ ನಿಲ್ಲುತ್ತಾನೆ. Backgroundನಲ್ಲಿ ರಿಚ್ಚಿ ಶಂಕರ್ ಪೂಜಾರಿಯ ಜೊತೆ ಮಾತನಾಡುತ್ತಿದ್ದಾನೆ. ದಿನೇಶ ಯಕ್ಷಗಾನ ನೋಡುತ್ತಿರುತ್ತಾನೆ. ಸ್ವಲ್ಪ ಹೊತ್ತಿನ ನಂತರ ಅವನ ಗಮನ ರಿಚ್ಚಿ ಹಾಗು ಶಂಕರ್ ಪೂಜಾರಿಯ ಕಡೆ ಹೋಗುತ್ತದೆ. ಅವರಿಬ್ಬರು ಯಾವುದೋ ಗಂಭೀರ ವಿಚಾರದ ಬಗ್ಗೆ ಮಾತನಾಡುತ್ತಿದ್ದಂತೆ ಕಾಣುವುದು. ರಿಚ್ಚಿ ಹಿಂತಿರುಗಿ ದಿನೇಶನನ್ನು ನೋಡಿ ಅವನನ್ನು ಕರೆಯುತ್ತಾನೆ. ಹತ್ತಿರ ಬರುವ ದಿನೇಶನಿಗೆ

ರಿಚ್ಚಿ
ಈ ಬಾಲು ಅಂದ್ರೆ ಯಾರು ಗೋತ್ತುಂಟಾ?

ದಿನೇಶ

ಹಾ... ಗೊತ್ತಲ್ಲಾ

ರಿಚ್ಚಿ
ಎಲ್ಲಿ ಸಿಕ್ತಾನೆ?

ದಿನೇಶ
ಇಷ್ಹೊತ್ತಿಗೆ... ಮನೆಯಲ್ ಇರ್ಬಹುದು

ರಿಚ್ಚಿ
ಸರಿ. ಬಾ ಕಕರ್ಕೊಂಡ್ ಬರುವ.

ರಿಚ್ಚಿ ಅಲ್ಲಿಂದ ಹೊರಡುವಷ್ಟರಲ್ಲಿ ಶಂಕರ್ ಪೂಜಾರಿ ಅವನನ್ನು ತಡೆದು

ಶಂಕರ್ ಪೂಜಾರಿ
ಈಗ ಬೇಡ. ಬೆಳಿಗ್ಗೆ ಹೋಗಿ ನೋಡಿದ್ರೆ ಸಾಕು. ನಾನ್ ಹೇಳ್ತೆನೆ.

ಎಂದು ಹೇಳಿ ಯಕ್ಷಗಾನದ ಕಡೆ ನೋಡುವರು. ರಿಚ್ಚಿ ಹಾಗು ದಿನೇಶ ಸಹ ಯಕ್ಷಗಾನದ ಕಡೆ ನೋಡುವರು. ಯಕ್ಷಗಾನದಲ್ಲಿ ಹಡಗು ಮುಳುಗುವ ಬಗ್ಗೆ ಪ್ರಸಂಗ ಬರುವುದು. ಒಬ್ಬ ಕಲಾವಿದ

ಕಲಾವಿದ ೧ (ನಗುತ್ತ)
ಯಾವ್ದಕ್ಕೂ ಒಮ್ಮೆ ಸ್ವಾಮಿಗಳು ಹಡಗನ್ನು ಪೂರ್ತಿ ಪರಿಶೋದಿಸಿ ನೋಡ್ಬೇಕ್ಕಿತ್ತು, ಅಲ್ವಾ? ಯಾರಿಗೊತ್ತು, ಹಡ್ಗಲ್ಲಿ ಇನ್ನಷ್ಟು ವಿಗ್ರಹಗಳು ಇರವ ಸಾಧ್ಯತೆಗಳು ಉಂಟು.

ಕಲಾವಿದ ೨ (ನಗುತ್ತ
ಹೌದು ಹೌದು. ಹೇಳಿಕ್ಕಾಗುದಿಲ್ಲ. ಈವಾಗ್ಲ ಹೋಗಿ ಹುಡುಕಿದ್ರೆ, ಸಮುದ್ರದ ಆಳದಲ್ಲಿ ಒಂದೆರಡು ವಿಗ್ರಹಗಳು ಸಿಕ್ಕಿದ್ರು ಸಿಗ್ಬಹುದು

CUT TO:

EXT. DAY: SHANKER POOJARY'S HOUSE

ಶಂಕರ್ ಪೂಜಾರಿ ತನ್ನ ಆರಾಮ ಕುರ್ಚಿಯ ಮೇಲೆ ಕುಳಿತಿದ್ದಾರೆ. ಅವರ ಕಡೆಯವರು ಸುತ್ತಲು ನಿಂತಿದ್ದಾರೆ. Background ಗದ್ದೆಯಲ್ಲಿ ಹಿಂದಿನ ರಾತ್ರಿ ಯಕ್ಷಗಾನಕ್ಕಾಗಿ ಹಾಕಿದ್ದ ರಂಗಸ್ಥಳವನ್ನು ತೆರವುಗೊಳಿಸುತ್ತಿದ್ದಾರೆ. ರಿಚ್ಚಿ, ದಿನೇಶ ಮತ್ತು ಸುಧಿ, ಮೂವರು ಶಂಕರ್ ಪೂಜಾರಿಯ ಬಳಿ ನಿಂತಿದ್ದಾರೆ. ಶಂಕರ್ ಪೂಜಾರಿ ತನ್ನ ಕಡೆಯವನ ಹತ್ತಿರ

ಶಂಕರ್ ಪೂಜಾರಿ
ಮುನ್ನನ್ ಬರ್ರೆ ಪಂತಡ್ ಅತ್ತಾ. ಬತ್ತೇನಾ?

ವ್ಯಕ್ತಿ
ಇಜ್ಜಿ ಅಣ್ಣ. ಪಂದ್ ಕಡಪುಡ್ದಾ. ಬರುವೆ.

ಶಂಕರ್ ಪೂಜಾರಿ ಸ್ವಲ್ಪ ಯೇಚನೆಮಾಡಿ ರಿಚ್ಚಿಯ ಬಳಿ

ಶಂಕರ್ ಪೂಜಾರಿ
ಇದಕ್ಕೆಲ್ಲಾ ಗಮನ ಕೋಡ್ತಾ ಇಲ್ವಾ ನೀನು?

ರಿಚ್ಚಿ
140 boat ಉಂಟಣ್ಣಾ. ಬೇರೆಸ ಎಲ್ಲ ನೋಡ್ಬೇಕಲ್ಲ?

ಶಂಕರ್ ಪೂಜಾರಿ
ಇವರಿಬ್ರು ಎಂತ ಮಾಡ್ತಾರೆ?

ಶಂಕರ್ ಪೂಜಾರಿ ಅಲ್ಲಿ ನಿಂತಿದ್ದ ಸುಧಿ ಹಾಗು ದಿನೇಶನ ಕಡೆ ನೋಡುವರು. ರಿಚ್ಚಿ ಅವರಿಬ್ಬರ ಕಡೆ

ನೋಡಿ ನಗುವನು. ಅವರಿಬ್ಬರು ಏನುಮಾಡಲು ತೋಚದೆ ಅವರು ನಗುತ್ತಾರೆ. ಶಂಕರ್ ಪೂಜಾರಿ ಸ್ವಲ್ಪ ಮೌನವಾಗಿ ನಂತರ ಅವರ ಕಡೆಯವನನ್ನು ನೋಡಿ ಕೈ ಚಾಚುತ್ತಾನೆ. ಅವರ ಕಡೆಯವರನು ಬಂದು ಅವರ ಕೈಗೆ cigar ಕೊಡುವನು. ಶಂಕರ್ ಪೂಜಾರಿ cigarನ ತುದಿಯನ್ನು ಅಡ್ಕತ್ರಿಯಲ್ಲಿ ತುಂಡರಿಸಿ ಅದನ್ನು ಹಚ್ಚಿಕೊಂಡು ಸೇದುತ್ತಾ, ಅಲ್ಲಿಯೆ ದೂರದಲ್ಲಿ ಕೋಳಿ ಜಗಳಕ್ಕೆ ತಾಲೀಮು ನಡೆಯುತ್ತಿರುವಲ್ಲಿ ನೋಡುತ್ತಾನೆ. ಅದನ್ನು ಗಮನಿಸುತ್ತಾ ರಿಚ್ಚಿಯ ಕಡೆಗೆ

ಶಂಕರ್ ಪೂಜಾರಿ
ನಂದೆರಡು fighters ನೋಡಿದ್ದಿಯಾ? ಒಂದೋಂದಕ್ಕೆ ಆರಾರ್ ಸಾವಿರ ಕೊಟ್ಟಿದ್ದೆನೆ..

ಶಂಕರ್ ಪೂಜಾರಿ ಕೋಳಿಗೆ ತಾಲೀಮು ನಡೆಸುತ್ತಿರುವವನಿಗೆ

ಶಂಕರ್ ಪೂಜಾರಿ
ಎಯ್ ಈರಾ. ಸರಿಯಾದ್ ತುವೊನೊ್ನಡು ಐಕ್ಲೇನ. ನಿನ್ನ ರಡ್ ತಿಂಗೊಲ್ದ ಸಂಬಳಡ್ದ್ ಜಾಸ್ತಿ ಕ್ರಯತ ಕೋರಿಲು

ಈರ
ದಾಲಾ ಪೊಡ್ಯೊಡ್ಚಿ ದನಿಕುಲೆ. ಈ ಸರ್ತಿ ನೆಕುಲೇ ಗೆಂದುನು

ಶಂಕರ್ ಪೂಜಾರಿ ನಗುವನು. ನಂತರ ರಿಚ್ಚಿಯನ್ನು ನೋಡುತ್ತಾ

ಶಂಕರ್ ಪೂಜಾರಿ
ಇದು ಕಾಸಿನ್ ವಿಷಯ ಅಲ್ಲ. ಇದು ನೀಯತ್ತಿನ ವಿಷಯ. ಇವನನ್ನು ನಾವು ಸುಮ್ನೆ ಬಿಟ್ರೆ, ಉಳಿದವರೆಲ್ಲ ನಮ್ಮನ್ನು ಸಲೀಸಾಗ್ ತೆಗೊಳ್ತಾರೆ. ಎಂತ ಮಾಡ್ಬೇಕಂತ ನೀನ್ ನೋಡು.

ರಿಚ್ಚಿ
ನಾನ್ ನೋಡ್ಕೊಳ್ತೆನೆ

ಶಂಕರ್ ಪೂಜಾರಿ
ಜಾಸ್ತಿ ಎಂತ ಮಾಡ್ಲಿಕ್ ಹೋಗ್ಬೇಡ ಮಾರಾಯ. ಎಷ್ಟ್ ಬೇಕ್ ಅಷ್ಟೆ.

ರಿಚ್ಚಿ ತಲೆ ಅಲ್ಲಾಡಿಸುತ್ತಾನೆ. ಸುಧಿ ಮತ್ತು ದಿನೇಶ ನಗಲು ಪ್ರಾರಂಭಿಸುತ್ತಾರೆ. ರಿಚ್ಚಿ ಸುಧಿ ಹಾಗು ದಿನೇಶ ನನ್ನು ನೋಡಿ

ರಿಚ್ಚಿ
ಎಂಚಿನಯ. ಮಲರ್ಲಾ?

ದಿನೇಶ ಹಾಗು ಸುಧಿ ನಗುವುದನ್ನು ಮುಂದುವರಿಸುವರು. ಆಗ ಶಂಕರ್ ಪೂಜಾರಿಯ ಕಡೆಯವರು ನಗಲು ಪ್ರಾರಂಭಿಸುವರು. ಅವರಲ್ಲಿ ಒಬ್ಬ

ವ್ಯಕ್ತಿ (ನಗುತ್ತ)
ರಿಚ್ಚಿಯನ್ ಗಿಡ ಕಿತ್ಕೊಂಡ್ ಬಾ ಅಂತೇಳಿ ಕಳ್ಸಿದ್ರೆ, ಗಿಡ ಕಿತ್ತು ಸುಣ್ಣದ್ ನೀರ್ ಹಾಕಿ ಬತರ್ತಾನೆ

ಶಂಕರ್ ಪೂಜಾರಿ (ನಗುತ್ತ)
ನೋಡು. ಎಲ್ಲರಿಗು ನಿನ್ನಬಗ್ಗೆ ಸರಿಯಾಗಿ ಗೊತ್ತಿದೆ

ಸುಧಿ
ಅಣ್ಣ... ನಿನ್ನೆ ಮಧ್ಯಾನ ಒಬ್ಬನ ಮೂಗ್ ಒಡ್ದು ಸುಣ್ಣದ ನೀರ್ ಹಾಕಿ ಬಂದ

ರಿಚ್ಚಿ ಸಿಟ್ಟಿಗೇರುತ್ತಾನೆ

ರಿಚ್ಚಿ

ತೊರ್ಪ್ಯೆ ಇತ್ತೆ ಬೇವರ್ಸಿ. ನಿನ್ನೆ ಕುಡ್ದದ್ದು ಇನ್ನು ಇಳಿಲಿಲ್ವ?

ಶಂಕರ್ ಪೂಜಾರಿ ರಿಚ್ಚಿಯನ್ನು ಕಂಡು

ಶಂಕರ್ ಪೂಜಾರಿ
ಇಲ್ಲಿ ಬಾ

ರಿಚ್ಚಿ ಅವರ ಬಳಿ ಹೋಗುವನು. Background ನಲ್ಲಿ bullet ಬಂದು ನಿಲ್ಲುವ ಶಬ್ದ ಕೇಳುವುದು. ಶಂಕರ್ ಪೂಜಾರಿ ರಿಚ್ಚಿಯ ಕೈ ಹಿಡಿದು, ಅಲ್ಲಿಯೇ ಕುಳ್ಳಿರಿಸಿಕೊಂಡು ಅವನ ತಲೆ ಸವರಿ ಅವನಿಗೆ ಏನೋ ಹೇಳಲು ಹೋಗುವಾಗ ಒಬ್ಬ ವ್ಯಕ್ತಿ ಬಂದು

ವ್ಯಕ್ತಿ
ಅಣ್ಣಾ... ಮುನ್ನ ಬತ್ತೆ

ಶಂಕರ್ ಪೂಜಾರಿ ಒಮ್ಮೆ ಮುನ್ನನ ಕಡೆ ನೋಡುವನು

ಶಂಕರ್ ಪೂಜಾರಿ
ಸರಿ... ಕಾಪರೆ ಪನ್

ವ್ಯಕ್ತಿ ಹೊರಡುವನು. ಶಂಕರ್ ಪೂಜಾರಿ ರಿಚ್ಚಿಯನ್ನು ಕಂಡು

ಶಂಕರ್ ಪೂಜಾರಿ
ಗಿಡ ಮಾತ್ರ ಕೀಳು. ಸುಣ್ಣದ್ ನೀರ್ ಹಾಕ್ಲಿಕ್ಕೆ ಹೊಗ್ಬೇಡ.
ಗೊತ್ತಾಯ್ತಾ?

ರಿಚ್ಚಿ ತಲೆ ಬಾಗಿಸಿ, ಸರಿ ಅನ್ನೋ ರೀತಿಯಲ್ಲಿ ತಲೆ ಅಲ್ಲಾಡಿಸುತ್ತಾನೆ

ಶಂಕರ್ ಪೂಜಾರಿ
ಇಲ್ನೋಡು. ಎಷ್ಟ್ ಬೇಕ್ ಅಷ್ಟೆ. Control ತಪ್ಪಿ ಎಂತಸ
ಮಾಡ್ಬೇಡ

ರಿಚ್ಚಿ ಇನ್ನೋಮ್ಮೆ ತಲೆ ಅಲ್ಲಾಡಿಸುವನು.

Backgroundನಲ್ಲಿ ವ್ಯಕ್ತಿ ಮುನ್ನನ ಬಳಿ ಹೋಗಿ ಮಾತನಾಡುವನು. ಮುನ್ನ, ಅಲ್ಲಿ ನಡೆಯುತ್ತಿರುವ ಕೋಳಿ ಜಗಳವನ್ನು ನೋಡುತ್ತಾ ಕುಳಿತು ಕೊಳ್ಳುತ್ತಾನೆ. ಶಂಕರ್ ಪೂಜಾರಿ ಎಲ್ಲರನ್ನು ಒಮ್ಮೆ ನೋಡಿ, ತನ್ನ ಆರಾಮ ಕುರ್ಚಿಯಿಂದ ಎದ್ದು, ರಿಚ್ಚಿಯನ್ನು ಇನೊ್ನಂದುಕಡೆಗೆ ಕರೆದುಕೊಂಡು ಹೋಗುವನು. ಅಲ್ಲಿರುವವರು ಅವರಿಬ್ಬರಿಗೆ ಹೋಗಲು ಜಾಗ ಮಾಡಿಕೊಡುವರು. ಶಂಕರ್ ಪೂಜಾರಿ ಹಾಗು ರಿಚ್ಚಿ ಗದ್ದೆಯ ಕಡೆ ನಡೆದುಕೊಂಡು ಹೋಗುವರು. ದಿನೇಶ ಮುನ್ನನ ಕಡೆ ನಡೆಯುವನು. ಮುನ್ನನ ಬಳಿ ಹೋಗಿ ಕುಳಿತುಕೊಳ್ಳುವನು. ಸುಧಿ ಶಂಕರ್ ಪೂಜಾರಿಯ ಕಡೆಯವರ ಹತ್ತಿರ ಹೋಗಿ

ಸುಧಿ
ಅಣ್ಣ ಒಂದು cigar ಕೊಡಿ

ವ್ಯಕ್ತಿ
ಸುಮ್ನಿರು ಮಾರ್ರೆ... ಶಂಕರಣ್ಣನಿಗೆ ಗೊತ್ತಾದ್ರೆ ಬೈತ್ತಾರೆ

ಸುಧಿ
ಒಂದ್ ಕೊಟ್ರೆ ಎಂತ ಹೇಳುದಿಲ್ಲ ಮಾರ್ರೆ...

Backgroundನಲ್ಲಿ ಶಂಕರ್ ಪೂಜಾರಿ ರಿಚ್ಚಿಯ ಜೊತೆ ಹಾಗು ದಿನೇಶ ಮುನ್ನನ ಜೊತೆ ಮಾತನಾಡುತ್ತಿರುವರು. Wide shotಗೆ cut ಆದರೆ ಶಂಕರ್ ಪೂಜಾರಿ ಮುನ್ನನನ್ನು ಕರೆಯುವರು. ಮುನ್ನ ದಿನೇಶನಿಗೆ ಏನೋ ಹೇಳಿ ಶಂಕರ್ ಪೂಜಾರಿಯ ಕಡೆ ಓಡುವನು. ಮುನ್ನ ಅವರ ಹತಿ್ತರ ಬಂದು ನಿಲ್ಲುವನು. ಶಂಕರ್ ಪೂಜಾರಿ ರಿಚ್ಚಿಗೆ

ಶಂಕರ ಪೂಜಾರಿ
ಸರಿ. ನನಗೆ ವಿಷಯ ಗೊತ್ತಾದ್ ಕೂಡ್ಲೆ ಯಾನನ್ರಾದ್ರು car

ಒಟ್ಟಿಗೆ ಕಳಿಸ್ತೆನೆ. ಅವನು ನಿನ್ನನ್ನು ಅಲ್ಲಿಗೆ ಕಕರ್ಕೊಂಡ್ ಹೋಗ್ತಾನೆ. ನೀನ್ ಮೊದ್ಲು ಆ ಬಾಲುನ್ ಹುಡ್ಕಿ ಎಂತ ಮಾಡ್ತಿಯ ನೊಡು

ರಿಚ್ಚಿ
ಸರಿ...

ಎಂದು ರಿಚ್ಚಿ ಅಲ್ಲಿಂದ ಹೊರಡುವನು. ಅಲ್ಲಿಯೇ ಹತ್ತಿರದಲ್ಲಿ ನಿಂತಿದ್ದ ಮುನ್ನ ಪೂಜಾರಿಯ ಬಳಿ ಬರುವನು. ದಿನೇಶನು ಅಲ್ಲಿಯೆ ಸ್ವಲ್ಪ ದೂರದಲ್ಲಿ ಬಂದು ನಿಂತಿರುತ್ತಾನೆ. ರಿಚ್ಚಿಯ ಜೊತೆ ಅವನೂ ಹಿಂತಿರುಗಿ ಹೊರಡುವನು.

ದಿನೇಶ
ಬಾಲು ಹುಲಿವೇಶ ಹಾಕಿದ್ದಾನಂತೆ. ಅದೇ ನಿನ್ನೆ ರಾತ್ರಿ...

ಸುಧಿ ಉಳಿದಿರುವವರ ಜೊತೆ ಕೈಯಲ್ಲಿ cigar ಹಿಡಿದುಕೊಂಡು ಮಾತನಾಡುತ್ತಿದ್ದಾನೆ. ಅದನ್ನು ಕಂಡ ರಿಚ್ಚಿ ಅವನನ್ನು ಕರೆಯುತ್ತಾನೆ. ಸುಧಿ ರಿಚ್ಚಿಯನ್ನು ಕಂಡು ಓಡಿ ಬರುವಷ್ಟರಲ್ಲಿ ಅವನನ್ನು ಶಂಕರ್ ಪೂಜಾರಿ ಕರೆಯುತ್ತಾರೆ. ಸುಧಿ ಅವರ ಬಳಿ ಓಡುತ್ತಾನೆ. ರಿಚ್ಚಿ ದಿನೇಶನ ಕಡೆ ನೋಡುತ್ತಾನೆ

ದಿನೇಶ
ನಿನ್ನೆ ರಾತ್ರಿ ಮಲ್ಪೆ ಸ್ಕೂಲ್ನಲ್ಲ್ light ಉರಿತಿತ್ತಲ. ಅಲ್ಲೇ ಇದ್ದ ಅಂತೆ. ಬೆಳಗ್ಗೆ ಎದ್ದು ಎಲ್ರು ರಥಬೀದಿ ಕಡೆ ಹೊರ್ಟಿಬರ್ಬೇಕು

ರಿಚ್ಚಿ, ಅವರ ಬಳಿ ಓಡಿ ಬರುವ ಸುಧಿಯನ್ನು ಕಂಡು

ರಿಚ್ಚಿ
ನಿನ್ಗೆ ಬೇವರ್ಸಿ ಸಲಿಗೆ ಕೊಟ್ಟದ್ ಜಾಸ್ತಿ ಆಯ್ತು

ಸುಧಿ
ನಾನೆಂತ ಮಾಡಿದೆ ಮಾರ್ರೆ?

ರಿಚ್ಚಿ
ನಿಲ್ಲು ಹೇಳ್ತೆನೆ ನಿಂಗೆ. ಬಾರಿ ಮಾತಾಡ್ತಿಯಲ್ಲ?

ಎಂದು ಅವನ ಕೈಯಲ್ಲಿದ್ದ cigarಅನ್ನು ಕಿತ್ತುಕೊಳ್ಳುತ್ತಾನೆ. ಸುಧಿ ಸಪ್ಪಗಾಗುತ್ತಾನೆ. Long shot of ರಿಚ್ಚಿ, ದಿನೇಶ ಹಾಗು ಸುಧಿ ಹೊರಡುವರು

ಸುಧಿ
ಎಲ್ಲಿಗೆ ಹೋಗ್ತಿದ್ದೇವೆ

ರಿಚ್ಚಿ
ನಿನ್ನ ಅಪ್ಪನ ಮನೆಗೆ

CUT TO:

INSERT: ಶಂಕರ್ ಪೂಜಾರಿ ಆರಾಮ ಕುರ್ಚಿಯ ಮೇಲೆ ಕುಳಿತಿದ್ದಾರೆ. ಅವರ ಪಕ್ಕ ಸುಧಿ ಹಾಗು ಉಳಿದವರು ನಿಂತಿದ್ದಾರೆ. ರೆಜಿನಾ voice recorder ಹಿಡಿದು ಅವನ ಮುಂದೆ ಕುಳಿತಿದ್ದಾಳೆ. ಮನೆಯ ಕೆಲಸದವಳು ಎರಡು cup ತರುತ್ತಾಳೆ. ಶಂಕರ್ ಪೂಜಾರಿ ಟ್ರೆ ಇಂದ coffeeಯನ್ನು ತೆಗೆದು ರೆಜಿನಳಿಗೆ ಕೊಡುತ್ತಾನೆ. ಅಲ್ಲಿರುವ ಟೀಯನ್ನು ತೆಗೆದು ಕೊಂಡು ಅದರಿಂದ ಒಂದು sip ಕುಡಿದು ಅವನ ಕಡೆಯವರಿಗೆ

ಶಂಕರ್ ಪೂಜಾರಿ
ಆಯೆನ ಪುದರ್ ಎಂಚಿನಾ?

ಸುಧಿ
ಬಾಲು ಅಣ್ಣ

ಶಂಕರ್ ಪೂಜಾರಿ
ಹುಃ... ಬಾಲು... ಬಾಲು ನನ್ನ boatಅಲ್ಲಿ ಕೆಲಸ ಮಾಡ್ತಿದ್ದ. ಈ ಮೀನ್ ಹಿಡಿಲಿಕ್ಕೆ ಹೊಗ್ತಾರಲ್ಲ. ಅವರಿಗೆ ಬಂದದ್ರಲ್ಲಿ ಅರ್ದಬಾಗ ಕೊಡ್ತೇನೆ. ಉಳಿದ ಅರ್ದಭಾಗ ನನಗೆ ಸಿಗ್ತದೆ. ಆದರೆ ಈ ಬಾಲು ನನಗೇ ಗುತ್ತಿಲ್ಲದೆ ಮೀನ್ಗಳನ್ನು market ಇಂದ ಹೊರಗೆ ಮಾರ್ತಿದ್ದ ಅಂತೆ. ನೋಡಿ, ಇದು ತುಂಬ ತಪ್ಪಾಗ್ತದೆ.

ರೆಜಿನಾ
ಹ್ಮ... ನೀವು ಮುನ್ನಾ ಅಂತ ಹೆಳ್ತಿದ್ರಿ. ಅವನೇ?

ಟೀ ಕುಡಿಯುತ್ತಾ ಹೌದು ಎನ್ನುವ ರೀತಿಯಲ್ಲಿ ತಲೆ ಅಲ್ಲಾಡಿಸುವರು. ಶಂಕರ್ ಪೂಜಾರಿ ಗಂಭೀರವಾಗಿ ಯೇಚಿಸುತಿದ್ದಾರೆ. ರೆಜಿನ coffee cupನ್ನು ಎತ್ತುತ್ತಾ ಕುಡಿಯುವಷ್ಟರಲ್ಲಿ

CUT TO:

INSERT ರೆಜಿನಾ ತನ್ನ ಮನೆಯ drawing room ನಲ್ಲಿ coffee ಕುಡಿಯುತ್ತಾ ಯ್ಯೋಚಿಸುತಿದ್ದಾಳೆ

CUT TO:

EXT. DAY: CAR STREET

Democracy ಹಾಗು ಅವನ ಮೂವರು ಸ್ನೇಹಿತರು ಜನ್ಮಾಷ್ಟಮಿಯ ಪ್ರಯುಕ್ತ ತಮ್ಮ ಮುಖಕ್ಕೆ ಬಣ್ಣಹಾಕಿಕೊಂಡು ರೆಜಿನಾಳ cameraಗೆ ಪೋಸ್ ಕೋಡುತ್ತಿದ್ದಾರೆ. ರೆಜಿನಾ photo ತೆಗೆದ ಮೇಲೆ, ತನ್ನಲ್ಲಿರುವ ೧೦೦ ರುಪಾಯಿ ನೊಟನ್ನು ಅವರಿಗೆ ಕೊಡುತ್ತಾ

ರೆಜಿನಾ
ನನ್ ಕೈಯಲ್ಲಿ change ಇಲ್ಲಾ. ನಾಲ್ಕು ಜನ ಸೇರಿ ಇದನ್ನ share ಮಾಡ್ಕೋತೀರಾ?

Democracy ಖುಷಿಯಿಂದ ಸರಿ ಎನ್ನುವ ರೀತಿಯಲ್ಲಿ ತಲೆ ಅಲ್ಲಾಡಿಸುವನು. ರೆಜಿನ ಅವರನ್ನ ನೋಡಿ ಖುಷಿಯಿಂದ ಮುದ್ದುಮಾಡುವಳು. ನಂತರ ಬೇರೆ ಕಡೆಯ photo ತೆಗೆಯಲು ಪ್ರಾರಂಭಿಸುವಳು. Democracy ಹಾಗು ಅವನ ಗೆಳೆಯರು ಅಲ್ಲಿಂದ ತಿರುಗಿ ಹೊರಡುವರು. Camera ಅವರನ್ನು follow ಮಾಡುತ್ತ ಮುಂದೆ ಹೋಗುತ್ತಿರುವಾಗ

ಹುಡುಗ 2
ಒಬ್ಬೊಬ್ಬರ ಪಾಲಿಗೆ ಎಷ್ಟೆಷ್ಟ್ ಬರ್ತದಾ?

DEMOCRACY
ಹ್ಮ... ನಾವ್ ಈಗಾ 100 ರುಪಾಯಿಯನ್ನು ಸರಿಯಾಗಿ ನಾಲ್ಕು ಜನ ಹಂಚಿಕೊಳ್ಳಿಕ್ಕೆ, ಗುಣಾಕಾರ ಮಾಡ್ಬೆಕಾ? ಭಾಗಾಕಾರ ಮಾಡ್ಬೆಕಾ?

ಹುಡುಗ 3
ನಂಗ್ ಅನ್ಸುತ್ತೆ ನಾವು ಕಳಿಯುವಿಕೆ ಮಾಡ್ಬೆಕು

ಹುಡುಗ 1
ನಿನ್ನ್ ಅಪ್ಪೆ ತೆತ್ತಿ ಕಳಿಯುವುದು. ನಂಗೆ ಅನ್ಸುತ್ತೆ ನಾವು ಬಾಗಾಕಾರನೆ ಮಾಡ್ಬೆಕು.

ಹುಡುಗಾ 2
ಹಾಗಾದ್ರೆ 100ರಲ್ಲಿ ನಾಲ್ಕು ಭಾಗಿಸಿದ್ರೆ ಎಷ್ಟ್ ಬರ್ತದೆ

ಎಲ್ಲರು ಒಬ್ಬರನ್ನೊಬ್ಬರನ್ನ ನೋಡಿಕೊಳ್ಳುತ್ತಾರೆ

DEMOCRACY

ಒಂದ್ ಕೆಲ್ಸ ಮಾಡುವ. ನಾಲ್ಕ್ ice candy ತೆಕೊಂಡು,
ಎಷ್ಟು ಚಿಲ್ಲರೆ ಬರ್ತದೆ ಅಂತ ನೋಡುವ. ಅದನ್ನು ನಾಲ್ಕು ಜನ
ಹಂಚಿಕೊಂಡ್ರೆ ಆಯ್ತು.

ಹುಡುಗ 3
ಹಾಗಾದ್ರೆ ನಾನ್ yellow color ತೆಗೊಳ್ತೆನೆ.

ನಾಲ್ಕು ಹುಡುಗರು ice candyಯವನ ಬಳಿ ಓಡಲು ಪ್ರಾರಂಭಿಸುವರು. Backgroundನಲ್ಲಿ ಯಾರೊ Democracy ಎಂದು ಕೂಗುತಾರೆ. ನಾಲ್ಕು ಹುಡುಗರು ಅಲ್ಲಿಯೆ ಹಿಂದೆ ತಿರುಗಿ ನಿಲ್ಲುವರು. ದಿನೇಶ ರಿಕ್ಷದ ಹೊರಗೆ ನಿಂತಿರುವನು, ಸುಧಿ driver ಸೀಟಿನ ಪಕ್ಕದಲ್ಲಿ ಕುಳಿತಿದ್ದಾನೆ, ರಿಚ್ಚಿ ಹಿಂದೆ ಕುಳಿತಿರುತ್ತಾನೆ. Democracy ಅವನ ಸ್ನೇಹಿತರಲ್ಲಿ

DEMOCRACY
ಮೂವರು lineನಲ್ಲಿ ನಿಂತಿರಿ. ನಾನ್ ಈಗ ಬತರ್ತೆನೆ

ಮೂವರು ಸಾಲಾಗಿ ನಿಲ್ಲುವರು. Democracy ದಿನೇಶನ ಬಳಿ ನಡೆದುಕೊಂಡು ಹೋಗುವನು.

ದಿನೇಶ
Collection ಜೋರ?

DEMOCRACY
ನಡಿತಾ ಉಂಟು. ಈವಾಗೆಲ್ಲ ಮುಂಚಿನ ಹಾಗೆ collection
ಇಲ್ಲ...

ಎಂದು Democracy ಕೈ ನೀಡುವನು. ದಿನೇಶ ತನ್ನ ಜೇಬಿನಿಂದ ಚಿಲ್ಲರೆಯನ್ನು ತೆಗೆದು ಕೊಡುತ್ತಾನೆ. Democracy ಚಿಲ್ಲರೆಯನ್ನು ನೋಡುತ್ತಾ

DEMOCRACY
ಎಂತ ಇಷ್ಟೆನಾ? (ರೆಜಿನಾಳ ಕಡೆ ತೋರಿಸುತ್ತ) ಆ ಹುಡ್ಗಿ
ನೋಡಿ, ನೂರ್ ರುಪಾಯಿ ಕೊಟ್ಲು.

ದಿನೇಶ ರೆಜಿನಾಳನ್ನು ನೋಡಿ smile ಮಾಡುತ್ತಾನೆ. ತನ್ನ ಮುಖದ ಮೇಲೆ gunನನ್ನು ಇಟ್ಟು, ರಿಕ್ಷದ ಹಿಂದೆ ಮಲಗಿರುವ ರಿಚ್ಚಿಯನ್ನು ಎಬ್ಬಿಸುತ್ತಾನೆ. ರಿಚ್ಚಿಯು ಎದ್ದು ರಿಜಿನಾಳನ್ನು ನೋಡಿ, ಅವಳ ಕಡೆ ನಡೆಯುವನು. ದಾರಿಯಲ್ಲಿ ಒಂದು chairಅನ್ನು ಎತ್ತಿ ಹಾಕಿಕೊಳ್ಳುವನು.

ರೆಜಿನ car street ಬಳಿ ತನ್ನ tripod ಮೇಲೆ SLR camera ಇಟ್ಟು photography ಮಾಡುತ್ತಿದ್ದಾಳೆ. ರಿಚ್ಚಿ chair ತಂದು cameraದ ಮುಂದೆ ಕುಳಿತುಕೊಳ್ಳುತ್ತಾನೆ. ರೆಜಿನ ಅದನ್ನು ನೋಡಿ ಗಾಬರಿಯಿಂದ ಹೊರಗೆ ನೋಡುವಳು.

ರಿಚ್ಚಿ
ಬಹಳಾ ಸಮಯದ ನಂತರ. ಇತ್ತೀಚೆಗೆ ಉಡುಪಿ ಕಡೆ
ಬರ್ತಿಲ್ವಾ?

ರೆಜಿನಾಳಿಗೆ ಕಿರಿಕಿರಿಯಾಗಿ ರಿಚ್ಚಿಯನ್ನು ನೋಡುತ್ತಾಳೆ. ರಿಚ್ಚಿ cameraವನ್ನು ನೋಡುತ್ತಾ

ರಿಚ್ಚಿ
ಇದೇ camera... ಚೆಃ ಇದಲ್ಲಾ

ರೆಜಿನ ಅವನನ್ನು ಲೆಕ್ಕಿಸದೆ ಬೇರೆ ಕಡೆ photo ತೆಗೆಯಲು ಹೋರಡುವಳು. ರಿಚ್ಚಿ ಅಲ್ಲಿಯೇ chair ಮೇಲೆ ಕುಳಿತಿದ್ದಾನೆ

ರೆಜಿನ
ದಯವಿಟ್ಟು ನೀವು ಸ್ವಲ್ಪ ಜಾಗ ಬಿಟ್ರೆ, ನಾನು photo
ತೆಗೀತೀನಿ.

ರಿಚ್ಚಿ

ನಂದೆ ತೆಗೊಳಿ

ರೆಜಿನಾ
No thank you. I am not interested

ರೆಜಿನ tripod ನಿಂದ camera ತೆಗೆದು ಬೇರೆಕಡೆಯ photo ತೆಗೆಯಲು ಪ್ರಯತ್ನಿಸುವಳು

ರಿಚ್ಚಿ
ಓ ಹೊ. 15 ವರ್ಷದ ಹಿಂದೆ ತುಂಬಾ interest ತೋರಿಸ್ದಾಹಾಗಿತ್ತು.

ರೆಜಿನಾ ರಿಚ್ಚಿಯನ್ನು ನೋಡುತ್ತಾ

ರೆಜಿನಾ
Next time ನಿಮ್ಮನ್ನ police chase ಮಾಡಬೇಕಾದ್ರೆ ಹೇಳಿ, sureಆಗಿ interest ತೋರಿಸ್ತೀನಿ.

ರಿಚ್ಚಿ
ಹಾಗಾದ್ರೆ ನಿಮ್ಮನ್ನು ಜಾಸ್ತಿ wait ಮಾಡ್ಸುದಿಲ್ಲ ಬಿಡಿ

ರೆಜಿನಾ
good

ರೆಜಿನಾ ಮತ್ತೆ ಬೇರೆ ಕಡೆಯ photo ತೆಗೆಯಲು ಪ್ರಾರಂಭಿಸುತ್ತಾಳೆ. ಆಗ ರಿಚ್ಚಿ ಅವಳನ್ನು ಹಿಂಬಾಲಿಸುವನು

ರಿಚ್ಚಿ
ಈ photoಗಳನ್ನು develop ಮಾಡುದಿಲ್ಲ ಅಂತಂದ್ರೆ, ಯಾಕ್ ತೆಗಿತೀರಾ?

ರೆಜಿನ
ಯಾರ್ ಹೇಳಿದ್ದು ನಾನ್ develop ಮಾಡಲ್ಲಾ ಅಂತ?

ರಿಚ್ಚಿ
ಮಾಡ್ತೀರಾ?

ರೆಜಿನ
of course

ರಿಚ್ಚಿ
ಹಾಗಾದ್ರೆ ನನ್ನ photo ಕೊಡಿ

ರೆಜಿನಾಳಿಗೆ ಕಿರಿಕಿರಿಯಾಗಿ

ರೆಜಿನಾ
Why are you so obsessed with that picture?

ರಿಚ್ಚಿ
Well madam .. ನನ್ನ ಹತ್ರ ಚಿಕ್ಕಂದಿನ ಯಾವುದೇ photo ಇಲ್ಲ. ಅದ್ರಲ್ಲು ನೀವು ನನ್ನ ಜೀವನದ ಅತ್ಯಮೂಲ್ಯವಾದ ಗಳಿಗೆಯನ್ನು ಸೆರೆ ಹಿಡಿದಿದ್ದೀರ. ಅದನ್ನಾ ಅಷ್ಟು ಸುಲಭವಾಗಿ ಬಿಟ್ಟಕೋಡ್ಲಿಕ್ಕ್ ಆಗ್ತದಾ?

ರೆಜಿನಾ
ನೋಡಿ ನಾನ್ ನಿಮಗೆ ಮೋದ್ಲೇ ಹೇಳಿದ್ದೀನಿ...

ಅಷ್ಟರಲ್ಲಿ ದಿನೇಶ ರಿಚ್ಚಿಯ ಬಳಿ ಬಂದು ರಿಚ್ಚಿಯ ಕಿವಿಯಲ್ಲಿ ಬಂದು ಏನೋ ಹೇಳುತ್ತಾನೆ. ರೆಜಿನ ಅದನ್ನು ಕೇಳಲು ಮುಂದಾಗುತ್ತಾಳೆ

ರಿಚ್ಚಿ
ಹೋ...

ರಿಚ್ಚಿ ರೆಜಿನಾಳನ್ನು ನೋಡುತ್ತಾ ಹಿಮ್ಮುಕವಾಗಿ ನಡೆದು

ರಿಚ್ಚಿ
Well I have to take a leave now but next time ನೀವು ಬರಬೇಕಾದ್ರೆ ದಯವಿಟ್ಟು ಆ photo ತೆಕೊಂಡ್ ಬನ್ನಿ

ರೆಜಿನಾ ರಿಚ್ಚಿಯನ್ನು ಹೀಯಾಳಿಸುತ್ತಾ ಅವನ ಕಡೆ ನಡೆದು

ರೆಜಿನ
ನಾನು ನಿಮ್ಮ ಜೋತೆ ಬರಬಹುದ? Am sure I will get some interesting pictures

ರಿಚ್ಚಿ auto ಹಿಂದೆ ಹತ್ತುತ್ತಾನೆ. ದಿನೇಶ ಹಿಂದೆ ಕೂತಿದ್ದಾನೆ. ಸುಧಿ auto driver ಜೊತೆ ಮುಂದೆ ಕುಳಿತಿದ್ದಾನೆ

ರಿಚ್ಚಿ
I am sorry. ಇಷ್ಟುಬೇಗ ನನ್ನ ಹಿಂದೆ police ಬರುದಿಲ್ಲ. Photo ನೆನ್ಪು

Auto ಹೊರಡುವುದನ್ನು ರೆಜಿನಾ ನೋಡುವಳು

CUT TO:

EXT. DAY: ROAD / AUTO

ಸುಧಿ, ದಿನೇಶ ಹಾಗು ರಿಚ್ಚಿ autoದಲ್ಲಿ ಹೋಗುತ್ತಿರುತ್ತಾರೆ

ರಿಚ್ಚಿ
ಎಲ್ಲಿದ್ದಾನಂತೆ?

ದಿನೇಶ
ಜೋಡ್ ರಸ್ತೆ.

ಸುಧಿ ಹಿಂದೆ ತಿರುಗುತ್ತಾ

ಸುಧಿ
Junction ಹತ್ರ

ರಿಕ್ಷಾ ಹೋಗುತಿರುವಾಗ ಅದರ ಪಕ್ಕದಲ್ಲಿ Democracy ತನ್ನ ಸ್ನೇಹಿತರ ಜೊತೆ cycleನಲ್ಲಿ ನಾಲ್ವರು ಬರುತ್ತಾರೆ. ಸುಧಿಯನ್ನು ನೋಡಿ

DEMOCRACY
ಸುದಿಯಣ್ಣ ಎಲ್ಲಿಗೆ?

ಸುಧಿ
ಜೋಡ್ ರಸ್ತೆ.

DEMOCRACY
ರೇಸ್ ಉಂಟಾ?

ಸುಧಿ
ನೋಡುವ ಎಲ್ಲಿ ತನಕ ಬರ್ತಿಯಂತ?

Democracy ಹಾಗು ಅವನ ಗೆಳೆಯರು ಸೈಕಲ್ ಜೊತೆಗೆ ಬೀಳುವರು.

CUT TO:

EXT. DAY: JODRASTE

Auto ಜಂಕ್ಷನ್ ಹತ್ತಿರ ಬರುತ್ತದೆ. ಅಲ್ಲಿಯೇ ಹುಲಿವೇಷದ ನೃತ್ಯ ನಡೆಯುತ್ತಿದ್ದು ಬಹಳ ಜನ ಅದರ ಸುತ್ತಲು ಸೇರಿರುತ್ತಾರೆ. ಹತ್ತಿರ ಬರುತ್ತಿದ್ದಂತೆಯೇ ಹುಲಿವೇಷದ ವಾದ್ಯಗಳ ಶಬ್ದಕ್ಕೆ ರಿಚ್ಚಿ ಮೈಯಾಡಿಸುತ್ತ, ಆ ಗುಂಗಿನಲ್ಲೆ autoದಿಂದ ಇಳಿದು ಹುಲಿವೇಷದ ಕಡೆ ನಡೆದುಕೊಂಡು ಹೋಗುತ್ತಾನೆ. ಹುಲಿವೇಷದ ತಂಡದಲ್ಲೊಬ್ಬ ರಿಚ್ಚಿಯನ್ನು ಕಂಡು ಅವನ ಆಗಮಿಕೆಯನ್ನು ಕೂಗುವನು. ಇದನ್ನು ಕೇಳಿದ ಉಳಿದವರು ರಿಚ್ಚಿಗೆ ಜಾಗ ಬಿಟ್ಟುಕೊಡುವರು. ರಿಚ್ಚಿ ಅವರ ಮದ್ಯದಲ್ಲಿ ನಡೆದುಬರುತ್ತಿದ್ದಂತೆಯೇ ಅವರಲ್ಲೊಬ್ಬ ಸೇವಂತಿ ಹಾರವನ್ನು ರಿಚ್ಚಿಗೆ ಹಾಕುವನು. ರಿಚ್ಚಿ ಉಳಿದ ಹುಲಿಗಳೊಂದಿಗೆ ಹೆಜ್ಜೆ ಹಾಕಲು ಪ್ರಾರಂಭಿಸುವನು. ಎಲ್ಲಾ ಹುಲಿಗಳು ಸೇವಂತಿ ಹಾರವನ್ನು ಹಾಕಿಕೊಂಡಿರುವರು. ಕೆಲವು ಹುಲಿಗಳು ಸೇವಂತಿ ಹಾರದಮೇಲೆ ಕಾಸಿನ ಹಾರವನ್ನು ಹಾಕಿಕೋಂಡಿದ್ದಾರೆ. ಅವರಲ್ಲೊಬ್ಬ ಬೇಟೆಗಾರನಂತೆ ವೇಷ ಹಾಕಿಕೊಂಡು, ಬೇಟೆಗಾರನ ಹೆಜ್ಜೆ ಹಾಕುತ್ತಾ ಹುಲಿಗಳನ್ನು ಬೇಟೆ ಆಡುವ ರೀತಿಯಲ್ಲಿ ನರ್ತಿಸುತ್ತಿದ್ದಾನೆ. ನೃತ್ಯ ನಡೆಯುತ್ತಿದ್ದಂತೆಯೇ ದಿನೇಶ ಬಂದು ರಿಚ್ಚಿಯನ್ನು ನಿಲ್ಲಿಸಿ ಒಂದು ಕಡೆಗೆ ಬೆರಳನ್ನು ತೋರಿಸುವನು. ಅಲ್ಲಿ ಬಾಲು ಹುಲಿವೇಷ ಧರಿಸಿ ಒಂದು ಮರದ ಕಡೆ ಕಲ್ಲನ್ನು ಎಸೆಯುತ್ತಿದ್ದಾನೆ. ರಿಚ್ಚಿ ಬಾಲುವನ್ನು ಕಂಡು smile ಮಾಡುವನು. ಹುಲಿಯ ವಾದ್ಯಗಳು ನಿಲ್ಲುವುದು. ರಿಚ್ಚಿ ವಾದ್ಯದವರನ್ನು ಕಂಡು

ರಿಚ್ಚಿ
ಎಂತ ಮುಗೀತ? ಇನ್ನೊದ್ ಹಾಕಿ, ಇನ್ನೊಂದ್ ಹಾಕಿ. ಏ ನನ್ನೊಂಜಿ ಪಾಡ್ಲೆಯ...

ವಾದ್ಯದವರು ಇನ್ನೊಂದು ಹಾಡನ್ನು ಶುರು ಮಾಡಿದಾಗ ತಾಸೆಯವರು ಸಹ ಅವರಿಗೆ ಸಾತ್ ಕೊಡುವರು. ರಿಚ್ಚಿಯ ಜೊತೆ ಇನ್ನು ಕೆಲವು ಹುಲಿಗಳು ನಲಿಯಲು ಶುರುಮಾಡುವರು. ರಿಚ್ಚಿ ಮತ್ತೊಮ್ಮೆ ನೃತ್ಯದಲ್ಲಿ ಮಗ್ನನಾಗುತ್ತಾನೆ. ಸ್ವಲ್ಪ ಹೊತ್ತಿನ ನಂತರ, ರಿಚ್ಚಿ ಬೇಟೆಗಾರನ ಕೈಯಿಂದ gunಅನ್ನು ತೆಗೆದುಕೊಂಡು ಅವನ ಹಾಗೆ ಹೆಜ್ಜೆಹಾಕಲು ಪ್ರಾರಂಭಿಸುವನು. ಕುಣಿಯುತ್ತ ಕುಣಿಯುತ್ತ, ಜನರ ಸಂದಣಿಯಿಂದ ಹೊರಗೆ ಬಂದು ಬಾಲುವಿನ ಕಡೆ ನಡೆಯುತ್ತಾನೆ. ಬಾಲುಹತ್ತಿರ ಬರುತ್ತಿದ್ದಂತೆಯೆ, ತನ್ನ ಕೈಯಲ್ಲಿರುವ gunಅನ್ನು ಹಿಂತಿರುಗಿಸಿಕೊಂಡು ಅದರಿಂದ ಬಾಲುವಿನ ತಲೆಗೆ ಜೋರಾಗಿ ಹೊಡೆಯುತ್ತಾನೆ. ಮರಕ್ಕೆ ಕಲ್ಲುಹೊಡೆಯುತ್ತಿರುವ ಬಾಲು ಕ್ಷಣದಲ್ಲಿ ನೆಲಕ್ಕೆ ಬೀಳುವನು. Camera pan ಆದರೆ ಅಲ್ಲಿ Democracy ತನ್ನ ಸ್ನೇಹಿತರ ಜೊತೆ ಸೈಕಲ್ ನಲ್ಲಿ ಬಂದು ನಿಲ್ಲಿಸಿ ನೋಡುವನು. Backgroundನಲ್ಲಿ ವಾದ್ಯಗಳು ನಿಲ್ಲುವುದು. ರಿಚ್ಚಿ cigarette ಹಚ್ಚಿ ಒಂದು ಸುತ್ತು ಬರುತ್ತ,

ರಿಚ್ಚಿ
ಎಂತ ನಿಲ್ಸಿದ್ದ? ಪಾಡ್ಲೆಯ ನನೊ್ನಂಜಿ.

ಮತ್ತೆ ಬಾಲುವನ್ನು ನೋಡಿ ಅವನ ಕಡೆ ಬರುತ್ತ, ಹಿಂತಿರುಗಿ ನೋಡಿ

ರಿಚ್ಚಿ
ಏ ಬಾಲುವೆ ಅಲ್ಲ ಮಾರ್ರೆ. ಹುಲಿಗಳು ಎಲ್ಲ ಒಂದೆ ನಮೂನಿ ಕಾಣ್ತಾರೆ. ಆಮೇಲೆ ಯಾಯಯ್ರಾರಿಗೆಲ್ಲ ಹೊಡ್ದು... ಬೇಕ ನಮ್ಗೆ ಶೀರ?

ಎಂದು ನೆಲದಲ್ಲಿ ಕೂರಿ ಬಾಲು ಮುಖವನ್ನು ಹಿಡಿದು ನೋಡುತ್ತಾನೆ.

ರಿಚ್ಚಿ
ಓ... ಇದು ಹುಲಿ ಪಕ್ಷ ಮಾರ್ರೆ. (ಎದ್ದು ನಿಂತು) ಇದು gone case ಆಯ್ತು. ಇನ್ನು ನಮ್ಮ ಹುಲಿ ಏಳ್ಳಿಕ್ಕೆ ಸುಮಾರ್ time ಆಗ್ತದೆ.

ಎಂದು ಹೇಳಿ ಮತ್ತೆ ಜನರ ಕಡೆ ಬರುವನು

ರಿಚ್ಚಿ

ಹೇಗೆ. ಇನ್ನೊಂದ್ step ಹಾಕುವವ? ನಮ್ಮ ಹುಲಿ ಏಳುವವರೆಗೆ?

ಅಷ್ಟರಲ್ಲಿ ಒಂದು Omni ಬಂದು backgroundನಲ್ಲಿ ನಿಲ್ಲುತ್ತದೆ. ರಿಚ್ಚಿ ಹಿಂತಿರುಗಿ ನೋಡುತ್ತಾನೆ. Driverನನ್ನು ಕಂಡು ಮತ್ತೆ ವಾಧ್ಯದವರಿಗೆ

ರಿಚ್ಚಿ

ಸರಿ ನೀವು ಶುರು ಮಾಡಿ.

ಎಂದು driver ಕಡೆ ನಡೆದು, ಅವನ ಮುಂದೆ ಬಾಗಿ ನಿಲ್ಲುವನು. Backgroundನಲ್ಲಿ ವಾಧ್ಯ ಮತ್ತೊಮ್ಮೆ ಶುರುವಾಗಿ ನಿಲ್ಲುವುದು. Driver ರಿಚ್ಚಿಗೆ ಏನನ್ನೊ ಹೇಳುವನು. ಅವನ ಮಾತುಗಳನ್ನು ಕೇಳಿ ರಿಚ್ಚಿಯು ಸಂತೋಷಪಟ್ಟು ಅವನ ಮುಖದಲ್ಲಿ ನಗು ಮೂಡುತ್ತದೆ. ನೇರವಾಗಿ ನಿಂತು Omniಯ ಮತ್ತೊಂದು ಕಡೆ ನೋಡಿ ಸುಧಿಯ ಹತ್ತಿರ

ರಿಚ್ಚಿ

ಏ ಸುಧಿ. ಹುಲಿಯನ್ನು ರಿಕ್ಷದಲ್ಲಿ ಹಾಕೊಂಡು ಬಂದರಿಗೆ ಹೋಗು. ನಾನು ಅಲ್ಲಿಗೆ ಬತರ್ತೇನೆ

ಎಂದು ಹೇಳಿ, ಹಿಂತಿರುಗಿ ಹುಲಿವೇಶದವರನ್ನು ಕಂಡು

ರಿಚ್ಚಿ

ಬರ್ಕನ?

ಎಲ್ಲರು ಸುಮ್ಮನಾಗಿ ನೋಡುವರು. ರಿಚ್ಚಿ Omniಯ ಹಿಂದಿನಿಂದ ಮತ್ತೊಂದು ಕಡೆಗೆ ಹೋದರೆ, ಸುಧಿ ಹಾಗು ದಿನೇಶ, ಬಾಲುವನ್ನು ಎತ್ತಿಕೊಂಡು ರಿಕ್ಷದ ಕಡೆಗೆ ನಡೆಯುತ್ತಿರುವರು. ರಿಚ್ಚಿ ದಿನೇಶನನ್ನು ನೋಡಿ

ರಿಚ್ಚಿ

ನೀನು ನನ್ನೊತೆ ಬಾರ

ಅಷ್ಟರಲ್ಲಿ ಸುಧಿ ಹಾಗು ದಿನೇಶ ಬಾಲುವನ್ನು ರಿಕ್ಷದ ಒಳಗೆ ಹಾಕುವರು. ದಿನೇಶ ರಿಚ್ಚಿಯ ಕಡೆ ನಡೆಯುವನು. ಆವಾಗ ಸುಧಿ

ಸುಧಿ

ಎಲ್ಲಿಗೆ ಹೋಗ್ತಿದ್ದೀರ

ರಿಚ್ಚಿ

ನಿನ್ನ ಅಪ್ಪನ ಮನೆಗಾ...

ಎಂದು ರಿಚ್ಚಿ Omniಯ ಮುಂದಿನ seatನಲ್ಲಿ ಕುಳಿತುಕೊಳ್ಳುತ್ತಾನೆ. ದಿನೇಶ ಬಂದು ಹಿಂದಿನ seatನಲ್ಲಿ ಕೂರುವನು

ದಿನೇಶ

ಎಲ್ಲಿಗೆ?

ರಿಚ್ಚಿ

To meet an old friend

Omni ಅಲ್ಲಿಂದ ಹೊರಡುತ್ತದೆ.

CUT TO:

EXT. DAY: FARM HOUSE

Omni, farm houseನ ಗೇಟಿನ ಮುಂದೆ ಬಂದು ನಿಲ್ಲುತ್ತದೆ. Driver, farm house ಕಡೆ ಕೈತೋರಿಸುವನು. ರಿಚ್ಚಿ ತನ್ನ gunಅನ್ನು ಮುಖದಮೇಲೆ ಇಟ್ಟುಕೊಂಡು ಬಾಗಿರುವ seatಗೆ ಒರಗಿ ಕುಳಿತಿದ್ದವನು, ಎದ್ದು farm house ಕಡೆಗೆ ನೋಡುತ್ತಾನೆ. ಅವನ ಕುತ್ತಿಗೆಯಲ್ಲಿ ಸೇವಂತಿ ಹೂವಿನ

ಹಾರವು ಇನ್ನು ನೇತಾಡುತಿದೆ. ರಿಚ್ಚಿ farm house ಕಡೆ ನೋಡುತ್ತ, ಕಾರಿನಿಂದ ಕೆಳಗಿಳಿದು, ತನ್ನ gunಅನ್ನು beltನಲ್ಲಿ ಸಿಕ್ಕಿಸಿಕೊಂಡು ಬರುವನು (Different angle from the chapter1). ದಿನೇಶ ಬಂದು ಗೇಟನ್ನು ತೆರೆಯುತ್ತಾನೆ. ರಿಚ್ಚಿ ಬಾಗಿಲ ಕಡೆ ಬರುವನು. ಅವನ ಹಿಂದೆ ಡ್ರೈವರ್ ಹಾಗು ದಿನೇಶ ಬರುವರು. Omni ರಸ್ತೆಯ ಮದ್ಯದಲ್ಲೆ ನಿಲ್ಲಿಸಿದ್ದಾರೆ. ರಿಚ್ಚಿ ಬಂದು ಬಾಗಿಲನ್ನು ಬಡಿಯುವನು. ಯಾರು ಬಾಗಿಲನ್ನು ತೆರೆಯುವುದಿಲ್ಲಾ. ಇನ್ನೆರಡು ಬಾರಿ ಬಾಗಿಲನ್ನು ಬಡಿದು ರಿಚ್ಚಿ ಹಿಂತಿರುಗಿ driverನ ಬಳಿ

ರಿಚ್ಚಿ
ಉಂದೆ ಇಲ್ಲ್ sureಆ?

DRIVER
ಶಂಕರಣ್ಣ ಉಂದೆ ಇಲ್ಲಿಂದ್ ಪಂಡೆರ್

ಅಷ್ಟರಲ್ಲಿ gateನ ಕಡೆಯಿಂದ ಯಾರೋ ಕೂಗುವುದು ಕೇಳಿಬರುತ್ತದೆ. ಹಿಂತಿರುಗಿ ನೋಡಿದಾಗ ಗೇಟಿನ ಬಳಿ ಒಬ್ಬ ನಿಂತು

ವ್ಯಕ್ತಿ
ಅಣ್ಣಾ... ಒಂಚುರು ಗಾಡಿ ಸೈಡಗ್ ದೀಲೆ. ಲಾರಿ ಪಾಸ್ ಆವೊಡು.

ರಿಚ್ಚಿ ದಿನೇಶನನ್ನು ನೋಡಿ

ರಿಚ್ಚಿ
ಹೋಗಿ ಸೈಡಲ್ಲೆಲ್ಲಾದ್ರು ನಿಲ್ಸಿ ಬಾ.

ದಿನೇಶ ಹಾಗು ಡ್ರೈವರ್ ಅಲ್ಲಿಂದ ಹೋರಡುವರು. Omni ಅಲ್ಲಿಂದ ಹರಡುವುದು (Different angle from the Chapter1). Omni ಹೊರಡುವುದನ್ನು ರಿಚ್ಚಿ ನೋಡುತ್ತಿದ್ದ ಹಾಗೆಯೆ, ಮನೆಯ ಒಳಗಿನಿಂದ ಯಾರೊ ಕಿಟಕಿಯನ್ನು ತೆರಿಯುವರು. ಇದನ್ನು ಕಂಡ ರಿಚ್ಚಿ smile ಮಾಡುತ್ತ cigar ಹಚ್ಚುತ್ತ

ರಿಚ್ಚಿ
ಬಾಗಿಲನು ತೆರೆದು, ಸೇವೆಯನು ಕೊಡು ಹರಿಯೆ... (ಎದ್ದು ಬಾಗಿಲ ಕಡೆ ನಡೆಯುತ್ತ) ಕೂಗಿದರು, ಧ್ವನಿ ಕೇಳಲಿಲ್ಲವೇ, ನರಹರಿಯೇ... ಬಾಗಿಲನು ತೆರೆದು...

ಎನ್ನುತ್ತ ಬಾಗಿಲಿನ ಹಿಂದೆ ನಿಂತುಕೊಂಡು ಬಾಗಿಲಿಗೆ ಬಲವಾಗಿ ಒದೆಯುತ್ತಾನೆ. ಬಾಗಿಲು ತೆರೆಯುತ್ತದೆ.

CUT TO:

INT. DAY: FARM HOUSE

ರಿಚ್ಚಿ ನಾಟಕೀಯವಾಗಿ beltನಿಂದ gunಅನ್ನು ತೆಗೆದು, ಬಾಗಿಲ ಬಳಿ ನಿಂತು

ರಿಚ್ಚಿ
ಪಟಾ ಪೋಷ್ಟರ್ ನಿಕ್ಲಾ ಹೀರೋ. Your attention please.

ಎಂದು ಹೇಳಿ ಒಳ ನಡೆಯುವನು. ಅಲ್ಲಿ ರಾಘು ಕುಳಿತಿರುತ್ತಾನೆ ಅವನ ಕಡೆ ಮುಖಮಾಡಿ

ರಿಚ್ಚಿ
As the Cuban kid always said 'And here we meet once again'.

Telephone ring ಆಗಲು ಶುರುವಾಗುತ್ತದೆ. ರಾಘು ಆಶ್ಚರ್ಯದಿಂದ ಹಾಗು ಗಾಬರಿಯಿಂದ ರಿಚ್ಚಿಯನ್ನು ನೋಡುವನು. ರಿಚ್ಚಿ ರಾಘುವಿನ ಕಡೆ ನಡೆಯುತ್ತಾನೆ

ರಿಚ್ಚಿ
Now you may ask me, ಈ Cuban kid ಯಾರು ಅಂತ? Well ಇದರ ಹಿಂದೆ ಒಂದು ಚಿಕ್ಕ ಕಥೆ ಇದೆ. ನಾನು Bombay remand homeಅಲ್ಲಿ ಇಬರ್ಬೇಕಾದ್ರೆ, there was this legend, the legend of two kids. ತುಂಬಾ ವರ್ಷಗಳ ಹಿಂದೆ remand homeಅಲ್ಲಿ ನಡೆದಂತಹ ಇಬ್ಬರು ಹುಡುಗರ ಕಥೆ. ಕೆಲವರು ಇದನ್ನು ಕಟ್ಟ್ ಕಥೆ ಅಂತ ಕರಿತಾ ಇದ್ರು, ಇನ್ನು ಕೆಲವು ನನ್ನಂತವ್ರರ ನಿಜವಾಗ್ಲು ನಡ್ದಿರೊ ಘಟನೆ ಅಂತ ನಂಬ್ತ ಇದ್ರು.

ರಾಘು Telephone ಬಳಿ ಇರುವ ತನ್ನ gunಅನ್ನು ನೋಡುತ್ತಾನೆ. ರಿಚ್ಚಿ ಅದನ್ನು ಗಮನಿಸಿ

ರಿಚ್ಚಿ
ಏ ಸಾಲ ಇದರ್ telephoneಕ ಗಣ್ಟಿ ಬಹುತ್ ಬಜ್ತಾಹೆ, ಹಾಂ. Don't worry about it. I will take care

ಎಂದು Telephone ಬಳಿ ನಡೆಯುತ್ತ

ರಿಚ್ಚಿ
Anyway ಕಥೆ ಹೀಗಿದೆ. ಇಬ್ಬರು ಹುಡುಗ್ರು, ಒಬ್ಬ Cuba ದೇಶದಿಂದ ಬಂದವ್ರನ, ಇನ್ನೋಬ್ಬ ಅಲ್ಲಿಯೇ ಮಹಾರಾಷ್ಟ್ರದ ಮಾಂಡ್ವ ಎನ್ನುವ ಹಳ್ಳಿಯಿಂದ ಬಂದವ

ಎಂದು ಹೇಳಿ telephone receiverಅನ್ನು ಎತ್ತುವಷ್ಟರಲ್ಲಿ telephone ring ಆಗೋದು ನಿಲ್ಲುತ್ತದೆ.

ರಿಚ್ಚಿ
ಬೇಕ ಶೀರ?

ಎಂದು telephone receiverಅನ್ನು ಎತ್ತಿ ಕೆಳಗಿಡುತ್ತಾನೆ. ಹಾಗೆ ಅವನ ಕೈ ಅಲ್ಲೆ ಪಕ್ಕದಲ್ಲಿದ್ದ gunನ ಹತ್ತಿರ ಹೊಗುತ್ತದೆ. ಅದನ್ನು ತೆಗೆದು ನೋಡಿ, ಎರಡೂ ಕೈಗಳಲ್ಲಿ gunಗಳನ್ನು ಹಿಡಿದು, ಅವುಗಳನ್ನು ರಾಘುವಿಗೆ point ಮಾಡಿ, ಎರಡು ಬಾರಿ ತಿರುಗಿಸುವನು. ಅಷ್ಟರಲ್ಲಿ ದಿನೇಶ ತೆರೆದಿರುವ ಬಾಗಿಲನ್ನು ನೋಡಿ ಗಾಬರಿಯಿಂದ ರಬಸವಾಗಿ ಒಳಬರುವನು. ರಿಚ್ಚಿ ದಿನೇಶನನ್ನು ನೋಡಿ ಕೈಯಲ್ಲಿದ್ದ gunಅನ್ನು ಅವನಿಗೆ ಎಸೆಯುವನು. ದಿನಾಶ ಒಂದು ಕ್ಷಣ ಗಾಬರಿಗೊಂಡು ಕಕ್ಕಾಬಿಕ್ಕಿಯಾಗಿ gunಅನ್ನು ರಾಘುವಿನ ಕಡೆ point ಮಾಡುವನು.

ರಿಚ್ಚಿ
ಹೆ ಹೆ ಹೆ. Easy man. No tension. ನಮ್ದೆ ಜನ

ದಿನೇಶ ಸಮಾದಾನ ಪಡುವನು. ರಿಚ್ಚಿ ಅಲ್ಲೇ ಪಕ್ಕದಲ್ಲಿದ್ದ ಒಂದು chairಅನ್ನು ತೆಗೆದು ಕೊಂಡು ರಾಘುವಿನ ಕಡೆ ನಡೆಯುತ್ತ

ರಿಚ್ಚಿ
ಸರಿ. ನಾನೆಲ್ಲಿದ್ದೆ ಮರ್ರೆ? ಹಾಂ... ಇಬ್ಬರು ಹುಡುಗರು.

Chairಅನ್ನು ರಾಘುವಿನ ಮುಂದೆ ಇಟ್ಟು ಅದರ ಮೇಲೆ ಕೂರುತ್ತ

ರಿಚ್ಚಿ
Antonio Montano ಮತ್ತೆ (ಹಿಂತಿರುಗಿ ದಿನೇಶನನ್ನು ಕಂಡು) ಎಯ್ ಅವನು ಇನ್ನೊಬ್ಬನ ಹೆಸರ್ ಎಂತದ?

ದಿನೇಶ
ವಿಜಯ್.

ರಿಚ್ಚಿ

Yessss. ವಿಜಯ್ ದೀನಾನಾಥ್ ಚೌಹಾನ್. ಈ remand home ಮಕ್ಕೆಲ್ಲಾ ತಿಂಡಿ ತನ್ಲಿಕ್ಕಂತ ದಿವ್ಸ ಬೆಳಿಗ್ಗೆ canteenಅಲ್ಲಿ ಸೇತರ್ತಾ ಇದ್ರು. ಅಲ್ಲಿ ಈ Cubaದ್ ಹುಡುಗ ಮಾಂಡ್ವಾದ್ ಹುಡುಗನನ್ನು ನೋಡಿ ನಗ್ತಾ ನಗ್ತಾ Spanishನಲ್ಲೆಂತದ ಬೈತಾ ಇದ್ದಂತೆ. ಮಾಂಡ್ವಾದ್ ಹುಡುಗನಿಗೆ ಇವ್ನು ಹೇಳಿದ್ದು ಎಂತಸ ಅರ್ತರ್ಥಾನೇ ಆಗ್ತಿರ್ಲಿಲ್ಲಾ.

ಹಿಂದೆ ನಿಂತಿರುವ ದಿನೇಶ ನಗಲು ಪ್ರಾರಂಬಿಸುವನು. ರಿಚ್ಚಿಗೆ ಕಿರಿಕಿರಿಯಾಗಿ ಅಲ್ಲಿಂದ ಎದ್ದು ದಿನೇಶನಿಗೆ ಗನ್ point ಮಾಡುವನು

ರಿಚ್ಚಿ

ಎಂತದ... ಜೋಕ್ ಮಾಡ್ತಿದ್ದೇನಾ ಇಲ್ಲಿ? ನೀನ್ ಅವನಿಗೆ ಹೋಗಿ ಕಥೆ ಹೇಳಾ, ನಾನ್ ಇಲ್ಲ್ ನಿಂತ್ಕೋಂಡ್ ನಗ್ತೇನೆ. ಬೇಕ ಅದು?

ದಿನೇಶ ಗಂಭೀರನಾಗುತ್ತಾನೆ. ರಿಚ್ಚಿ ಪುನಃ ಬಂದು ಆ ಕುರ್ಚಿಯಮೇಲೆ ಕುಳಿತುಕೊಳುಳವನು

ರಿಚ್ಚಿ

Yes... So... ಇದು ಸುಮಾರ್ ಸಮಯ ನಡೀತಾನೆ ಇತ್ತು. ದಿನಾ ಬೆಳಿಗ್ಗೆ ಮಾಂಡ್ವಾದ್ ಹುಡುಗನನ್ನು ನೋಡಿ cubaದ್ ಹುಡುಗ, ನಗ್ತಾ ನಗ್ತಾ Spanishನಲ್ಲಿ comment ಹೊಡ್ಕೋಂಡು ಹೋದ. ಮಾಂಡ್ವಾದ್ ಹುಡುಗ ಸ್ವಲ್ಪ ಸಮಯ ಇದಕ್ಕೆಲ್ಲ ಜಾಸ್ತಿ ತಲೆಬಿಸಿ ಮಾಡ್ಕೊಳ್ಳಿಲ್ಲ. ಆದರೆ ಇದು ನಡಿತು, ನಡಿತು, ನಡಿತು. ನೀನೆ ಹೇಳು ಮಾರ್ರೆ, ನೀನ್ ಆಗ್ತ ಇದ್ರೆ ಎಷ್ಟ್ ಸಮಯ ಸುಮ್ನೆ ಇತರ್ತಾ ಇದ್ದೆ? ಒಂದಿನ ಈ ಮಾಂಡ್ವಾದ್ ಹುಡುಗನಿಗೆ ಪಿತ್ತ ನೆತ್ತಿಗೇರಿ, ಆ Cubaದ್ ಹುಡುಗನನ್ನು ಕೆಳಗೆ ಹಾಕಿ ಅವನ ಮುಖಕ್ಕೆ ಹೋಡ್ದಾ, ಡಾಣ್ ಡಾಣ್ ಡಾಣ್... ಅವನ್ ಮೂಗ್ ಒಡ್ದ್ ಹೋಗೋವಗರ್ಗು ಬಿಡ್ಲಿಲ್ಲ ಅಂತೆ

ದಿನೇಶ ಹಿಂದೆ ಸಪ್ಪಗಾಗಿ ನೋಡ್ತಾ ನಿಂತಿದ್ದಾನೆ. ರಿಚ್ಚಿ ದಿನೇಶನನ್ನು ಕಂಡು

ರಿಚ್ಚಿ

ಎನ್ ನಮ್ಮನ್ನಾ ಇಲ್ಲಿ ನೋಡ್ತಾನೇ ಇರ್ತಿಯಾ ಅಥವಾ ಒಳಗ್ ಹೋಗಿ ಹುಡುಕ್ತೆಯಾ?

ದಿನೇಶ ಒಳನಡೆಯುತ್ತಾನೆ. ರಿಚ್ಚಿ ರಾಘುವನ್ನು ನೋಡಿ

ರಿಚ್ಚಿ

ಸರಿ. ಇಬ್ರನ್ನು ವಾರ್ಡನ್ನಹತ್ತಿರ ಕರ್ದ್ಕೊಂಡ್ ಹೋಗಿ, ಮಾಂಡ್ವಾದ್ ಹುಡುಗನ ಹತ್ತಿರ ಯಾಕ್ ಹೊಡ್ದೆ ಅಂತ ಕೇಳಿದ್ರಂತೆ. ಅವನು ಎಲ್ಲಸ ಹೇಳಿದಾ. ಸರಿ cuban ಹುಡುಗನ ಹತ್ತಿರ ಯಾಕ್ ಬೈದೆ ಅಂತ ಕೇಳಿದ್ರೆ, ವಾರ್ಡನ್ ಮುಂದೆ ಇನ್ನೊಂದ್ಸಲ ಬೈದ ಅಂತೆ? This time not with the smiling face though, but with broken nose.

ಹೀಗೆ ಹೆಳುತ್ತಿರುವಾಗ ಹಿಂದಿನಿಂದ ದಿನೇಶ ಅಲ್ಲಿ ಹುಡುಕುತ್ತಿರುವ ಶಬ್ದಗಳು ಕೇಳುತ್ತಿರುತ್ತದೆ. ರಾಘು ವಿಚಲಿತನಾಗಿ roomನ ಕಡೆ ನೋಡುತ್ತಾನೆ. ಇದನ್ನು ನೋಡಿದ ರಿಚ್ಚಿ ರಾಘುವಿನ ಮುಖವನ್ನು ಇವನ ಕಡೆಗೆ ತಿರುಗಿಸಿ

ರಿಚ್ಚಿ

Concentrate, now this is the best part. ಇಲ್ಲಿ ವಾರ್ಡನ್ನಿಗೆ ಗೊತ್ತಾಗ್ತದೆ. Cubaದ್ ಹುಡುಗ ಮಾಡ್ವದ್ ಹುಡುಗನಿಗೆ ಬೈತಿದ್ದದ್ ಅಲ್ಲಾ but wish ಮಾಡ್ತಿದ್ದದ್ದು ಅಂತ.

"Good morning we meet once again"
ಇದೊಂದು Cuba ದೇಶದ ಪದ್ಧತಿ. ಆಮೇಲೆ ಮಾಂಡ್ವಾದ್ ಹುಡುಗನಿಗೆ ಬೇಜಾರಾಗಿ ಅವರಿಬ್ರು ಒಳ್ಳೆ friends ಆದ್ರಂತೆ. ಹಾಗಂತ ಕಥೆ ಹೇಳ್ತದೆ. ಈವಾಗ ವಿಷಯ ಅದಲ್ಲ. ನನ್ನ point ಎಂತಾಂತೆಂದ್ರೆ, ಈ ಮಾಂಡ್ವಾದ್ ಹುಡುಗ Cubaದ್ ಹುಡುಗನಿಗೆ ಕೆಳಗ್ ಹಾಕಿ ಹೋಡಿತಿರುವ ಕ್ಷಣಕ್ಕೆ ಬರುವ. ಆ ಕ್ಷಣದಲ್ಲಿ, ಈ Cubaದ್ ಹುಡುಗನ ತಲೆಯಲ್ಲಿ ಎಂತ ಓಡ್ತಿರ್ಬಹುದು? I mean ನೀನ್ ಅವನ ಜಾಗದಲ್ಲಿ ನಿಂತು ಯೋಚನೆ ಮಾಡಿ ನೋಡು. ಒಬ್ಬ ಹುಡುಗ ನಿನ್ಗೆ ಹೊಡಿತಾ ಇದ್ದಾನೆ, ಆದರೆ ಎಂತಕ್ ಹೋಡಿತಿದ್ದಾನೆ ಅಂತ ನಿನ್ಗೆ ಗೊತ್ತಿಲ್ಲ. ಆಗ ನಿನ್ನ್ ತಲೆಯಲ್ಲಿ ಎಂತ ಓಡ್ಬಹುದು?

CUT TO:

INSERT: ಮಾಡ್ವದ್ ಹುಡುಗ, Cubaದ್ ಹುಡುಗನಿಗೆ ಹೊಡೆಯುತ್ತಿರುವ ದೃಶ್ಯ

ರಿಚ್ಚಿ ಗಾಡವಾಗಿ ಯೋಚನಾಮಗ್ನನಾಗಿದ್ದಾನೆ

ರಿಚ್ಚಿ
Full confusion ಆಗ್ಬಹುದಲ್ವ?

ಕೂಡಲೆ ರಿಚ್ಚಿ ಯೋಚನೆಯಿಂದ ಹೊರಬಂದು ರಾಘುವಿಗೆ gun point ಮಾಡಿ,

ರಿಚ್ಚಿ
ನಿನ್ಗೂ confusion ಆಗ್ತಿದ್ಯ? ನಿನ್ನ ಹತ್ರ ಒಂದು bag ಇದೆ. ಅದನ್ನು ನೀನ್ ನನಗೆ ಕೊಡ್ಲಿಲ್ಲಾಂತಂದ್ರೆ, ನಾನ್ ನಿನ್ನನ್ನು shoot ಮಾಡಿ ಬಿಡ್ತೇನೆ

ರಾಘು ಸಂಪೂರ್ಣವಾಗಿ ವಿಚಲಿತನಾಗಿದ್ದಾನೆ

ರಾಘು
ನನ್ನ್ ಹತ್ರ ಯಾವ ಬ್ಯಾಗೂ ಇಲ್ಲ

ರಿಚ್ಚಿ
ಇದೆ. ಕೊಡ್ಲಿಲ್ಲ ಅಂತಂದ್ರೆ, ಬ್ಯಾಗು ಪಡ್ಚ, ನೀನ್ಸ ಪಡ್ಚ

ರಾಘು
ನಿಜವಾಗಿಸ ಹೇಳ್ತಾ ಇದ್ದೇನೆ. ನನ್ನ ಹತ್ರ ಯಾವ ಬ್ಯಾಗು ಇಲ್ಲ..

ರಿಚ್ಚಿ
ಸರಿ... bag ನಾವು ಹುಡ್ಕ್ತೇವೆ. ಒಮ್ಮೆ ಸಿಕ್ಕಿದ್ ಮೇಲೆ ನಿನ್ನನ್ನು... shoot...

ರಾಘು ಗಾಬರಿಯಲ್ಲಿಯೇ ಇರುವನು. ದಿನೇಶ ಒಂದು ಬ್ಯಾಗ್ ಹಿಡಿದುಕೋಂಡು ಹೊರಬರುವನು

ದಿನೇಶ
ಸಿಕ್ತು

ರಿಚ್ಚಿ
Good. So ಈಗ ನಿನ್ನನ್ನು shoot ಮಾಡುವ

ರಾಘು
But ಆ bagಅಲ್ಲಿ ಎಂತಸ ಇಲ್ಲ

ರಿಚ್ಚಿ

ಎಂತಸ ಇಲ್ವಾ... bag ಕಾಲಿಯ?

ರಿಚ್ಚಿ, ರಾಘು ಏನೋ ಹೇಳ್ಬಹುದು ಅನ್ನೋ ರೀತಿಯಲ್ಲಿ ಕಾಯುತ್ತಾನೆ

ರಿಚ್ಚಿ
ಎತಾದ್ರೋಂದು ಇಬರ್ಬೇಕಲ್ಲ ಮಾರ್ರೆ.

ದಿನೇಶನ ಕಡೆ ನೋಡಿ

ರಿಚ್ಚಿ
ನೀನ್ ನೋಡಿದ್ಯನ?

ದಿನೇಶ ಇಲ್ಲ ಅನ್ನೊ ರೀತಿಯಲ್ಲಿ ತಲೆ ಅಲ್ಲಾಡಿಸುತ್ತಾನೆ. ರಿಚ್ಚಿ ಮತ್ತೆ ರಾಘುವನ್ನು ನೋಡಿ

ರಿಚ್ಚಿ
Don't worry. ನಿನ್ನನ್ನ್ shoot ಮಾಡಿದ್ಮೇಲೆ ನಾವು ನೋಡ್ತೇವೆ.

ಎಂದು ರಿಚ್ಚಿ ತನ್ನ gunಅನ್ನು ರಾಘುವಿನ ಹಣೆಗೆ ಇಟ್ಟು

ರಿಚ್ಚಿ
ಇವಾಗ ನಿನ್ನನ್ನು shoot ಮಾಡುವ? ಸರಿ shoot ಮಾಡುವ ಮೊದ್ಲು ಆ ಇಬ್ರು ಹುಡುಗರ ಕಥೆ ನಿನಗೆ ಎಂತಕ್ ಹೇಳ್ದೇ?

ರಾಘು ಬೆವರುತ್ತಿರುವನು

ರಾಘು
ಗೊತ್ತಿಲ್ಲ

ರಿಚ್ಚಿ
ಗೊತ್ತಿಲ್ವಾ? ಆ ವಿಷಯ ಹೇಗ್ ಬಂತು?

ರಾಘು ಸಂಪೂರ್ಣವಾಗಿ ವಿಚಲಿತನಾಗಿದ್ದಾನೆ, ಅವನಿಗೆ ಎನು ಹೆಳಲು ತೊಚುವುದಿಲ್ಲಾ.

ರಿಚ್ಚಿ
Come on don't spoil it. ಬಾಗಿಲ್ ಒಡ್ಕೊಂಡ್ ಒಳಗೆ ಬಬರ್ಬೇಕಾದ್ರೆ ಎಂತಂತ ಹೇಳ್ದೆ ನಾನು?

ರಾಘು
Your attention please

ರಿಚ್ಚಿ
ಆಮೇಲೆ. ಅದರ ನಂತ್ರ ಎಂತ ಹೇಳ್ದೆ?

ರಾಘು ಹೇಳಿರುವುದನ್ನು ನೆನಪಿಸಿಕೋಳಲು ಪ್ರಯತ್ನಿಸುತ್ತಿರುವಾಗ, ರಿಚ್ಚಿ gunಅನ್ನು ಅವನ ತಲೆಗೆ ತಾಗಿಸುತ್ತ, gunನ ಚಾಪನ್ನು ಎತ್ತುತ್ತಾನೆ. ರಾಘು ಇನ್ನಷ್ಟು ವಿಚಲಿತನಾಗಿ ಕಣ್ಣು ಮುಚ್ಚಿಕೋಳ್ಳುತ್ತಾನೆ

ರಿಚ್ಚಿ
ಏ... ಬೇಗ ಬೇಗ ಹೇಳು ಮಾರ್ರೆ. ನಾಲ್ಗಗೆ ಎತ್ತು ಮೆಟ್ಟಿತನ? ಆಮೇಲ್ ಎಂತಂತ ಹೇಳ್ದೇ?

ರಾಘು
We meet once again.

ರಿಚ್ಚಿ
ಅಂದ್ರೆ?

ರಾಘು
ಮತ್ತೆ... ಮತ್ತೆ ಸಿಗ್ತಿದ್ದೀವೆ ಅಂತ

ರಿಚ್ಚಿ
ಅಲ್ವಾ? ಬೋಳಿಮಗ್ನೆ... ನಾವು ಮತ್ತೆ ಸಿಗ್ತಿದ್ದೇವೆ...

ರಿಚ್ಚಿ ತನ್ನ ಮಾತಿನ ಗಭೀರತೆಯನ್ನು ಕಡಿಮೆಮಾಡಿಕೋಂಡು ಸ್ವಲ್ಪ ಸ್ನೇಹಪೂರ್ವಕ ಧ್ವನಿಯಿಂದ

ರಿಚ್ಚಿ
...ಹದಿನೈದು ವರ್ಷದ ನಂತರ ನಾವು ಮತ್ತೆ ಸಿಗ್ತಿದ್ದೇವೆ

ರಾಘು ಅವನ ಕಣ್ಣನ್ನು ತೆರೆಯುತ್ತಿದ್ದಂತೆಯೇ ರಿಚ್ಚಿ ನಗಲು ಪ್ರಾರಂಭಿಸುವನು. ಸ್ವಲ್ಪ ಹೊತ್ತು ರಾಘುವಿಗೆ ಸಂಧರ್ಬದ ಅರಿವಾಗುವುದಿಲ್ಲಾ, ನಂತರ ಸ್ವಲ್ಪ ಅನುಮಾನದಿಂದ.

ರಾಘು
ರಿಚ್ಚಿ?

ರಿಚ್ಚಿ
ಹೌದಾ... ರಿಚ್ಚಿ ನೆನ್ಪಿದ್ಯಾ? ನಾಯಿ ಸೂಳೆ ರಂಡಿ ಮಗನೆ.
ನಿನ್ನ ಮುಖನೋಡ. ಪುಕ್ಕಿ ಒಳಗೆ ಇರುವೆ ಹೋದ ಹಾಗಿದೆ.

ದಿನೇಶನು ನಗುತ್ತಿದ್ದಾನೆ. ರಿಚ್ಚಿ ದಿನೇಶನಿಗೆ ರಾಘುವಿನ ಮುಖತೋರಿಸುತ್ತಾ

ರಿಚ್ಚಿ
ನೋಡ. ಮುಖ ನೋಡ ಅವನ್ದು?

ಎಂದು ನಗುತ್ತಿರುವ ರಿಚ್ಚಿ ಒಮ್ಮೆಲೆ ಗಂಭೀರನಾಗುತ್ತಾನೆ

ರಿಚ್ಚಿ
So ರಿಚ್ಚಿ ನೆನ್ಪಿದ್ದಾನೆ ಅಂತಾಯ್ತು?

ರಾಘು
ನಿನ್ನನ್ನು ಮರಿಲಿಕ್ಕೆ ಹೇಗೆ ಸಾದ್ಯಾ ಮಾರ್ರೆ?

ರಿಚ್ಚಿ
ತೊಪರ್ಪುವೆ ನಾಯಿದ ಮಗ. ಹದಿನೈದು ವರ್ಷದ್ ನಂತರ
ಉಡುಪಿಗೆ ವಾಪಾಸ್ ಬಂದು, ನಿನ್ನ best friendಗೆ
ವಿಷಯನೆ ಹೇಳಿಲ್ಲ. ಎಂತಕೆ?

ರಾಘು
ಇಲ್ಲ... ನಿಮ್ಮನ್ನೆಲ್ಲ ಬೇಟಿ ಆಗ್ಬೇಕು ಅಂತನೆ ಇದ್ದೆ. ಆದ್ರೆ

ಎನ್ನುವಷ್ಟರಲ್ಲಿ ರಿಚ್ಚಿ ಅವನನ್ನು ತಡೆದು

ರಿಚ್ಚಿ
ನಿನ್ನೆ ರಾತ್ರಿ ತಾಯಿಯನ್ನ್ ಸಿಗ್ಲಿಕ್ಕೆ ಹೋಗಿದ್ಯಂತೆ

ರಾಘು ತನ್ನ ಬೆವರನ್ನು ವರಿಸಿ ಕೊಳುತ್ತಾ

ರಾಘು
ಹೋ. ನಿಂಗೊತ್ತಾಯಿತಾ?

ರಿಚ್ಚಿ
ದುಬಾಯಿಗೆ ಕಕರ್ಕೊಂಡ್ ಹೋಗ್ತಿದ್ದಿಯಂತೆ... ನನ್ನನ್ನು
ಕರ್ಕೊಂಡ್ ಹೋಗುದಿಲ್ವಾ?

ರಾಘು ಅವನ ಮಾತಿಗೆ smile ಮಾಡುವನು

ರಿಚ್ಚಿ
ಸರಿ ಈಗ ನಿನ್ನ bag ಹಿಡ್ಕೋಂಡ್ ಹೊರಡು. ನನ್ನ್ ಜೋತೆ ಬರ್ತಿದ್ದಿಯ

ರಿಚ್ಚಿ ದಿನೇಶನ ಕೈಯಲ್ಲಿರುವ bagಅನ್ನು ತೆಗೆದು ರಾಘುವಿನ ಕೈಯಲ್ಲಿಡುತ್ತಾನೆ.

ರಾಘು
ಇಲ್ಲ. ಇವತ್ತ್ ರಾತ್ರಿ ಅಮ್ಮನತ್ರ ಮನೆಗ್ ಉಟಕ್ಕೆ ಬತೆರ್ತೀನೆ ಅಂತ ಹೇಳಿದ್ದೆ

ರಿಚ್ಚಿ
ಹೊ. ಸಂಜೆಯಲ್ಲ ಮಾರ್ರೆ ಊಟಕ್ ಹೋಗ್ಲಿಕ್ಕಿರುದು. ನಾನೆ drop ಮಾಡ್ತೀನೆ ಬಾ...

ರಾಘುವಿಗೆ ಬೇರೆ ಏನು ತೋಚದೆ ರಿಚ್ಚಿಯ ಜೊತೆ ಹೋರಡುವನು. ಎಲ್ಲರು ಬಾಗಿಲಿನಿಂದ ಹೊರ ಬರುವರು.

ರಿಚ್ಚಿ
ಮನೆ ಬಾಗಿಲು ಒಡ್ದಾಕಿರುದಕ್ಕೆ sorry ಮರಾಯ.

ಎಂದು ಹೇಳಿ ರಿಚ್ಚಿ ನಗುವನು. Camera ಮನೆಯ ಒಳಗೆ ಇದ್ದು ಮೂವರು ಬಾಗಿಲಿನಮುಕಾಂತರ Omni ಕಾರಿನ ಕಡೆ ಹೋಗುವುದು ಕಣಿಸುತ್ತದೆ

ರಿಚ್ಚಿ
By the way, ಒಂದ್ ಚಿಕ್ಕ್ ಕೆಲ್ಸವನ್ನು ಅರ್ದದಲ್ಲೆ ಬಿಟ್ಟ್ ಬಂದಿದ್ದೇನೆ. If you don't mind, ನಾನು ಅದನ್ನು ಮುಗ್ಸುವ ತನಕ, ನೀನು ಸಮುದ್ರದ ಗಾಳಿ enjoy ಮಾಡ್ತಿರು.

CUT TO:

EXT. DAY: FISHING BOAT

ಸಮುದ್ರದ ನಡುವಿನಲ್ಲಿರುವ ಹಡಗಿನ ಮೇಲೆ ರಾಘು, ರಿಚ್ಚಿ, ದಿನೇಶ ಹಾಗು ಸುಧಿ ಇರುವರು. ರಿಚ್ಚಿ, ರಾಟೆಯಿಂದ ಹೋಗಿ ಹಗ್ಗಕ್ಕೆ ಕಟ್ಟಿರುವ, ಮೀನು ಹಿಡಿಯುವ ಬಲೆಯನ್ನು ಎಳೆಯುತ್ತಿದ್ದಾನೆ. ನೀರಿನಿಂದ ಬಲೆಯನ್ನು ಎತ್ತಿದಾಗ, ಬಲೆಯ ಒಳಗೆ ಹುಲಿಯವೇಷದಾರಿ ಬಾಲು ಇರುತ್ತಾನೆ. ರಾಟೆಯಿಂದ ಬಂದಿರುವ ಹಗ್ಗವನ್ನು ರಿಚ್ಚಿ ತನ್ನ ಕೈಯಲ್ಲಿ ಹಿಡಿದು ಕೊಂಡಿರುವನು. ಬಲೆಯ ಒಳಗಿರುವ ಬಾಲುವನ್ನು ಪದೆ ಪದೆ ನೀರಿನಲ್ಲಿ ಮುಳುಗಿಸಿ, ಅವನಿಗೆ ಚಿತ್ರಹಿಮ್ಸೆ ಕೊಡುತ್ತಿದ್ದು, ರಿಚ್ಚಿ ಅದನ್ನು enjoy ಮಾಡುತ್ತಿರುವನು.

ರಿಚ್ಚಿ
ನಾಯಿದ ಮಗ. ಪಿಲಿಯಂಬೆ ಈ? ಬಾರಿ ಕಾಸ್ ಮಲ್ಪುನ ಆಸೇನ ನೀಕ್?

ಎಂದು ಎರಡು ಮೂರು ಬಾರಿ ನೀರಿಗೆ ಹಾಕಿ ನಂತರ ಅವನನ್ನು ಎಳೆದು ಹಡಗಿನ ಒಳಹಾಕುವನು. ರಾಘು ಹಡಗಿನ ಹಿಂಬದಿಯ ಗೋಡೆಗೆ ಒರಗಿಕೊಂಡು ನಿಂತಿದ್ದಾನೆ. ಬಲೆಯಲ್ಲಿ ಸಿಕ್ಕಿ ನೆಲದ ಮೇಲೆ ಬಿದ್ದಿರುವ ಬಾಲುವಿನ ಬಳಿ ಹೋಗಿ ರಿಚ್ಚಿ ಅವನಿಗೆ ಒದೆಯುತ್ತ

ರಿಚ್ಚಿ
ನಾಯಿಗೆ ನಶೆ ಕೊಟ್ರೆ, ನೆಸ್ಲು ನೆಕ್ತದಂತೆ? ದಗಲ್ಬಾಜಿ, ಹುಲಿಯಾ ನೀನು?

ಎಂದು ಹೇಳಿ ಇನ್ನೋಮ್ಮೆ ಒದ್ದು ಬಾಲುವಿನ ಜೋತೆ ಕೆಳಗೆ ಕುಳಿತುಕೋಳ್ಳುವನು

ರಿಚ್ಚಿ
ಹುಲಿ ಹೇಗೆ ಘರ್ಜಿಸ್ತದೆ ನೋಡುವ?

ಬಾಲು ಅಳಲು ಪ್ರಾರಂಭಿಸುವನು

ರಿಚ್ಚಿ
ನಾಯಿ ಥರಾ ಊಳಿಡ್ಬೇಡ ಮಾರ್ರೆ. ಹುಲಿ ಹುಲಿ ಥರ ಘರ್ಜನೆ ಮಾಡ್ಬೇಕು.

ಬಾಲು ಅಳುತ್ತಾ ಸುಮ್ಮನೆ ನೋಡುವನು

ರಿಚ್ಚಿ
ಎಲ್ಲಿ ಕೇಳ್ತ ಇಲ್ಲ ನಂಗೆ. ಜೋರಾಗಿ. ಜೋರಾಗಿ.

ರಿಚ್ಚಿ ತನ್ನ ಕಿವಿಯನ್ನು ಬಾಲುವಿನ ಹತ್ತಿರ ತೆಗೆದುಕೊಂಡು ಹೋಗುವನು.

ರಿಚ್ಚಿ
ಏಯ್. ಸರಿಯಾದ್ ಮಲ್ತ್ಾಂಡ ಕೋಂತು ಪಾಡ್ವೆ ಬೇವರ್ಸಿ. ಸರಿಯಾದ್ ಕೇನೊಡ್ ಎಂಕ್. ಗಟ್ಟಿ.

ಬಾಲು ಗೋಳೊ ಎಂದು ಅಳುತ್ತಾನೆ. ರಿಚ್ಚಿ ಎದ್ದು ಇನ್ನೋಮ್ಮೆ ಒದೆಯುತ್ತಾ

ರಿಚ್ಚಿ
ಸರಿಯಿಲ್ಲಾ. ಇದು ಹುಲಿ ಸರಿಯಿಲ್ಲಾ. ನಾಯಿಗೆ ಹುಲಿವೇಷ ಹಾಕಿದ ಹಾಗಿದೆ

ಇನ್ನು ನಾಲ್ಕೈದು ಬಾರಿ ಒದೆಯುತ್ತ ಸುಧಿಯನ್ನು ನೋಡಿ

ರಿಚ್ಚಿ
ಸಾಕಾ. ಎಲ್ಲಸ controlನಲ್ಲಿದ್ಯಾ? ಎಷ್ಟ್ ಬೇಕ್ ಅಷ್ಟೆ.

ಸುಧಿ ತಲೆ ಬಾಗಿಸುವನು. ರಿಚ್ಚಿ ಒಂದು ಸುತ್ತು ಬಂದು

ರಿಚ್ಚಿ
ಎಯ್... ಸಾಕಾಗಿಲ್ಲ... ನಮ್ಮ ಹುಲಿಗೆ ಇಷ್ಟು ಮಾತ್ರ ಸಾಕಾಗ್ತದಾ? ಇನ್ನು ಕಲಿಯುವಂತ ಪಾಠ ಸುಮಾರಿದೆ

ಮತ್ತೆ ಒಂದು ಸುತ್ತು ಬಂದು ಮತ್ತೆ ಬಾಲುಗೆ ಒದೆಯುತ್ತಾ

ರಿಚ್ಚಿ
ಅತಂಬೆ. ನನಲ ಕಲ್ಪರೆ ಸುಮಾರ್ ಉಂಡತಾ? ನಮ್ಮ ಹುಲಿಗೆ ಕಲಿಯುವಂತಾ ಪಾಠ ಸುಮಾರಿದೆ

ರಿಚ್ಚಿ ಅವನ gun ತೆಗೆದು, ಬಾಲುವಿನ ಬಳಿ ಇಳಿದು ಅವನ ಸೇವಂತಿಮಾಲೆಯನ್ನು ಬಾಲುವಿನ ಕತ್ತಿಗೆ ಸುತ್ತುತ್ತ

ರಿಚ್ಚಿ
ನಿನಗೆ ನಾನು ಯಾವಗಾದ್ರು Cuba ಹಾಗು ಮಾಂಡ್ಯದ್ ಹುಡುಗರ ಬಗ್ಗೆ ಕಥೆ ಹೇಳಿದ್ದೇನ? ಆ Cubaದ್ ಹುಡುಗ ಮಾಂಡ್ಯದ್ ಹುಡುಗನ ಮುಂದೆ ಬಂದಾಗ್ಲೆಲ್ಲಾ ನಗ್ತಾ ನಗ್ತಾ Spanish ಬಾಷೆಯಲ್ಲಿ ಬೈದದ್ದು. ಒಂದಿನ ಮಾಂಡ್ಯದ್ ಹುಡುಗ Cubaದ್ ಹುಡುಗನನ್ನು ಕೆಳಗೆ ಹಾಕೊ್ಕಂಡು ಅವನ ಮೂಗು ಒಡ್ ಹೋಗೋಹಾಗೆ ಹೊಡ್ದದ್ದು. ಆಮೇಲೆ ಆ Cubaದ್ ಹುಡುಗ ಬೈತಿದ್ದದ್ದಲ್ಲಾ, wish ಮಾಡ್ತಿದ್ದದ್ದು ಅಂತ ಗೊತ್ತಾಗಿದ್ದು. ಈಗಾ, ಆ ಮಾಂಡ್ಯದ್ ಹುಡುಗ Cubaದ್ ಹುಡುಗೆನ್ನ ಕೆಳಗ್ ಹಾಕ್ಕೊಂಡ್ ಡಾಣ್ ಡಾಣ್ ಡಾಣ್ ಅಂತ ಹೋಡಿತಿಬರ್ಬೇಕಾದ್ರೆ, ಈ Cubaದ್ ಹುಡುಗನ್ ತಲೆಯಲ್ಲಿ ಎಂತ ಒಡ್ತಿರ್ಬಹುದು? ನಿನ್ನನ್ನ್ ಆ ಜಾಗದಲ್ಲಿ ಹಾಕ್ಕೊಂದ್ ನೋಡು. ಯಾರಾದ್ರು, ಎಂತಸ ಕಾರಣ ಇಲ್ದೆ ನಿನಗೆ ಹಾಗೆ ಹೊಡೆದ್ರೆ, ನಿನ್ನ್

ತಲೆಯಲ್ೆಲ ಎಂತ ಓಡ್ಬಹುದು? Full confusion
ಆಗ್ಬಹುದಲ್ಲಾ. ನಿಂಗೆ ಈವಗ confusion ಆಗ್ತಾ ಉಂಟಾ?
ಇಲ್ಲ. ನಿಂಗೆ confusion ಆಗ್ತಿಲ್ಲ

ಎಂದು ಅಲ್ಲಿಂದ ಎದ್ದು ಅವನಿಗೆ ಒದೆಯುತ್ತಾ. ಉಳಿದವರಿಗೆ

ರಿಚ್ಚಿ
ನಮ್ಮ ಹುಲಿಗೆ confusion ಆಗ್ತಾ ಇಲ್ಲಾ. ಯಾಕಂತ
ಹೇಳಿದ್ರೆ, ನಮ್ಮ ಹುಲಿಗೆ ನಾನ್ ಎಂತಕ್ಕೆ ಹೊಡಿತಿದ್ದೇನೆ ಅಂತ
ಗೊತ್ತುಂಟು.

ಎಂದು ಹೇಳಿ ಬಾಲುವಿಗೆ gun point ಮಾಡಿ shoot ಮಾಡುವನು. black out ಆಗುತ್ತದೆ

CUT TO:

INSERT ದಿನೇಶ ಮೌನವಾಗಿ ತನ್ನ ಸೆಲ್ಲಿನಲ್ಲಿ ಕುಳಿತಿದ್ದಾನೆ. ರೆಜಿನ ತನ್ನ ಎರಡು ಕೈಗಳನ್ನು ಬಾಯಿಯಬಳಿ ಇಟ್ಟು ಮುಂದಕ್ಕೆ ಒರಗಿ ಕುಳಿತಿದ್ದಾಳೆ. ಕೆಲವೊಂದ ಕ್ಷಣ ಮೌನವಾಗಿ ಕಳೆಯುತ್ತದೆ. ಅಲ್ಲಿಗೆ constable ಬರುವನು. ರೆಜಿನಾ constableಅನ್ನು ನೋಡುವಳು

CONSTABLE
Madam. ಇವತ್ತಿನ್ time ಮುಗಿತಾಬಂತು. ಬೇಕಾದ್ರೆ ನಾಳೆ
ಇದೆ timeಗೆ ಬರ್ಬಹುದು

ರೆಜಿನಾ ಅವಳ ವಸ್ತುಗಳನ್ನು pack ಮಾಡಿಕೋಂಡು ಹೋರಡುವಾಗ ಹಿಂದಕ್ಕೆ ತಿರುಗಿ

ರೆಜಿನಾ
Thank you. ನಾನ್ ನಾಳೆ ಬಂದು ಬೇಟಿಯಾಗ್ತೀನಿ

ದಿನೇಶ ಅವಳನ್ನು ಕಂಡು smile ಮಾಡುತ್ತಾನೆ. ರೆಜಿನ ಅಲ್ಲಿಂದ ಹೋರಡುತ್ತಾಳೆ. Constable ಸೆಲ್ ಮುಚ್ಚುತ್ತಾನೆ

CUT TO:

INSERT ರೆಜಿನಾ ತನ್ನ hostel roomನಲ್ಲಿ ಕುಳಿತಿದ್ದಾಳೆ. Current ಹೋಗಿರುತ್ತದೆ. ಅಲ್ಲಿ ಉರಿಯುತ್ತಿರುವ candleಅನ್ನು ಒಂದು ನೀರಿನ ತಟ್ಟೆಯ ಮೇಲೆ ಬಿಡುತ್ತಾ, ಅದು ಚಕ್ರಾಕಾರದಲ್ಲಿ ಬೇರೆ ಬೇರೆ ಆಗುವುದನ್ನು ಗಮನಿಸುತ್ತಿದ್ದಾಳೆ. ಗಡಿಯಾರದ ಶಬ್ದವು ಜೋರಾಗಿ ಕೇಳುತ್ತಿದೆ. ಅರ್ಧ ಮುಗಿದಿರುವ candleಅನ್ನು ನೋಡುತ್ತಾ

ರೆಜಿನ (VOICE OVER)
ಒಂದಷ್ಟು ಬೆಳಕನ್ನು ಕೊಟ್ಟು, ಇನ್ನಷ್ಟು ಕೆಳಗೆ ಚೆಲ್ಲಿ, ಮೇಣದಬತ್ತಿ
ತನ್ನ ಅರ್ಧ ದಾರಿಗೆ ಬಂದು ನಿಂತಿದೆ. ಕೆಳಗೆ ಚೆಲ್ಲಿರುವ
ಭಾಗವನ್ನಾ ಸೆರಿಸಿದರೆ ಇನ್ನೊಂದು ಮೇಣದ ಬತ್ತಿ ಆಗುತ್ತೆ.
ನಾಳೆ ಅದೂ ಬೆಳಕು ನೀಡ್ಬಹುದು ..

ರೆಜಿನ candleಅನ್ನು ಪಕ್ಕದಲ್ಲಿಡುತ್ತಾಳೆ. ಅಲ್ಲಿಯೇ ಇರುವ card boardಅನ್ನು ತೆಗೆದುಕೊಳ್ಳಳತ್ತಾಳೆ. ಅದರಲ್ಲಿರುವ ಹಾಳೆಯಲ್ಲಿ ಅರ್ಧದವರೆಗೂ ಬರೆದು ತುಂಬಿದೆ. ಅದಕ್ಕೆ ಒಂದು ಗೆರೆಯನ್ನು ಎಳೆದು star mark ಹಾಕಿ ಮತ್ತೆ ಗೆರೆ ಎಳೆದು ಗಾಡವಾಗಿ ಯೋಚಿಸುತ್ತಾಳೆ.

(----------X--------X----------)

Candleಅನ್ನು ನೋಡಿ, ಅದರ ಹತ್ತಿರ ಬಂದು ಅದಕ್ಕೆ ಗಾಳಿ ಊದಿ ಆರಿಸುತ್ತಾಳೆ. ಗಾಳಿ ಊದುವ ಸದ್ದು ಜೋರಾಗಿ ಕೆಳುತ್ತದೆ

**ಮದ್ಯಂತರ**

CUT TO:

INSERT ರೆಜಿನಾಳ ಕೋಣೆಯು ಸಂಪೂರ್ಣವಾಗಿ ಕತ್ತಲಿಂದ ಆವರಿಸಿದೆ. ಅವಳು ನಿದ್ರಿಸಲು ಪ್ರಯತ್ನಿಸುವಳು ಆದರೆ ಅದು ಸಾದ್ಯವಾಗದೆ ತನ್ನ ಹಾಸಿಗೆಯ ಮೇಲೆ ಹೊರಳಾಡುತ್ತಾಳೆ. ನಂತರ ಎದ್ದು ತನ್ನ ಮೇಜಿನ ಬಳಿ ನಡೆದು ಬೆಂಕಿ ಪೆಟ್ಟಿಗೆಯಿಂದ ಕಡ್ಡಿಯನ್ನು ತೆಗೆದು ಅಲ್ಲಿರುವ ಮೇಣದ ಬತ್ತಿಯನ್ನು ಅಂಟಿಸುವಳು. ಮೇಜಿನ ಮೇಲಿರುವ ಕಾರ್ಡ್ ಬೋರ್ಡನ್ನು ತೆಗೆದು ಹೊಸ ಹಾಳೆಯಮೇಲೆ chapter 3 Meen Curry ಎಂದು ಬರೆಯುವಳು

CUT TO:

EXT. NIGHT: RATNAKKA'S HOUSE

ರೆಜಿನಾ ಹಾಗು ಶೈಲು ಮಾರುತಿ 800 ಕಾರಿನಲ್ಲಿ ಬಂದು ರತ್ನಕ್ಕಾಳ ಮನೆಯ ಮುಂದೆ ನಿಲ್ಲಿಸುತಾರೆ. ರೆಜಿನಾ driving seatನಲ್ಲಿ ಕುಳಿತಿದ್ದರೆ ಶೈಲು ಪಕ್ಕದ ಸೀಟಿನಲ್ಲಿ ಕುಳಿತು ರತ್ನಕ್ಕಾಳ ಮನೆಯೆಕಡೆ ಕೈತೋರಿಸುತ್ತಾ

ಶೈಲು
ಒ.. ಅದೆ ಮನಿ...

ಮನೆಯ ಹೊರಗಡೆ ಯಾರು ಇರುವುದಿಲ್ಲ. ಇಬ್ಬರು ಸ್ವಲ್ಪಹೊತ್ತು ಕಾರಿನಲ್ಲಿ ಕುಳಿತು ಕಾಯುವರು. ಸ್ವಲ್ಪ ಸಮಯದ ನಂತರ ರತ್ನಕ್ಕ ಹೊರಬರುವಳು. ಅಲ್ಲಿಯೇ ನಿಂತು ಯಾರನ್ನೊ ಎದುರುಗಾಣುವಂತೆ ರಸ್ತೆಯ ಬಳಿ ನೋಡುವಳು. ರಸ್ತೆಯಲ್ಲಿ ನಿಂತಿರುವ ಕಾರನ್ನು ನೋಡಿ ಖುಷಿಯಿಂದ ಕಾರಿನ ಬಳಿ ನಡೆದು ಕೊಂಡು ಬಂದು ಕಾರಿನ ಬಳಿ ಇಣುಕಿ ನೊಡಿದಾಗ ರೆಜಿನಾಳಿಗೆ ಇರುಸುಮುರುಸಾಗುವುದು. ಶೈಲು ಏನುಮಾಡಲು ತೊಚದೆ ರತ್ನಕ್ಕಳನ್ನು ಕಂಡು smileಮಾಡುವನು. ಶೈಲುವನ್ನ ಕಂಡ ರತ್ನಕ್ಕಳ ಮುಖ ಸಪ್ಪಗಾಗುತ್ತದೆ. ಅಲ್ಲಿಂದ ಹಿಂತಿರುಗಿ ಹೊರಟವಳು ಎನೋ ಅರಿವಾಗಿ ಶೈಲುವಿನ ಕಡೆಗೆ ತಿರುಗಿ ಅವನನ್ನು ಗುರುತಿಸಿ

ರತ್ನಕ್ಕ
ಶೈಲೇಶ ಇಲ್ಲೆಂತ ಮಾಡ್ತಿದ್ದಿಯಾ?

ಶೈಲು smile ಮಾಡುತ್ತಾ

ಶೈಲು
ಎಂತ ಇಲ್ಲಾ ಅಕ್ಕ... ಯಾರೊ ಬತ್ತೆ ಅಂದಿರ್, ಅವರಿಗ್ ಕಾಯ್ತಿದ್ದೆ..

ರತ್ನಕ್ಕಳಿಗೆ ಅವನ ಬಳಿ ಏನೊ ಕೆಳಬೇಕೆನ್ನಿಸುತ್ತದೆ ಆದರೆ ಕೆಳದೆ ಹಿಂತಿರುಗಿ ಜಗುಲಿಯ ಬಳಿ ಹೋಗಿ ಕೂರುವಳು. ಇದನ್ನು ನೋಡಿ ರೆಜಿನ ತನ್ನ camera ತೆಗೆದು ಅದರಿಂದ ರತ್ನಕ್ಕಳ photoತೆಗೆಯುವಳು.

CUT TO:

EXT. DAY: MALPE HARBOR

ರತ್ನಕ್ಕ ಮಲ್ಪೆ harborನಲ್ಲಿ ತನ್ನ ಗೆಳತಿಯ ಜೊತೆ, ಮೀನಿನ ಬುಟ್ಟಿಗಳ ಪಕ್ಕ ಕೂತಿರುತ್ತಾಳೆ. ಒಂದೆರಡು ಬುಟ್ಟಿಯಲ್ಲಿ ಮೀನುಗಳು ತುಂಬಿರುತದೆ. Screenನ ಮೇಲೆ **'ಮೀನ್ ಕರಿ'** ಎಂದು ಬರುತ್ತದೆ. ರತ್ನಕ್ಕ ಹಾಗು ಅನಿತ ಪಿಸುಗುಡುತ್ೌತದ್ದಾರೆ

ಅನಿತ
ಪ್ರಾಯ ಆಯ್ತಲ್ಲ ಅಕ್ಕ ಅವಳಿಗೆ. ಪ್ರಾಯ ನಿಲ್ತದ?

ರತ್ನಕ್ಕ ಬೇರೆಲ್ಲೋ ನೋಡಿಕೊಂಡು ತನ್ನ ಗೆಳತಿಯ ಮಾತಿಗೆ ತಲೆ ಅಲ್ಲಾಡಿಸುತ್ತಿದ್ದಾಳೆ. ಅಷ್ಟರಲ್ಲಿ ಒಬ್ಬಳು ಬಂದು ರತ್ನಕ್ಕಳನ್ನು ಕುರಿತು

ಒಬ್ಬಳು

ರತ್ನಕ್ಕ... ಕಾಣೆ ಹೇಗೆ ಕೊಟ್ರಿ

ರತ್ನಕ್ಕ ಒಬ್ಬಳನ್ನು ನೋಡುತ್ತಾಳೆ

ಒಬ್ಬಳು
500ಕ್ಕೆ ಕೊಡ್ತೀರ?

ರತ್ನಕ್ಕ
ನಾವೆ 600 ಕೊಟ್ಟು ತೆಕೊಂಡದ್ದು

ಒಬ್ಬಳು
550ಕ್ಕೆ ಕೊಡ್ತೀರ ಹೇಳಿ

ರತ್ನಕ್ಕ
ಅಯ್ಯ... 600 ಕೊಟ್ಟು ತೆಕೊಂಡದ್ದು ಮಾರೆತಿ

ಒಬ್ಬಳು ಅಲ್ಲಿಂದ ಹೊರಡುತ್ತಾಳೆ. ರತ್ನಕ್ಕ ಹಾಗು ಗೆಳತಿ ಮುಂದುವರಿಸುತ್ತಾರೆ

ಅನಿತ
ಅಣ್ಣ ಇದ್ದಾನೆ. ಅವನಿಗೆ ಕುಡಿಯುದ್ರಿಂದ ಪುಸರ್ಸೊತ್ ಸಿಕ್ಕಿದ್ರೆ ಅಲ...

ಒಬ್ಬಳು (VOICE)
ರತ್ನಕ್ಕ... ಕೊಡುದಿಲ್ವ ಹಾಗಾದ್ರೆ?

ರತ್ನಕ್ಕ ಎಲ್ಲೊ ದೂರದಲ್ಲಿದ್ದ ಒಬ್ಬಳನ್ನು ನೋಡಿ

ರತ್ನಕ್ಕ
ಎಂತದ? ಗಿರೆಂಗ?

ಗೆಳತಿ ರತ್ನಕ್ಕಾಳ ಕಿವಿಯಲ್ಲಿರುವ ಓಲೆಯನ್ನು ನೋಡಿ ಅದನ್ನು ಹಿಡಿದು

ಅನಿತ
ಅಕ್ಕ. ಬೆಂಡಲೆ ಹೊಸ್ತಾ?

ಪ್ರತಿದಿನ ಬೆಳಗ್ಗೆ ಹಡಗುಗಳು ಹಿಡಿದಿರುವ ಮೀನುಗಳನ್ನು ತುಂಬಿಕೊಂಡು ಹಾರ್ಬರಿಗೆ ಬರುತ್ತದೆ. ಬೇರೆ ಬೇರೆ ಜಾತಿಯ ಮೀನುಗಳನ್ನು ಬೇರ್ಪಡಿಸಿ ಅಲ್ಲಲ್ಲಿ ರಾಶಿ ಹಾಕಲಾಗಿದೆ. Democracy ಹಾಗು ಇನ್ನು ಕೆಲವು ಮಕ್ಕಳು ಕೆಳಗೆ ಬಿದ್ದಿರುವ ಮೀನುಗಳನ್ನು ಹೆಕ್ಕಿ ಒಂದು plastic ಚೀಲದಲ್ಲಿ ಹಾಕಿಕೊಳ್ಳುತ್ತಿದ್ದಾರೆ. ಇನ್ನು ಕೆಲವರು ಯಾರು ನೋಡದೆ ಇದ್ದಾಗ ಬುಟ್ಟಿಯಿಂದ ಮೀನುಗಳನ್ನು ಕದಿಯುತಿದ್ದಾರೆ. ಇನ್ನು ಕೆಲವೊಂದು ಯುವಕರು ಏಲಂ ಕೂಗುತ್ತಿದ್ದಾರೆ. ಮೀನು ಮಾರುವ ಹೆಂಗಸರು ಮೊತ್ತ ಹೇಳಿ ಮೀನುಗಳನ್ನು ಕರೀದಿಸುತ್ತಿದ್ದಾರೆ. ರತ್ನಕ್ಕಾಳ ಗೆಳತಿಯರು, ಗೀತಕ್ಕ ಹಾಗು ಶಾಂತಕ್ಕ, ಮೀನುಗಳನ್ನು ಕರೀದಿಸಿ, ಅದನ್ನು ಬುಟ್ಟಿಯಲ್ಲಿ ಹೊತ್ತು ರತ್ನಕ್ಕ ಕೂತಿರುವ ಜಾಗಕ್ಕೆ ಬರುವರು.

ಶಾಂತಕ್ಕ
375ಕ್ಕೆ ತೆಕೊಂಡ್ಲು.

ರತ್ಮಕ್ಕ ಜಾಸ್ತಿ ಆದಹಾಗೆ react ಮಾಡಿ ಬುಟ್ಟಿಯಲ್ಲಿ ತಂದಿರುವ ಮೀನುಗಳನ್ನು ಹಿಡಿದು ನೋಡಿ

ರತ್ನಕ್ಕ
ಮೀನ್ ಪಜ್ಜಿ ಅತ...

ಶಾಂತಕ್ಕ
ಅದು ಅವಳ್ ಮಾಡಿದ್ದು. ಅಲ್ಲಿ 340ಕ್ಕೆ ಹೋಗ್ತ ಉಂಟು, ಅದನ್ನು ಬಿಟ್ಲು. ನಾನು ಹಿಂದೆ ನಿಂತ್ಕೊಂಡ್ ಕುಂಡೆಗೆ ಚೂಂಟ್ತಾ ಇದ್ದೇನೆ. ಹೇಳಿದ್ರೆ ಕೇಳ್ತಾಳ ಅವ್ಳಳ?

ಗೀತಕ್ಕ ಉಳಿದಿರುವ ಹಣ ಎಣಿಸುತ್ತ

ಗೀತಕ್ಕ
ನನ್ಗೊತ್ತುಂಟ? ಇವತ್ತು boat ಎಲ್ಲ ತಡ ಆಗಿ ಬಂದದಲ್ಲ. ನಿನ್ನೆ ಕಮ್ಮಿಗೆ ತೆಕೊಳ್ಳಿಲ್ವ ನಾನು?

ಅನಿತ ಹೊಸ ಬುಟ್ಟಿಯಲ್ಲಿರುವ ಮೀನುಗಳನ್ನು ನೆಲಕ್ಕೆ ಚೆಲ್ಲಿ ಎಣಿಸಲು ಪ್ರಾರಂಭಿಸುವಳು. ಗೀತಕ್ಕ ಅಲ್ಲೇ ಕೂತು ಮಿಕ್ಕಿರುವ ಹಣವನ್ನು ನಾಲ್ವರ ಮಧ್ಯೆ ಹಂಚುವಳು. ಅನಿತಾಳ ಹಣವನ್ನು ರತ್ನಕ್ಕ, ಗೀತಕ್ಕಾಳ ಕೈಯಿಂದ ತೆಗೆದುಕೊಂಡು ಅನಿತಾಳಿಗೆ ಕೊಟ್ಟರೆ, ಅನಿತ ಎಣಿಸುವುದರಲ್ಲಿ ವ್ಯಸ್ಥಳಾಗಿದ್ದು, ನಿಲ್ಲಿ ಅನ್ನೊ ರೀತಿಯಲ್ಲಿ ಸನ್ನೆ ಮಾಡುತ್ತಾಳೆ

ಗೀತಕ್ಕ
ಅಯ್ಯ. ಇವ್ಳದ್ದೆಂತಂತೆ? (ಅನಿತಾಳಿಗೆ) ಏ ಅನಿತ... ಎಂತ ಮಾಡ್ತಿದ್ಯ?

ಅನಿತ ಎಣಿಸುವುದರಲ್ಲಿ ವ್ಯಸ್ಥಳಾಗಿದ್ದು, ನಿಲ್ಲಿ ಅನ್ನೊ ರೀತಿಯಲ್ಲಿ ಇನ್ನೊಮ್ಮೆ ಸನ್ನೆ ಮಾಡುತ್ತಾಳೆ

ರತ್ನಕ್ಕ
ಹೊಸತಲ. ಹುಮ್ಮಸ್ ಜಾಸ್ತಿ. ಆ ಬುಟ್ಟಿಯನ್ನು ಒಮ್ಮೆ ಲೆಕ್ಕ ಮಾಡಿ ಆಯ್ತು

ಶಾಂತಕ್ಕ ನಕ್ಕು ಅನಿತಾಳನ್ನು ರೇಗಿಸುತ್ತ

ಶಾಂತಕ್ಕ
ಈ ಬುಟ್ಟಿಯಲ್ಲಿ ಎಷ್ಟ್ ಮೀನಿದ್ಯ

ಅನಿತ ಎಣಿಸುವುದರಲ್ಲಿ ವ್ಯಸ್ಥಳಾಗಿದ್ದು, ನಿಲ್ಲಿ ಅನ್ನೊ ರೀತಿಯಲ್ಲಿ ಇನ್ನೊಮ್ಮೆ ಸನ್ನೆ ಮಾಡುತ್ತಾಳೆ

ಶಾಂತಕ್ಕ
ಎಷ್ಟಿದೆ ಅಂತ ಹೇಳು ಮಾರೇತಿ...

ಅನಿತಾಳಿಗೆ ಲೆಕ್ಕ ತಪ್ಪಿ ಸಿಟ್ಟುಗೊಂಡು ಕೈಯಲ್ಲಿದ್ದ ಮೀನನ್ನು ನೆಲಕ್ಕೆ ಬಿಸಾಕಿ

ಅನಿತ
ಎಂತ ಅಕ್ಕ. ಲೆಕ್ಕ ತಪ್ಪಿ ಹೋಯ್ತು ನೋಡಿ

ಗೀತಕ್ಕ
ಲೆಕ್ಕ ಎಂತಕ್ಕೆ ಮಾಡ್ತಿದ್ಯ?

ಅನಿತ
ಪಾಲ್ ಮಾಡುದ್ ಬೇಡ್ವ ಅಕ್ಕ?

ಗೀತಕ್ಕ
ಅಯ್ಯ. ಲೆಕ್ಕ ಮಾಡಿ ಪಾಲ್ ಮಾಡ್ತಾರ ಮಾರೇತಿ. ಎಲ್ಲಿಂದ ಬಂದದ್ದು ನೀನು? ಏಳು...

ಎಂದು ಅನಿತಳನ್ನು ಎಬ್ಬಿಸಿ ನೆಲಕ್ಕೆ ಬಿದ್ದಿರುವ ಮೀನುಗಳನ್ನು ಹಾಗೆ ನಾಲ್ಕು ಪಾಲು ಮಾಡುವಳು

CUT TO:

EXT. DAY: UDUPI ROAD

ರತ್ನಕ್ಕ ಹಾಗು ಶಾಂತಕ್ಕ ಮನೆ ಮನೆಗೆ ಮೀನುಮಾರುತ್ತಾ ಹೋಗುತ್ತಿರುವರು. ಅಲ್ಲೊಂದು ಕಂಪೊಂಡ್ ಬಳಿ ಮರ ಹತ್ತುತ್ತಿರುವ ಓರ್ವ ವ್ಯಕ್ತಿ ಮರದ ಮೇಲಿನಿಂದ ಇವರನ್ನು ನೋಡಿ

ವ್ಯಕ್ತಿ

ಹಲೊ ರತ್ನಕ್ಕ... ಎಂತ ಮೀನ್ ಜೊರಾ?

ರತ್ನಕ್ಕ
ಎಂತ ಜೊರ... ಬೇಕ?

ವ್ಯಕ್ತಿ
ಎಂತ ಮೀನು?

ರತ್ನಕ್ಕ
ಕಾಣೆ ಬಂಗ್ದೆ...

ವ್ಯಕ್ತಿ
ಬುತಾಯಿ ಇಲ್ವಾ?

ರತ್ನಕ್ಕ
ಬುತಾಯಿ ಇಲ್ಲ ಇವತ್ತು. ಕೊಯೊ್ಯಲ್ ಬೇಕ?

ವ್ಯಕ್ತಿ
ಬೇಡ. ಕಾಣೆ ಹೇಗೆ

ರತ್ನಕ್ಕ
ಎಂತ ಇದ್ದದ್ದೆ ಅಲ್ವ... 5ಕ್ಕೆ 30 ಕೊಡಿ

ವ್ಯಕ್ತಿ
ಅಯ್ಯಬ್ಬ... ಬಯಂಕರ ಜಾಸ್ತಿ ಆಯಿತಲ ಮಾರ್‍ರೆ... ಅಷ್ಟು ಕೊಟ್ಟ್ ತಿಂದ್ರೆ ಹೊಟ್ಟೆಗ್ ಸೇರ್ತದಾ? ನಾಳೆ ನೋಡುವ...

ಎಂದು ಮರ ಹತ್ತುದನ್ನು ಮುಂದುವರಿಸುತ್ತಾನೆ

ರತ್ನಕ್ಕ
ನಾಳೆ ಬುತಾಯಿ ತರ್ತೇನೆ...

ರತ್ನಕ್ಕ ಹಾಗು ಶಾಂತಕ್ಕ ಅಲ್ಲಿಂದ ಹೊರಡುವರು

CUT TO:

EXT. DAY: RANDOM HOUSE

ಒಂದು ಮನೆಯ ಹಿಂದಿನ ಅಂಗಳದಲ್ಲಿ ಕೆಲಸದಾಕೆ ಮನೆಯವಳ ತಲೆಗೆ ಮದರಂಗಿ ಹಚ್ಚುತ್ತಿರುವಳು. ರತ್ನಕ್ಕ ಹಾಗು ಶಾಂತಕ್ಕ ಮೀನನ್ನು ಸ್ವಚ್ಚಗೊಳಿಸುತ್ತಿರುವರು.

ರತ್ನಕ್ಕ
ನಾಲ್ಕು ಮೀನ್ ಜಾಸ್ತಿ ಹಾಕ್ತೇನೆ. 10 ರುಪಾಯ್ ಸೇರ್ಸಿ ಕೊಡಿ ಅಕ್ಕ

ಮನೆಯವಳು
ಮನೆಯಲ್ಲಿ ಇರೂದೇ ನಾಲ್ಕು ಜನ. ಇದೇ ಜಾಸ್ತಿ ಆಯ್ತು ಮಾರೇತಿ...

ರತ್ನಕ್ಕ
ಇನ್ನು ಈ ನಾಲ್ಕು ಮೀನನ್ನು ಎಲ್ಲಿ ಮಾರುದು ಅಕ್ಕ?

ಕೆಲಸದಾಕೆ
ಅಲ ರತ್ನಕ್ಕ... ಇಲ್ಲಿ ಮೀನ್ ಮಾರ್ಕಂಡ್ ಇನ್ನೊಬ್ಳು ಬರ್ತಳಲ...

ರತ್ನಕ್ಕ
ಯಾರು?

ಕೆಲಸದಾಕೆ
ನೋಡ್ಲಿಕ್ಕೆ ಲಕ್ಷಣವಾಗಿದ್ದಾಳೆ ನೋಡಿ...

ಶಾಂತಕ್ಕ ರತ್ನಕ್ಕಾಳನ್ನು ನೋಡಿ

ರತ್ನಕ್ಕ
ಏರಿಯೆ?

ಶಾಂತಕ್ಕ
ಶಾರದನ?

ಕೆಲಸದಾಕೆ
ಹ್ಞಾ... ಅಲ... ಅವಳ ಹಿಂದೆ ಯಾವಗ ನೋಡಿದ್ರು ಆ scooter bikeಅಲ್ಲಿ ಯಾರ್ ಮಾರ್ರೆ ಬರೂದು?

ಶಾಂತಕ್ಕ
ಓ... ಅವನ? ಅವನು ಇಲ್ಲಿಯವ ಅಲ್ಲ. ಗಟ್ಟದ ಮೇಲಿನವ. ಅವನ್ದೊಂದು ಅವಸ್ತೆ ಕೇಳಿದ್ರೆ. ಮಲ್ಪೆ ಬಂದರಲ್ಲೇ ಕೆಲ್ಸ ಮಾಡುದ್... ಮದ್ಯಾನದ್ ನಂತ್ರ ಇವಳ ಹಿಂದೆ ಹಿಂದೆ ತಿರ್ ಗೂದ್...

ರತ್ನಕ್ಕ
ಅಕ್ಕ... ಮಂಡೆ ಇಡ್ಬೇಕ ಬೇಡ್ವ?

ಕೆಲಸದಾಕೆ
ಮಂಡೆ ಬೇಡ. ನಾವು ಯಾರು ತಿನ್ನುದಿಲ್ಲ. ನಾವು ನಾಯಿಗೆ ಹಾಕುದ್...

Track ಪ್ರಾರಂಭವಾಗುವುದು. ರತ್ನಕ್ಕ ಎದ್ದು, ಸ್ವಛಗೊಳಿಸಿರುವ ಮೀನುಗಳ ತಲೆಗಳನ್ನು ಒಂದು cardboardನಲ್ಲಿ ಹೆಕ್ಕಿ ಹಿಂಬದಿ ಇರುವ ನಾಯಿಯ ಗೂಡಿನ ಕಡೆ ಹೊರಡುವಳು.

CUT TO:

EXT. NIGHT: UDUPI BUS STOP

ಬಸ್ಸು ಬರುವುದು. ಬಸ್ಸಿನ ಜೊತೆ pan ಆದರೆ, ಶಾಂತಕ್ಕ ಹಾಗು ರತ್ನಕ್ಕ ಬಸ್ಸ್ ನಿಲ್ಲಿಸಲು ಕೈ ತೋರಿಸುತ್ತಿದ್ದಾರೆ. ಬಸ್ಸ್ ನಿಲ್ಲುವುದು. Conductor ಬಂದು ಶಾಂತಕ್ಕ ಹಾಗು ರತ್ನಕ್ಕಾಳ ಕೈಗಳಿಂದ ಬುಟ್ಟಿಗಳನ್ನು ಮೊದಲು ಒಳಗೆ pass ಮಾಡಿ ನಂತರ ಶಾಂತಕ್ಕ ಹಾಗು ರತ್ನಕ್ಕಾಳಿಗೆ ಹತ್ತುಲು ದಾರಿ ಮಾಡಿ ಕೊಡುವನು. ಇಬ್ಬರು ಹತ್ತಿ ಕೊನೆಯ ಸೀಟಿನಲ್ಲಿ ಕೂತು ತಮ್ಮ ತಮ್ಮ ಚೀಲಗಳಿಂದ ಹಣವನ್ನು ತೆಗೆದು conductorನ ಕೈಗೆ ಕೊಡುವರು. Conductor ಅವರಿಗೆ ticketಅನ್ನು ಕೊಟ್ಟು ಅವರ ಬುಟ್ಟಿಯನ್ನು ನೋಡಿ,

ಕಂಡಕ್ಟರ್
ಮೀನ್ ಎಂತಾದ್ರು ಉಳ್ದಿದ್ಯಾ ಅಕ್ಕಾ...

ರತ್ನಕ್ಕ
ಎಲ್ಲ ಕಾಲಿ ಅಣ್ಣ.

ಕಂಡಕ್ಟರ್
ಹೌದ? ಇದ್ರೆ ಮನೆಗೆ ತಕೊಂಡ್ ಹೋಗುವ ಅಂತ.

ರತ್ನಕ್ಕಾಳ ಕೆಲವೊಂದು shotsಗಳು

CUT TO:

ಬಸ್ಸು, ರತ್ನಕ್ಕಳ ಮನೆಯ ಮುಂದೆ ಬಂದು ನಿಲ್ಲುವುದು. ಮೂವರು ಬಸ್ಸಿನಿಂದ ಕೆಳಗಿಳಿಯುವರು

ಶಾಂತಕ್ಕ
ಸರಿ. ಎಲ್ಲೆ ತಿಕ್ಕ ಅಕ್ಕ...

ರತ್ನಕ್ಕ
ಸರಿ

ಶಾಂತಕ್ಕ ಹಾಗು ಸುನಂದ ಅಲ್ಲಿಂದ ಹೊರಡುವರು. ರತ್ನಕ್ಕ ತನ್ನ ಮನೆಯ ಬಳಿಗೆ ಹೊರಡುವಳು

CUT TO:

INT. NIGHT: RATNAKKA'S HOUSE

ರತ್ನಕ್ಕ ತನ್ನ ಅಡುಗೆ ಮನೆಯಲ್ಲಿ ಗಂಜಿಯನ್ನು ಇನ್ನೊಂದು ಪಾತ್ರೆಗೆ ತೋಡುತ್ತಾಳೆ. ಗಂಜಿಯು ಇಳಿಯುವ ಹೊತ್ತಿಗೆ ಉಳಿದ ಪಧಾರ್ತಗಳನ್ನು ಸಿದ್ದಪಡಿಸುತ್ತಾಳೆ. ಗಂಜಿಯು ಇಳಿದ ಬಳಿಕ ಅದನ್ನು ಎತ್ತಲು ಹೋಗುವಷ್ಟರಲ್ಲಿ ಯಾರೊ ಬಾಗಿಲು ಬಡಿದಂತಾಗುತ್ತದೆ. ರತ್ನಕ್ಕ ಬಾಗಿಲಿನ ಕಡೆ ನೋಡುವಳು. ಏನೊ ಆಲೋಚಿಸಿ ತನ್ನ ಕೆಲಸ ಮುಂದುವರಿಸುವಳು. ಮತ್ತೊಮ್ಮೆ ಬಾಗಿಲು ಬಡಿದ ಶಬ್ದ ಕೇಳುವುದು. ರತ್ನಕ್ಕ ಬಾಗಿಲಿನ ಕಡೆ ನೋಡಿ, ಆಲೋಚಿಸಿ ಕೆಲಸ ಮುಂದುವರಿಸಿದವಳು, ಅನುಮಾನದಿಂದ ಎದ್ದು ಅಲ್ಲಿಂದ ಬಾಗಿಲಿನ ಕಡೆ ನಡೆಯುವಳು. ಬಾಗಿಲನ್ನು ತೆರೆದಾಗ, ಅಲ್ಲೊಬ್ಬ ಮೂವತ್ತು ವರ್ಷದ ಯುವಕ ಬೆನ್ನುಹಾಕಿ ನಿಂತಿರುತ್ತಾನೆ. ಬಾಗಿಲು ತೆರೆದ ಶದ್ಬವನ್ನು ಕೇಳಿದ ಅವನು ಹಿಂದೆ ತಿರುಗಿ ನೋಡುತ್ತಾನೆ. ಅವನ ಕಣ್ಣುಗಳಲ್ಲಿ ನೀರು ತುಂಬಿಕೊಂಡಿರುತ್ತದೆ. ರತ್ನಕ್ಕ ಏನೆಂದು ಅರಿವಾಗದೆ ಅವನನ್ನೆ ನೋಡುತ್ತಾಳೆ. ಅವನು ರತ್ನಕ್ಕಳನ್ನು ನೋಡುತ್ತ ಎರಡು ಹೆಜ್ಜೆ ಮುಂದೆ ಬರುತ್ತಾನೆ. ಅವನನ್ನು ನೋಡುತ್ತಿರುವ ರತ್ನಕ್ಕಳಿಗೆ ತಟ್ಟನೆ ಅವನು ತನ್ನ ಮಗನೆಂದು ಅರಿವಾಗುತ್ತಗೆ. ಒಂದು ಕ್ಷಣ ಕುಸಿದಂತಾಗಿ, ಬಾಗಿಲಿಗೆ ಒರಗಿ ನಿಲ್ಲುತ್ತಾಳೆ. ಎಚ್ಚೆತ್ತುಕೊಂಡು, ಮೆಟ್ಟಿಲು ಇಳಿದು ಮಗನ ಕಡೆ ಬರುತ್ತಾಳೆ. ಅವನ ಮುಖವನ್ನು ಮುಟ್ಟಿ, ಬುಜಗಳನ್ನು ಸವರಿ, ಅವನ ಎದೆಯ ಮೇಲೆ ಕೈಯಾಡಿಸಿ ಅಳಲು ಪ್ರಾರಂಭಿಸುವಳು. ರಾಘುವಿನ ಕಣ್ಣಲ್ಲಿ ನೀರು ತುಂಬಿ ಬರುತ್ತದೆ. ಇಬ್ಬರು, ಒಬ್ಬರನ್ನೊಬ್ಬರು ಅಪ್ಪಿಕೊಳ್ಳುತ್ತಾರೆ.

CUT TO:

INT. NIGHT: RATNAKKA'S HOUSE

ರಾಘು ಮನೆಯ ಒಳಗೆ ಕುಳಿತಿದ್ದಾನೆ. ರತ್ನಕ್ಕ ಅಡುಗೆ ಮನೆಯಿಂದ ನೀರು ತಂದು ಕೊಟ್ಟು ಮಗನ ಬಳಿಯಲ್ಲಿ ಕೂರುವಳು. ನೀರನ್ನು ಕುಡಿದ ರಾಘು

ರಾಘು
ಅದಾದ್ಮೇಲೆ ನಂಗೆ ವಾಪಸ್ ಬರ್ಲಿಕ್ಕೆ ಧೈರ್ಯನೇ ಬರ್ಲಿಲ್ಲ.

ರತ್ನಕ್ಕ
ನಿನ್ನ ತಂದೆ ತೀರಿಹೋಗೊ ಮುಂಚೆ ನಿನ್ನನ್ನು ನೋಡ್ಬೇಕಂತ ತುಂಬ ಆಸೆ ಪಟ್ರು.

ಇಬ್ಬರು ಮೌನವಾಗುತ್ತಾರೆ. ರತ್ನಕ್ಕಾಳಿಗೆ ಏನೋ ಅರಿವಾಗಿ ರಾಘುವನ್ನು ಕಂಡು

ರತ್ನಕ್ಕ
ಅಯ್ಯೋ... ನನ್ನೆಂತ ಆಗಿದೆ ಇವತ್ತು? ನಿಂದು ಊಟ ಆಯ್ತಾ ಇಲ್ವಾ ಅಂತಸ ಕೇಳ್ಳಿಲ್ಲ ನಾನು...

ಎಂದು ಎದ್ದೇಳಿ ಅಡುಗೆ ಮನೆಯ ಕಡೆ ನಡೆಯುವಳು

ರಾಘು
ಇಲ್ಲ ಇಲ್ಲ. ನಾನು ಊಟ ಮಾಡ್ಕೊಂಡೆ ಬಂದಿದ್ದೇನೆ

ರತ್ನಕ್ಕ

ನಿಂಗೆ ಮೀನ್ ಸಾರ್ ಅಂದ್ರೆ ಇಷ್ಟ ಅಲ್ವ. ಮಾಡಿ ಹಾಕ್ತೆನೆ.
ಸ್ವಲ್ಪ ಊಟ ಮಾಡು ಮಗ.

ಸ್ವಲ್ಪ ಆಲೋಚಿಸಿ

ರತ್ನಕ್ಕ
ಅಯ್ಯೋ... ಮೀನ್ ಎಲ್ಲ ಕಾಲಿಯಾಗಿದೆ. ಸ್ವಲ್ಪ ನಿಲ್ಲು, ಬೇಬಿ
ಮನೆಗೆಹೋಗಿ ಮೀನ್ ತತರ್ತೇನೆ.

ಎಂದು ಹೇಳಿ ಬಾಗಿಲ ಕಡೆ ನಡೆಯುತ್ತಾಳೆ. ಆವಾಗ ರಾಘು ಎದ್ದು

ರಾಘು
ಅಮ್ಮ. ನಾನು ಹೊರಡ್ಬೇಕು

ರತ್ನಕ್ಕ ಹಿಂದೆ ತಿರುಗಿ ಅವನ ಕಡೆ ನಡೆದು ಅವನ ಮುಖ ಸವರಿ

ರತ್ನಕ್ಕ
ಹದಿನೈದು ವರ್ಷದ್ ನಂತ್ರ ಬಂದಿದ್ದೀಯ ಮಗ. ಮತ್ತೆ ಹೋಗ್ತೀನಿ
ಅಂತ ಮಾತ್ರ ಹೇಳ್ಬೇಡ.

ರಾಘು
ನಂಜೊತೆ ಬರ್ತೀರ?

ರತ್ನಕ್ಕ
ನಿನ್ನನ್ನು ಬಿಟ್ರೆ ನಂಗೆ ಬೇರೆ ಯಾರಿದ್ದಾರೆ?

ರಾಘು
ನಾನು ಜಾಸಿಹೊತ್ತು ಇಲ್ಲಿ ಇರ್ಲಿಕ್ಕಾಗುದಿಲ್ಲ. ನಾನು ಹೋಗುವ
ಮುಂಚೆ ನಿಮ್ಮೆತ್ರ ಕೆಲವೊಂದ್ ವಿಷಯ ಮಾತಾಡ್ಬೇಕು

ರತ್ನಕ್ಕ
ಇವತ್ತೊಂದಿನ ಇದ್ದು ನಾಳೆ ಬೆಳಿಗ್ಗೆ ಹೋಗು

ರಾಘು
ಇಲ್ಲಮ್ಮ...

ರಾಘುವಿಗೆ ಏನು ಹೇಳಬೇಕೆಂದು ತೋಚದೆ

ರಾಘು
ಕೇಳಿ. ನಾನು ನಾಡಿದ್ದು ದುಬಾಯಿಗ್ ಹೋಗ್ತಾ ಇದ್ದೇನೆ.
ನಿಮ್ಮನ್ನು ಅಲ್ಲಿಗೆ ಕರ್ಸ್ಕೊರ್ತೀನಿ. ಬರ್ತೀರಾ?

ರತ್ನಕ್ಕ
ದುಬಾಯಿಗಾ?

ರಾಘು
ಹೌದು. ಆಮೇಲೆ ನಾವು ಜೊತೆಗೆ ಇರ್ಬಹುದು

ರತ್ನಕ್ಕ ರಾಘುವನ್ನು ನೋಡಿ ಕುಷಿಪಡುವಳು. ಆದರೆ ಒಳಗೊಳಗೆ ಭಯವು ಕಾಡುತ್ತದೆ

ರತ್ನಕ್ಕ
ಸತ್ಯ ಹೇಳಿದ್ದೀಯ? ನಿಜವಾಗ್ಲೂ ನನ್ನನ್ನು ಕರ್ಕೊಂಡು ಹೋಗ್ತಿಯ?
ನಾಡಿದ್ದು ನಿಂಜೊತೆನೆ ಬತರ್ತೇನೆ ಹಾಗಾದ್ರೆ

ರಾಘು
ಅಲ್ಲಗೆ ಹೋಗ್ಬೇಕಾದ್ರೆ ನಿಮ್ಮ passport ready ಆಗ್ಬೇಕು.

ಒಂದ್ ತಿಂಗ್ಳು ಆಗ್ತದೆ. ನಾನು ಅದ್ವರ್ಗು ಅಲ್ಲಿ ಇರ್ಲಿಕ್ಕೆ ಆಗುದಿಲ್ಲ

ರಾಘು ತನ್ನ ಜೇಬಿನಿಂದ ಹಣವನ್ನು ತೆಗೆದೆ ತಾಯಿಯ ಬಳಿ ಕೊಡುತ್ತಾನೆ.

ರಾಘು
ಇದು ಇಡ್ಕೊಳಿ. ನನ್ನ friend ಬಂದು ನಿಮ್ಮನ್ನು Bangaloreಗೆ ಕರ್ಕೊಂಡ್ ಹೋಗಿ ನಿಮ್ಮ passport ready ಮಾಡಿಸ್ತಾನೆ. Passport ready ಆದ್ಕೂಡ್ಲೆ ನಾನು ಅಲ್ಲಿಂದ ticket ಕಳಿಸ್ತೆನೆ. ನನ್ನ್ friend ನಿಮ್ಮನ್ನೆ ದುಬಾಯಿಗೆ ಕರ್ಕೊಂಡ್ ಬತರ್ತಾನೆ.

ರತ್ನಕ್ಕ
ನೀನೆ ಬಂದ್ ಕಕರ್ಕೊಂಡ್ ಹೋಗ್ಮಗ...

ರಾಘು
ನಿಮ್ಗೆ ಅರ್ಥ ಆಗಲ್ಲ. ಸರಿ. ನಾನು ಬಂದು ತುಂಬ ಹೊತ್ತಾಯ್ತು. ನಾನು ಹೊರಡ್ತೇನೆ.

ರತ್ನಕ್ಕ ಅವನನ್ನು ನಿಲ್ಲಿಸಿ

ರತ್ನಕ್ಕ
ಊಟ ಆದ್ರು ಮಾಡಿ ಹೋಗ್ಮಗ. ಇನ್ನು ನಿನ್ನನ್ನು ಯಾವತ್ತ್ ನೋಡ್ತೇನೋ ಗೋತ್ತಿಲ್ಲ

ರಾಘು ಒಂದು ಕ್ಷಣ ಆಲೋಚಿಸಿ

ರಾಘು
ನಾಳೆ ರಾತ್ರಿ ಬಂದು ಊಟ ಮಾಡ್ತೆನೆ.

ರತ್ನಕ್ಕ
ಸರಿ. ನಾನು ನಿಂಗೆ ಮೀನ್ಸಾರ್ ಮಾಡಿ ಇಡ್ತೇನೆ. ಬೇಗ ಬಾ ಮಗ...

ರಾಘು smile ಮಾಡುತ್ತ

ರಾಘು
ನಿನ್ ಕೈ ಮೀನ್ಸಾರ್ ತಿನ್ನದೆ ಎಷ್ಟೋ ವರ್ಷ ಆಯ್ತುಮ್ಮ. ಸರಿ ನಾನಿವಾಗ ಹೊರಡ್ತೇನೆ...

ರಾಘು ಹೊರಟು Sumo ಬಳಿ ನಡೆಯುತ್ತಾನೆ. ರತ್ನಕ್ಕ ಬಾಗಿಲ ಬಳಿ ನಿಂತು ನೋಡುತ್ತಾಳೆ. ರಾಘು Sumo ಹತ್ತಿ, ತಾಯಿಯ ಬಳಿ ತಿರುಗಿ ನೋಡಿ smile ಮಾಡುತ್ತಾನೆ. ರತ್ನಕ್ಕ ರಾಘುವನ್ನು ನೋಡಿ ಕಣ್ಣೀರು ಹಾಕುತ್ತ smile ಮಾಡುತ್ತಾಳೆ. ರಾಘುವಿನ ಕಣ್ಣು ತುಂಬಿ ಬರುವ ಮೊದಲೆ Sumo ಅಲ್ಲಿಂದ ಹೊರಡುತ್ತದೆ. ರತ್ನಕ್ಕ ಕಾಲಿ ರಸ್ತೆಯನ್ನು ನೋಡುತ್ತ ನಿಲ್ಲುವಳು

CUT TO:

EXT. DAY: MALPE HARBOR

ರತ್ನಕ್ಕ ಮಲ್ಪೆ ಹಾರ್ಬರಿಗೆ ಬರುವಳು, ಅವಳ ಸ್ನೆಹಿತೆಯರು ಕರೀದಿಸಿರುವ ಮೀನನ್ನು ಬೇರ್ಪಡಿಸುತ್ತಿರುವರು, ರತ್ನಕ್ಕನನ್ನು ನೋಡಿ ಅವರಲ್ಲೊಬ್ಬಳು

ಮಹಿಳೆ
ಎಂತ ರತ್ನಕ್ಕ... ಎಲ್ಲಿ ಬುಟ್ಟಿನೆ ತಂದಿಲ್ಲಾ..

ರತ್ನಕ್ಕ ಅಲ್ಲಿಯೇಪಕ್ಕದಲ್ಲಿ ಕುಳಿತು ಉಳಿದವರ ರಾಶಿಯಲ್ಲಿರುವ ಮೀನನ್ನು ಕುತೂಹಲದಿಂದ ನೋಡುತ್ತಾಳೆ

ಶಾಂತಮ್ಮ
ಎಂತ ಹುಷಾರಿದ್ಯನ...?

ರತ್ನಕ್ಕ ಶಾಂತಮ್ಮಳನ್ನು ನೋಡುತ್ತಾ

ರತ್ನಕ್ಕ
ನನ್ನ ಮಗಾ ವಾಪಾಸ್ ಬಂದಿದ್ದಾನೆ

ಎಲ್ಲರು ಅವರವರ ಮುಖ ನೋಡಿ ರತ್ನಕ್ಕಳಿಗೆ

ಇಬ್ಬರು
ಎಂತಾ....?

ರತ್ನಕ್ಕ
ನನ್ನ ಮಗಾ... ವಾಪಾಸ್ ಬಂದಿದ್ದಾನೆ

ಸುನಂದ
ಅಯ್ಯೋ.. ೧೫ ವರ್ಷದ್ ಹಿಂದ್ ಓಡಿಹೋಗಿದ್ನಲ್ಲಾ.. ವಾಪಾಸ್ ಬಂದಿದ್ದಾನಾ..?

ರತ್ನಕ್ಕ
ಹೌದು....

ಎಂದು ಮೂರು ನಾಲ್ಕು ಮೀನನ್ನು ತನ್ನ ಪ್ಲಾಸ್ಟಿಕ್ ಚೀಲದಲ್ಲಿ ಹಾಕುವಳು. ರತ್ನಕ್ಕನ ಎಲ್ಲಾ ಸ್ನೇಹಿತರು ಖುಷಿಯಾಗುವರು,ಎಲ್ಲರು ಒಬ್ಬರನ್ನೊಬ್ಬರು ನೊಡಿಕೊಳ್ಳುವರು

ಹೆಂಗಸು
ಎಲ್ಲಿದ್ನಂತೆ..?

ರತ್ನಕ್ಕ
ಬೊಂಬಾಯಿ...

ಹೆಂಗಸು
15 ವರ್ಷ ಎಂತ ಮಾಡ್ತಿದ್ದಾ ಅಂತೆ...?

ರತ್ನಕ್ಕ
ಹೊಟ್ಲಂಗ್ ಕೆಲಸಾ ಮಾಡ್ತಿದ್ದಾ ಅಂತ..

ಶಾಂತಮ್ಮ
ಸುಮಾರ್ ಕಾಸ್ ಮಾಡಿತರ್ತಾನೆ..

ರತ್ನಕ್ಕ
(ನಗುತ್ತಾ.)ನನ್ನ ದುಭಾಯಿಗ್ ಕರಕೊಂಡ್ ಹೋಗ್ತಾನಂತ

ಎಲ್ಲರು ಖುಷಿ ಹಾಗು ಆಶ್ಚರ್ಯದಿಂದ.

ಎಲ್ಲರು
ದುಭಾಯಿಗಾ..?

ರತ್ನಕ್ಕ smile ಮಾಡುತ್ತಾ ಹೌದು ಎನ್ನುವ ರೀತಿಯಲ್ಲಿ ತಲೆ ಅಲ್ಲಾಡಿಸುತ್ತಾಳೆ

ಹೆಂಗಸು
ಹಾಗದ್ರೆ ಇನ್ನು ನೀನು ನಮ್ಮ ಜೊತೆ ಬರುದಿಲ್ಲಾ..?

ಹೆಂಗಸು
ಯಾವಾಗ್ ಹೊರಡುವುದು...?

ರತ್ನಕ್ಕ
ಒಂದು ತಿಂಗಳ ನಂತರ, pass port ready ಆಗ್ಬೆಕು.
ಒಂದು ತಿಂಗಳಾಗ್ತದಾ pass port ready ಆಗ್ಲಿಕ್ಕೆ

ರತ್ನಕ್ಕಾಳ ಸ್ನೇಹಿತೆ ಅವಳ ಕೈಯಲ್ಲಿರುವ plastic ನೋಡಿ

ಹೆಂಗಸು
ಮಗನಿಗೆ ಮೀನ್ ಸಾರ್ ಮಾಡ್ಲಿಕ್ಕಾ..?

ರತ್ನಕ್ಕ
ಹೌದು.. ಅವನಿಗೆ ಕಾಣೆ ಅಂದ್ರೆ ತುಂಬಾ ಇಷ್ಟ.. ಸರಿ ನಾನ್
ಹೊರಡ್ತೆನೆ ತಡಾ ಆಗ್ತಿದೆ....

ಎಂದು ರತ್ನಕ್ಕ ಅಲ್ಲಿಂದ ಹೊರಡುವಳು, ಆಗ ಅವಳ ಸ್ನೇಹಿತೆಯರು ಜೊರಾಗಿ ಕೂಗಿ

ಹೆಂಗಸು
ರತ್ನಕ್ಕಾ.... ದುಬಾಯಿಗ್ ಹೊದಮೇಲೆ ನಮ್ಮನ್ನೆಲ್ಲಾ
ಮರಿಬೇಡಿ...

ರತ್ನಕ್ಕ smile ಮಾಡುತ್ತ ಜೊರಾಗಿ

ರತ್ನಕ್ಕ
ಎಯ್ ಪೊಕ್ಕಡೆ ಕುಲ್ಲುದೆ ಕುದುರೆ.. ಮೊಲೆನ ಒಂಜಿ
ನಾಟಕ... ಸರಿ ನಾಳೆ ಸಿಕ್ತೆನೆ..

ಎಂದು ರತ್ನಕ್ಕ ಅಲ್ಲಿಂದ ಹೊರಡುವಳು. ಸ್ವಲ್ಪ ದೂರ ಬಂದಾಗ ಒರ್ವ ವ್ಯಕ್ತಿ ಅವಳನ್ನು ತಡೆದು

ವ್ಯಕ್ತಿ
ದಾನೆ ರತ್ನಕ್ಕ ಬಾರಿ ಅಜರ್ಜೆಂಟ್್ಡ ಪೊವೊಂದುಲ್ಲೆರ...?

ರತ್ನಕ್ಕ ಹಿಂದಿರುಗಿ ಅವನ ಹತ್ತಿರ ಬಂದು

ರತ್ನಕ್ಕ
ಮಗೆ ಬೈದೆ...

ವ್ಯಕ್ತಿ
ಮಗೇನ... ಕಿನ್ಯಡ್ ಬಲ್ತ ಪೊದಿತ್ತೆ ಅತಾ... ಆಯೆನಾ?

ರತ್ನಕ್ಕ
ಅಂದ್...

ವ್ಯಕ್ತಿ
ಓಲಿತ್ತೆಗೆ..?

ರತ್ನಕ್ಕ
ಅಯ್ಯೊ.. ಮಲ್ಲ ಕಥೆ. ತಡಾ ಆಗಿದೆ ಆಮೇಲೆ
ಹೇಳ್ತೆನೆ..(ಎಂದು ಹೊರಟವಳು ತಿರುಗಿ) ದುಬಾಯಿ
ಪೊವೊಂದುಲ್ಲೆ..

ಎಂದು ಹೋಗುವಲು. ವ್ಯಕ್ತಿ ನೋಡುತ್ತಿರುವನು. Plastic ಹಿಡಿದುಕೊಂಡು ನಡೆದುಹೋಗುವ ಕೆಲವೊಂದು ದೃಶ್ಯಗಳು.

CUT TO:

EXT. DAY: RATNAKKA'S HOUSE / NEIGHBOR

ರತ್ನಕ್ಕ plastic coverಅನ್ನು ಹಿಡಿದು ಕೊಂಡು ತನ್ನ ಮನೆಯ ಬಳಿ ಬರುವಳು. ಅಲ್ಲಿಯೇ ಪಕ್ಕದಲ್ಲಿರುವ ಅವಳ ಪಕ್ಕದಮನೆಯವಳನ್ನು ಕರೆಯುವಳು

ರತ್ನಕ್ಕ
ಬೇಬಿ.... ಬೇಬಿ....?

ಬೇಬಿ ಅವಳ ಮನೆಯಿಂದ ಹೋರ ಬರುವಳು

ರತ್ನಕ್ಕ
ನನ್ನ ಮಗಾ ಬಂದಿದ್ದಾನೆ....

ಬೇಬಿ
ಹೌದಾ... ಎಲ್ಲಿ...?

ರತ್ನಕ್ಕ
ಅಯ್ಯೋ... ನಿನ್ನೆ ರಾತ್ರಿನೆ ಬಂದ ಹೋದ.. ಇವತ್ತು ರಾತ್ರಿ ಊಟಕ್ಕೆ ಬತರ್ತಾನೆ, ಬಂದ್ ಕೂಡ್ಲೆ ಹೇಳ್ತೆನೆ.

ಬೇಬಿ
ಎಲ್ಲಿದ್ದಾ ಅಂತೆ..?

ರತ್ನಕ್ಕ
ನನ್ನ ದುಬಾಯಿಗ್ ಕರಕೊಂಡು ಹೊಗ್ತಿದ್ದಾನೆ. pass port ready ಆದ್ ಕೂಡ್ಲೆ..

ಬೇಬಿ
ದುಬಾಯಿಗಾ..?

ರತ್ನಕ್ಕ
ಹೌದು ಆಮೇಲ್ ಹೇಳ್ತೆನೆ.. ಈಗಾ ತಡಾ ಆಗ್ತಿದೆ. ರಾತ್ರಿಗೆ ಮೀನ್ ಸಾರ್ ಮಾಡ್ತಿದ್ದೆನೆ.. ಮಸಾಲೆ ಕಡಿಬೇಕು.

ಎಂದು ರತ್ನಕ್ಕ ಅಲ್ಲಿಂದ ನಡೆದು ಹೊಗುವಳು , ಹಿಂದಿನಿಂದ ಬೇಬಿ

ಬೇಬಿ
ರಾತ್ರಿಗಾದ್ರೆ , ಇಷ್ಟ ಅಜರ್ಜೆಂಟ್ ಯಾಕ್ ಮಾಡ್ತಿದ್ದೀಯ..?

ಅದನ್ನು ಕೇಳದ ಹಾಗೆ ಅವಸರ ವಾಗಿ ಮನೆಯ ಕಡೆಗೆ ಹೊಗುವಳು , ಅದನ್ನು ನೋಡಿ ಬೇಬಿ ನಗುವಳು.

CUT TO:

INT. DAY: RATNAKKA'S HOUSE

ರತ್ನಕ್ಕ ಮಸಾಲೆ ಅರೆದು ಮೀನ್ ಸಾರ್ ಮಾಡುವ ಕೆಲವೊಂದು ದ್ರುಶ್ಯಗಳು, ಕತ್ತಲಾಗುತ್ತದೆ ಹೊರಗಡೆ ಒಂದು ಗಾಡಿ ಹೋದಹಾಗಾಗುತ್ತದೆ ರತ್ನಕ್ಕ ಒಡಿಬಂದು ರಸ್ತೆಯನ್ನು ನೋಡುತ್ತಾಳೆ, ಯಾರು ಇಲ್ಲದಿರುವುದನ್ನು ನೋಡಿ ವಾಪಾಸಾಗುವಳು. ಮತ್ತೆ ಕೆಲಸ ಮುಂದುವರಿಸುವಳು, ಮೀನ್ ಸಾರ್ ತಯಾರಾಗುತ್ತದೆ ಪುನಃ ಹೊರಗೆ ಬಂದು ಗಡಿಯಾರವನ್ನು ನೋಡುವಳು, ಗಂಟೆ ಎಂಟಾಗಿರುತ್ತದೆ, ನಂತರ ಒಳಹೋಗುವಳು. ಅಡುಗೆ ಮನೆಯಲ್ಲಿ ಎಲ್ಲವು ತಾಯಾರಾಗಿದ್ದರೂ ಆಚೆ ಈಚೆ ಓಡಾಡುತ್ತಾ ಅಲ್ಲಿರುವುದನ್ನು ಇಲ್ಲಿಡುತ್ತ, ಇಲ್ಲಿರುವುದನ್ನು ಅಲ್ಲಿಡುತ್ತ ಚಡಪಡಿಸುವಳು, ನಂತರ ಎನುಮಾಡಬೇಕೆಂದು ತೋಚದೆ ಒಂದು ಪಾತ್ರೆಗೆ ಮೀನ್ ಸಾರನ್ನು ಹಾಕಿ ಕೊಂಡು ಊಟಕ್ಕೆ ಎಲ್ಲವನ್ನು ತಯಾರಿ ಮಾಡಿಕೊಂಡು ತಂದು ಹೊರಗಿಟ್ಟು ಕಾಯುವಳು ಆಗ ಮುನ್ನನ bike pass ಆಗುತ್ತದೆ, ರತ್ನಕ್ಕ ತನ್ನಮಗನಿಗಾಗಿ ಕಾಯುತ್ತಿದ್ದರೆ camera ನಿಧಾನ ವಾಗಿ ಹಿಂದಕ್ಕೆ ಹೋಗುತ್ತದೆ.

CUT TO:

INSERT ರೆಜಿನ ಬೆಂಗಳೂರಿನ ಬಸ್ಸಿನಲ್ಲಿ ಕೂತು travel ಮಾಡುತ್ತಿರುವವಳು, chapterಅನ್ನು ಮುಗಿಸುವ ಸಲುವಾಗಿ ಹಾಳೆಯ ಮೇಲೆ ಗೆರೆ ಹಾಗು star markಗಳೆನ್ನು ಎಳೆಯುವಳು. ಬೆಂಗಳೂರಿನ town hall ಪಕ್ಕದಲ್ಲಿ ರೆಜಿನಾಳ ಕೆಲವೊಂದು ಮುಂಜಾನೆಯ montages.

CUT TO:

INT. DAY: ENGINE ROOM OF THE BOAT

ಮುನ್ನನ್ನ love theme ಶುರುವಾದರೆ, dissolve to ಮುನ್ನ ತನ್ನ ಕಣ್ಣನ್ನು ಮುಚ್ಚಿಕೊಂಡು ಮಲ್ಪೆ ಹಾರ್ಬರ್ನಲ್ಲಿ romantic moodನಲ್ಲಿ ನಡೆದುಕೊಂಡು ಹೋಗುತ್ತಿದ್ದಾನೆ. Music ಜೊತೆ ಅಲೆಗಳ ಶಬ್ದಗಳು ಕೇಳುತ್ತಿದೆ. ತಟ್ಟನೆ ಮುನ್ನ frameನಿಂದ ಕೆಳಗೆ ಬಿದ್ದರೆ music abrupt ಆಗಿ ನಿಲ್ಲುತ್ತದೆ. Dissolve to blank

DEMOCRACY (VOICE)
ಏನಾಯಿತಾ... ನೋಡ್ಕೊಂಡ್ ನಡಿಬೇಕ್ ಅಲ್ವಾ ಮಾರ್‍ರೆ?
ಯಾವಾಗ ನೋಡಿದ್ರೆಸ feelingಅಲ್ಲೆ ಇರ್ತೀಯಾ...

ಕತ್ತಲಿಂದ engine room ಬಾಗಿಲು ತೆರೆಯುತ್ತದೆ. Camera, engine roomನ ಒಳಗಿದೆ. ಬಾಗಿಲಿಂದ ಬರುವ ಬೆಳಕನ್ನು ಬಿಟ್ಟರೆ ಉಳಿದದ್ದೆಲ್ಲ ಕತ್ತಲು. Democracy ಬಂದು ಕೆಳಗಿಳಿದು ಮೇಲೆ ನೋಡುತ್ತ

DEMOCRACY
ಹಾ:.. Kit ಪಾಸ್ ಮಾಡು

ಇನ್ನೊಂದ್ ಕಡೆಯಿಂದ tool box ಪಾಸಾಗುತ್ತದೆ.

DEMOCRACY
Spare part pass ಮಾಡು

ಇನ್ನೋಂದು ಕಡೆಯಿಂದ ಮುನ್ನ

ಮುನ್ನ (VOICE)
Tool box ಎಸ್ದಂಗ್ ಎಸಿಬೆಡ್ವೋ... ಇದು ಒಡ್ದ್ ಓಯ್ತದೆ.

DEMOCRACY
ಹೌದ್ ಹೌದು... ನಂಗೆಲ್ಲಾ ಗೊತ್ತುಂಟು. ನಾನ್ ಹೊಸ್ತಾಗಿ
ಎಂತ ಬರ್ಲಿಲ್ಲ.

ಮುನ್ನ (VOICE)
ಕೊಟ್ಟೆ ಅಂದ್ರೆ ನನ್ ಮಗ್ನೆ... ಹೋಗ್ ಗೋಡೆಗ್ ಕಚ್ಕೊಂಡ್
ಬಿಡ್ಬೇಕು. ಒಂದ್ ನಿಮಿಷಾ... ನೀರಿನ್ ಬಾಟ್ಲಿ ತಗಂಡ್ ಬತ್ತೀನಿ

DEMOCRACY
ಏಯ್ ನನ್ನನ್ ಒಬ್ನನ್ನೆ ಬಿಟ್ಟು ಹೋಗ್ ಬೇಡಾ. ಹೆದ್ರಿಕೆ
ಆಗ್ತದಾ...

ಸುತ್ತಲು ಕತ್ತಲೆ ಕೋಣೆಯನ್ನು ನೋಡುತ್ತ

DEMOCRACY
ಏಯ್ ಕೇಳಿಸ್ತುಂಟಾ? ನಾನ್ಸ ಬತೆರ್ತೀನೆ...

ಎಂದು ಹೇಳಿ ಮೇಲೆ ಹತ್ತಲು ಪ್ರಯತ್ನಿಸುವನು. ಅವನಿಂದ ಆಗದೆ ಇದ್ದಾಗ ಒಂದು ಕೈ ಬಂದು ಅವನನ್ನು ಮೇಲಕ್ಕೆ ಎತ್ತುತ್ತದೆ

ಮುನ್ನ (VOICE)
ನೀನು ಹೊಸ್ಬಾ ಅಲ್ಲಾ ಅಂತ್ ಅಂದ್ಕಂಡೆ

DEMOCRACY'S VOICE
ಒಳಗೆ ಎಷ್ಟು ಕತ್ತೆ ಇದೆ ಗೊತ್ತುಂಟ ನಿಂಗೆ? ಬೂತ ಗೀತ ಬಂದ್ ಒಳಗೆ ಸೇರಿಕೊಂಡಿದ್ರೆ ಎಂತ ಮಾಡುದಾ? ನೀವು ಮಂಡ್ಯಾದವ್ರಿಗೆ ಇದೆಲ್ಲಾ ಗೊತ್ತಾಗುದಿಲ್ಲ.

ಮನ್ನ (VOICE)
ಮಂಡ್ಯಾ ಗಿಂಡ್ಯಾ ಅಂದ್ರೆ, ಎಗ್ರಸ್ ಎದೆಗ್ ಒದಿತೀನಿ..

CUT TO:

INSERT ರೆಜಿನಾ ತನ್ನ officeನಲ್ಲಿ White board ನೋಡುತ್ತ ನಿಂತಿದ್ದಾಳೆ. ಆ white board ಮೇಲೆ Chapter 4 ಎಂದು ಬರೆದಿದೆ. ಅವಳ ಪಕ್ಕದಲ್ಲಿ ಒಂದು table ಇದ್ದು, ಯೋಚನೆ ಮಾಡುತಾ್ತಾ ತನ್ನ ಕೈಯಲ್ಲಿರುವ marker penಅನ್ನು ಆ tableಗೆ ನಿಧಾನವಾಗಿ tap ಮಾಡುವಳು. ಕಾಫಿ ಕುಡಿದುಕೊಂಡು passಆಗುವ Editor boardಅನ್ನು ಕಂಡು

EDITOR
Chapter 4... Hmm...

ರೆಜಿನ smile ಮಾಡುತ್ತಾಳೆ. ಅವಳಿಗೆ ಏನೋ ಅರಿವಾಗಿ pass ಆಗುವ Editorಅನ್ನು ಕರೆಯುವಳು

ರೆಜಿನ
Sir...

Editor ಹಿಂತಿರುಗಿ

EDITOR
Yes...

ರೆಜಿನ
ನಿಮ್ shirt size?

Editor smile ಮಾಡುತ್ತ

EDITOR
Are you planning to gift me a shirt now?

ರೆಜಿನ
Actually I was buying one for my dad.
ಅವರ್ shirt size almost same ಇರ್ ಬೇಕು...

EDITOR
Oh... Well in that case you should ask my wife. ಈ shopping ಎಲ್ಲ ಅವಳೇ ಮಾಡೋದು.

ಎಂದು ಹಿಂತಿರುಗಿ ಅಲ್ಲಿಂದ ಹೊರಡುವನು. Close on ರೆಜಿನಳ expression.

EDITOR (ಕಿರುಚುತ್ತ)
42...

ರೆಜಿನ (ಕಿರುಚುತ್ತ)
Sorry...

Officeನಲ್ಲಿ ಎಲ್ಲರು ನೋಡುತ್ತಿದ್ದಾರೆ. ಅದನ್ನು ಗಮನಿಸಿ Editor

EDITOR (WHISPERING)

I think it is 42...

ರೆಜಿನ smile ಮಾಡುವಳು... Boardನ ಕಡೆ ನೋಡುವಳು. ಸ್ವಲ್ಪ ಯೊಚಿಸಿ, board ಹತ್ತಿರ ನಡೆದುಕೊಂಡು ಹೋಗಿ Chapter 4ರ ಮುಂದೆ Whispers in the wind ಎಂದು ಬರೆಯುವಳು

CUT TO:

ಕತ್ತಲಲ್ಲಿ Democracy ಮಾತು ಕೇಳಿಬರುತ್ತದೆ

DEMOCRACY (VOICE)
ನೀನ್ ಮೊದ್ಲು ಹೋಗು...

ಮುನ್ನ ಮೇಲಿಂದ engine roomಗೆ ಇಳಿದುಕೊಂಡು ಬರುವನು. ಆಗ frame ಪಕ್ಕದಲ್ಲಿ Chapter 4 **'ಕೇಳದ ಪಿಸುಮಾತು'** ಎಂದು ಬರುತ್ತದೆ. ಮುನ್ನ ಈಬಾರಿ ತಲೆಗೆ bandage ಹಾಕಿಕೊಂಡಿದ್ದಾನೆ. Democracy ಕೆಳಗಿಳಿದು ಬರುವನು. ಮುನ್ನ engine pitನ ಒಳಗೆ ಇಳಿಯುತ್ತಾನೆ. ಮೇಲಿರುವ Democracy ಮುನ್ನನ bagಅನ್ನು ತೆರೆದು ಹುಡುಕಲು ಶುರು ಮಾಡುವನು. ಆಗ ಅವನಿಗೆ ಒಂದು sports glass ಸಿಗುತ್ತದೆ. ಅದನ್ನು ಮುನ್ನನಿಗೆ ತೋರಿಸಿ

DEMOCRACY
ನಿನ್ ಹತ್ರ ಎರಡು ಉಂಟಲ್ಲ. ನನ್ಗೆ ಒಂದು ಕೊಡು.

ಮುನ್ನಾ
ಏನ್ನ...

ಎದ್ದು Democracy ಕಡೆ ನೋಡುವನು

ಮುನ್ನಾ
ಏಯ್. ನನ್ cooling glass ಮುಟ್ಟಿದ್ರೆ ಅಷ್ಟೆ. ಒಳಗಿಡ್ಲಾ ಅದನ್ನಾ...

DEMOCRACY
ಎರಡೆರಡ್ ಇಟ್ಕೊಂಡ್ ಎಂತ ಮಾಡ್ತೀಯಾ ನೀನು?

ಮುನ್ನಾ
ದಿನ ಬಿಟ್ ದಿನ, ಒಂದಾದ್ ಮ್ಯಾಗ್ ಒಂದ್ ಹಾಕತೀನಿ. ನಿನ್ಗ್ಯಾಕ್ಲಾ? ಸುಮ್ಕೆ ಒಳಗಿಡು...

DEMOCRACY
ದಿವ್ಸ ಒಂದನ್ನೆ ಹಾಕ್ಕೊಳ್ಳಿಕ್ಕೆ ಆಗುದಿಲ್ವ?

ಮುನ್ನಾ
ಇಲ್ಲಾ ಅಗಲ್ಲ. ವಸಿ ಸುಮ್ಕಿರ್ತೀಯಾ?

Democracy ಅದನ್ನು ಒಳಗಿಟ್ಟು ಇನ್ನೊಂದು glass ತೆಗೆಯುತ್ತಾನೆ. ಅದನ್ನು ದರಿಸಿಕೊಂಡು

DEMOCRACY
ನಂಗೆ ಇದು ತುಂಬ ಇಷ್ಟ...

ಮುನ್ನ ಅವನನ್ನು ನೋಡಿ ತನ್ನ ಕೈಯಲ್ಲಿದ್ದ toolಅನ್ನು ಅಲ್ಲಿಯೆ ಬಿಟ್ಟು ಮೇಲೆ ಒಡಿಬರುತ್ತಾನೆ. ಬಂದವನು ಅವನ ಕೈಯಲ್ಲಿ ಇರುವ ಗ್ಲಾಸನ್ನು ಕಿತ್ತುಕೊಂಡು

ಮುನ್ನ
ಏಯ್ ಮುರ್ದ್ ಬಿಡ್ತೀಯ. ಒರ್ಜಿನಲ್ Rayban glass ಕಣ್ಲಾ ಅದು. ಬಲೇ ಕಾಷ್ಟ್ಲಿ ಗೊತ್ತಾ?

ಮುನ್ನ ಆ glassಅನ್ನು bag ಒಳಗಿಡುತ್ತಾನೆ. Democracy ಪೇಚುಮೋರೆ ಹಾಕಿಕೊಂಡು ಕುಳಿತುಕೊಳ್ಳುವನು. ಕೆಳಗೆ ಬಿದ್ದಿರುವ toolಅನ್ನು ಮುನ್ನ ಎತ್ತಲು ಪ್ರಯತ್ನಿಸುತ್ತಾನೆ. ಅದು ಅವನ ಕೈಗೆ ಸಿಗದಿದ್ದಾಗ Democracyಗೆ

ಮುನ್ನ
ನನ್ ಕೈಗ್ ಎಟಕ್ತಾ ಇಲ್ಲ... ವಸಿ ಎತ್ ಕೋಡ್ಲಾ

DEMOCRACY
ಹುಃ... ಬರಿ ಇದೆ ಆಯಿತ್ ನಿಂದು

Democracy ಕೆಳಗಿಳಿದು ಎತ್ತಲು ಪ್ರಯತ್ನಿಸುತ್ತಿರುವಾಗ, ಹೊರಗಿನಿಂದ 'ಪ್ರಣಯರಾಜಾ' ಎಂದು ಕೂಗು ಕೇಳಿ ಬರುತ್ತದೆ. ಆಗ ಮುನ್ನ ಕೋಪದಿಂದ

ಮುನ್ನ
ಯಾವನೋ... ಅವನ್ ಅಮ್ಮನ್...

ಎಂದು ಹೊರ ಹೋಗುವಾಗ Democracy

DEMOCRACY
ಏಯ್ ಒಬ್ನನ್ನೇ ಬಿಟ್ ಹೋಗ್ ಬೆಡ ಓ... ನಂಗೆ ಹೆದ್ರಿಕೆ
ಆಗ್ತದೆ

ಮುನ್ನ ಅವಾಚ್ಯ ಶಬ್ದಗಳನ್ನು ನುಡಿಯುತ್ತ ಹೊರಗೆ ಬಂದರೆ ಸುಧಿ omniಯ ಪಕ್ಕದಲ್ಲಿ ನಿಂತಿರುತ್ತಾನೆ.

ಸುಧಿ
ಎಂತ?

ಮುನ್ನ, ಸುಧಿಯನ್ನು ಕಂಡು ಸಪ್ಪಗಾಗುತ್ತಾನೆ. ಏನು ಹೇಳಬೇಕೆಂದು ತೋಚದೆ

ಮುನ್ನ
ನನ್ ಪಾಡಿಗ್ ನಾನ್ ಕೆಲ್ಸ ಮಾಡ್ತಾ ಇವ್ನಿ.
ಸುಮ್ನಿರಕಾಕಗಕ್ಕಿಲ್ವ?

ಸುಧಿ
(ಮನಸ್ಸಿನಲ್ಲಿ ಗೊಣಗುತ್ತ) ಎಂತ ಆಯ್ತು ಈಗ?

ಮುನ್ನ ಏನು ಹೇಳಬೇಕೆಂದು ತೋಚದೆ

ಮುನ್ನ
ಹೆಸರಿಟ್ಟ್ ಕರಿಯಕ್ಕಾಗಕ್ಕಿಲ್ವಾ? ಏನ್ ಪ್ರಣಯರಾಜ ಗಿಣಯರಾಜ
ಅಂದ್ರೆ?

ಸುಧಿ
ಊರಿಡಿ ನಿನ್ನನ್ನು ಅದೇ ಅಲ್ವ ಮಾರ್ರೆ ಕರಿಯೂದು?

ಮುನ್ನ ಸ್ವಲ್ಪ ಹೊತ್ತು ಯೋಚಿಸಿ

ಮುನ್ನ
ನಂಗದೆಲ್ಲ ಇಷ್ಟ ಆಗಕಿಲ್ಲ... ಸುಮ್ಗೆ ಹೆಸರಿಟ್ಟ್ ಕರಿ

ಸುಧಿ ಮನಸ್ಸಿನಲ್ಲಿ ಏನೋ ಗೊಣಗುತ್ತಾನೆ. ಮುನ್ನ ಸುಧಿಯನ್ನೇ ನೋಡುತ್ತಿದ್ದಾನೆ

ಸುಧಿ
ಸರಿ ಮಾರಾಯ. (Pause) Democracy ಎಲ್ಲಿ

Democracy ಹಡಗಿನ ಒಳಗಡೆಯಿಂದ ಓಡಿ ಬಂದು, ಮುನ್ನನನ್ನು ಕೋಪದಿಂದ ನೋಡಿ

DEMOCRACY
ಹೇಳಿದ್ ಅರ್ಥ ಆಗುದಿಲ್ವ ನಿಂಗೆ? ಚಿಕ್ಕ ಹುಡಗನನ್ನು ಆ ಕತ್ತಲೆಯಲ್ಲಿ ಒಬ್ನನ್ನೆ ಬಿಟ್ಟು ಬರ್ತಿಯಲ್ಲಾ ನೀನು???

ಮುನ್ನ Democracyನ ಲೆಕ್ಕಿಸದೆ ಸುಧಿಯ ಕಡೆ ನೋಡುತ್ತಾನೆ

ಸುಧಿ
ಏಯ್ Democracy. ಇಲ್ಲಿ ಬಾರ

ಮುನ್ನ
ಯಾಕೆ?

ಸುಧಿ
ಕಳ್ಸು ಮಾರ್ರೆ. ಸ್ವಲ್ಪ ಕೆಲ್ಸ ಇದೆ

ಮುನ್ನ Democracyಯನ್ನು ನೋಡಿ .

ಮುನ್ನ
ನೋಡ್ಲಾ... ಅಲ್ಲ್ ಹೋಗಿ ಅವ್ರ ತಾವಾ ಗಂಟೆ ಗಟ್ಲೆ ಮಾತಾಡ್ಕಂಡ್ ಕೂಬರ್ಬೇಡ. ಸುಮ್ನೆ ಕೆಲ್ಸಾ ಮುಗ್ಸಕಂಡು ಬಂದ್ ಬುಡು.

Democracy ಅಲ್ಲಿಂದ ಸುಧಿ ಕಡೆ ಓಡಿಹೋಗುತ್ತಾನೆ. ಮುನ್ನ ಕೆಲಸ ಮುಂದುವರಿಸಲು ಒಳಹೋಗುತ್ತಾ

ಮುನ್ನ
ಅವನ್ ಅಮ್ಮನ್ ಒಂದಿನಾ ಬೇಜಾನ್ ತಿಂತಾರ್ ನನ್ ಕೈಲಿ...

ಎಂದು ಗೋಣಗುತ್ತ ತನ್ನ ಕೆಲಸ ಮುಂದುವರಿಸುತ್ತ

ಮುನ್ನ
ಮಾಡಕ್ ಬೇರೆ ಕೆಲ್ಸ ಇಲ್ಲ... ಕಂಠ್ ಪೂರ್ತಿ ಕುಡ್ಕಂಡು ಊರ್ ಸುತ್ತೋದೆ ಆಯಿತು. ಇವ್ರ ತೆವ್ಲುಲ ತೀರ್ಸಕಳಕೆ ಆ ಹುಡ್ಗನ್ ತಾವ ಎಣ್ಣೆ ತರ್ಸ್ಕತಾರೆ.

ಮುನ್ನ engine roomನಲ್ಲಿರುವ ಒಂದು calenderಅನ್ನು ನೋಡುತ್ತಾನೆ. ಅದರಲ್ಲಿ ಹುಡುಗ ಹುಡುಗಿಯ ಚಿತ್ರವಿರುತ್ತದೆ. ಅದನ್ನು ನೋಡಿದಾಗ ಸಮುದ್ರದ ಅಲೆಗಳ ಶಬ್ದ ಹಾಗು ಮುನ್ನನ love theme ಪ್ರಾರಂಭವಾಗುತ್ತದೆ. ಅವನು ಕಣ್ಣುಮುಚ್ಚಿ ಕೋಳ್ಳುವನು.

INSERT Camera top angle. ಮುನ್ನ ನೆಲದ ಮೇಲೆ ಅಂಗಾತ ಮಲಗಿ, ತೇಲಿಕೊಂಡು ಹೋಗಿ ಒಂದು ಕಡೆ ನಿಲ್ಲುವನು. ಮುನ್ನ beachಅಲ್ಲಿ ಎದ್ದರೆ, ಅವನ ಪಕ್ಕದಲ್ಲಿ ಹಳೆಯ engine ಇರುತ್ತದೆ. ನಡೆದುಕೊಂಡು ಹೋದರೆ, ಶಾರದಾಳು beachಅಲ್ಲಿ ಸಮುದ್ರವನ್ನು ನೋಡುತ್ತ ಕುಳಿತಿರುವಳು. ಮುನ್ನ ಅವಳಿಂದ 20 ಅಡಿ ದೂರದಲ್ಲಿ ಹೋಗಿ ಕೂರುವನು

CUT TO:

EXT. DAY: MALPE HARBOR

ಮುನ್ನ ಮುಖಕ್ಕೆ ನೀರು ಹಾಕಿಕೊಂಡು, ಒಂದು ಬಟ್ಟೆಯಲ್ಲಿ ಕೈಯನ್ನು ಸ್ವಚ್ಚಗೊಳಿಸಿ, ಅಲ್ಲೆ ಪಕ್ಕದಲ್ಲಿದ್ದ tool kitಅನ್ನು pack ಮಾಡಿಕೊಂಡು ಹಡಗಿನಿಂದ platformಗೆ ಹಾರುತ್ತಾನೆ. Democracy ಅಲ್ಲಿಯೇ ರಿಚ್ಚಿಯ ಜೊತೆ ಮಾತನಾಡುತ್ತಿರುವುದನ್ನು ಕಂಡು ಅವನಿಗಾಗಿ ಕೂಗುವನು. Democracy ರಿಚ್ಚಿಯ ಬಳಿ ಏನೋ ಹೇಳಿ ಅಲ್ಲಿಂದ ಓಡಿಕೊಂಡು ಬರಬೇಕಾದರೆ ಒಂದು boatನಲ್ಲಿ ಬಚ್ಚಿಟ್ಟಿದ್ದ ಮೀನಿನ plastic ಚೀಲವನ್ನು ಎತ್ತಿಕೊಂಡು ಬರುವನು. ಇಬ್ಬರು bullet ಕಡೆ ನಡೆಯಲು ಪ್ರಾರಂಭಿಸುತ್ತಾರೆ.

ಮುನ್ನ
ಏನ್ಲಾ ಅದು?

DEMOCRACY
ಮೀನ್ಲಾ...

ಮುನ್ನ
ಅದನ್ ಯಾಕ್ಲಾ ತಂದೆ?

DEMOCRACY
ಅಕ್ವೇರಿಯಮ್ನಲ್ಲಿ ಹಾಕಿ ಸಾಕ್ಲಿಕ್ಕೆ...

ಮುನ್ನ ನಿಂತು Democracyಯನ್ನು ನೋಡುತ್ತ

ಮುನ್ನ
ಸತ್ತೋಗವೆ ಕಣ್ಲ ಅವು...

DEMOCRACY
ಓ ಹೌದ? ಹಾಗಾದ್ರೆ ಮಣ್ಣ್ ಮಾಡ್ತೇನೆ. ಹದಿಮೂನರ್ನೆ ದಿನ ಬೊಜ್ಜದ್ ಊಟಕ್ಕೆ ಬಂದ್ ಬಿಡು. ಒಳ್ಳೆ ಮಸಾಲೆ ಹಾಕಿ ಮೀನ್ fry ಮಾಡಿ ಹಾಕ್ತೆನೆ...

ಮುನ್ನನಿಗೆ Democracyಯ ಮಾತಿನಲ್ಲಿ ವ್ಯಂಗ್ಯದ ಅರಿವಾಗುತ್ತದೆ. ಅವನು ಅಲ್ಲಿಂದ ನಡೆಯಲು ಪ್ರಾರಂಭಿಸುತ್ತಾನೆ.

DEMOCRACY
ಬೇಜಾರ್ ಮಾಡ್ಕೊಳ್ಳ್ ಬೇಡ ಮಾರ್ರೆ ಹೋ...

ಮುನ್ನನ ಬಳಿ ಓಡಿ ಬರುತ್ತ

DEMOCRACY
ಬೇಕಾದ್ರೆ ನಿನ್ಗೆ ಎರಡ್ ಮೀನ್ fry extra ಕೊಡ್ತೇನೆ. ಮಂಡ್ಯಗೆ parcel ಮಾಡುವಂತೆ.

ಮುನ್ನ
ತೆಗದ್ ಎರಡ್ ಬಿಟ್ಟ ಅಂದ್ರೆ? ಆ ಮೂರ್ ಕೋತಿಗಳು ಯಾಕ್ ಕರ್ದಿದ್ದ್ ನಿನ್ನ

Democracy ಒಮ್ಮೆ ಹಿಂದಕ್ಕೆ ನೋಡಿ

DEMOCRACY
ಅವರ? ಗಾಂಧೀಜಿ ಹೇಳ್ಕೊಟ್ಟಿದ್ದು ಪಾಠ ಮತತರ್ೋಗಿದ್ಯಂತೆ. ಹೇಳ್ಕೊಟ್ಟ್ ಬಂದೆ.

ಮುನ್ನ
ಏನಂತ?

DEMOCRACY
ಅದೇ. ಕೆಟ್ಟದ್ದನ್ನು ನೋಡ್ಬೇಡಿ, ಕೆಟ್ಟದ್ದನ್ನ ಕೇಳ್ಬೇಡಿ, ಕೆಟ್ಟದ್ದನ್ನು ನುಡಿಬೇಡಿ ಅಂತ. ಕೆಟ್ಟದ್ದನ್ನ ಕುಡಿಬಹುದ sir ಅಂತ ಕೇಳಿದ್ರು. ಒಂದ್ crate ನಾನೆ ತಂದ್ ಕೊಟ್ಟೆ. ನೋಡು ನೂರ್ ರುಪಾಯ್ ಕೊಟ್ರು.

ಇಬ್ಬರು Bullet ಹತ್ತಿರ ಬರುವರು. Democracyಯ ಕೈಯಲ್ಲಿದ್ದ ನೋಟನ್ನು ನೋಡಿ ಕೋಪಗೊಂಡ ಮುನ್,ನ ತನ್ನ tool kitಅನ್ನು bulletಗೆ ಸಿಕ್ಕಿಸಿ, ಅದರ ಮೇಲೆ ಕೂರುತ್ತ

ಮುನ್ನ
ನೋಡ್ಲಾ... ಅವ್ರತಾವಾ ಜಾಸ್ತಿ ಸೇರ್ಕಬ್ಯಾಡ. ಅವ್ರೆಲ್ಲ ಒಳ್ಳೆವರಲ್ಲ. ವಸಿ distance maintain

ಮಾಡು. ಇನ್ನೋಂದ್ ಕಿತಾ ಅವ್ರ ಕೊಟ್ಟಿದ್ ಕಾಸ್ ಮುಟ್ದ್ರಾ
ಅಂದ್ರೆ, ಚಂದಾಕಿರಾಕಿಲ್ಲಾ. ತಿಳಿತಾ? ಇರು ಇವತ್ತು ನಿಮ್ಮಪ್ಪನ್
ತಾವ್ ಮಾತಾಡ್ತಿನಿ.

Democracy ಸಪ್ಪಗಾಗುತ್ತಾನೆ. ಮುನ್ನ ಅಂಗಿಯನ್ನು ಹಾಕಿಕೊಂಡು, golf cap ಹಾಕಿಕೋಳ್ಳುವನು. ನಂತರ ಕನ್ನಡಿಯನ್ನು ನೋಡಿಕೊಂಡು cooling glass ಹಾಕಿಕೋಳ್ಳುತ್ತಾನೆ. Democracy ಮುನ್ನನನ್ನು ಗುರಾಯಿಸುವನು. ಮುನ್ನ ಅವನನ್ನು ನೋಡಿ

ಮುನ್ನ
ಏನು?

DEMOCRACY
ಇನೋಂದನ್ನು ನಾನ್ ಹಾಕ್ಕೊಳ್ತೇನೆ?

ಮುನ್ನಾ
ಅದಮ್ಕಂಡ್ ಹಿಂದೆ ಕೂತ್ಕತೀಯಾ?

ಮುಖಸಪ್ಪಗೆ ಮಾಡಿಕೊಂಡು Democracy ಹಿಂದೆ ಕುಳಿತುಕೊಳ್ಳುವನು

CUT TO:

EXT. DAY. UDUPI ROAD

ಮುನ್ನ ಹಾಗು Democracy bikeನಲ್ಲಿ ಹೋಗುತ್ತಿದ್ದಾರೆ .

DEMOCRACY
ನೀನ್ ನಂಗೆ ನಾಳೆ paint ಹಾಕ್ತೀಯಾ?

ಮುನ್ನ
ಏನ್ paintಉ?

DEMOCRACY
ನಾಳೆ ಜನ್ಮಾಷ್ಟಮಿ ಕಣ್ಲಾ... ಎಂತಾದ್ರೆ ಚೆನ್ನಾಗಿರುದು
ಯೋಚ್ನೆಮಾಡು. ನಾನು ನನ್ನ್ friends ಗಿಂತ ಒಳ್ಳೆ
ಕಾಣ್ಬೇಕು

ಮುನ್ನ ಏನೂ ಉತ್ತರಿಸುವುದಿಲ್ಲ

DEMOCRACY
paint ಮಾಡ್ತಿಯಾ?

ಮೌನವಾಗಿರುವ ಮುನ್ನನನ್ನು ಕಂಡು Democracy ಬೇಸರಗೊಳ್ಳುತ್ತಾನೆ.

CUT TO:

Bike ಉಡುಪಿಯ ಮೀನ್ market ಬಳಿ ಬಂದು ನಿಲ್ಲುತ್ತದೆ.

CUT TO:

EXT. DAY: UDUPI FISH MARKET

ಇಬ್ಬರು bikeನಿಂದ ಇಳಿದು marketನ ಕಡೆ ನಡೆಯುತ್ತಾರೆ,

DEMOCRACY
ದಿವ್ಸಾ ಮಧ್ಯಾನ್ನಾ ಇಲ್ಲಿಗ್ ಎಂತಕೆ ಕಕರ್ಕೊಂಡ್ ಬರ್ತಿಯ?
ನೀನ್ ನೋಡದ್ರೆ ಮೀನ್ಸ ತೆಗೊಳ್ದಿಲ್ಲ...

ಮುನ್ನಾ
ಸುಮ್ಕೆ ಬಾಯಿಮುಚ್ಚಕಂಡ್ ನಡೀಲಾ.

ಇಬ್ಬರು market ಒಳಗೆ ನಡೆದುಕೊಂಡು ಬರುತಾರೆ. ಅಲೆಗಳ ಶಬ್ದಗಳು ಕೇಳುತ್ತದೆ. ಗಾಟಿಯ ಇಳಿದು track ಪ್ರಾರಂಭವಾಗುತ್ತದೆ. ಮುನ್ನ ಕಣ್ಣುಮುಚ್ಚಿಕೊಂಡು ನಡೆಯಲು ಪ್ರಾರಂಭಿಸುವನು. Democracy ಅದನ್ನು ನೋಡಿ ತಲೆ ಚಚ್ಚಿಕೊಂಡು ಮುನ್ನನ ಕೈಹಿಡಿದು ಕರೆದುಕೊಂಡು ಹೋಗುವನು

DEMOCRACY
ದಾರಿ.. ದಾರಿ.. ದಾರಿಬಿಡಿ.....

ಇಬ್ಬರು market ಒಳಗೆ ಬರುವರು. ಮುನ್ನ ಅವನ ಕಣ್ಣ್ ತೆರೆದು ನೋಡುತ್ತಾನೆ. ಅಲ್ಲಿ ಅವನ ಸ್ವಪ್ನ ಸುಂದರಿ, ಶಾರದ, ಮೀನು ಮಾರುತ್ತಿರುವಳು. ಅದನ್ನು ಕಂಡ ಮುನ್ನ romantic smile ಮಾಡುವನು. ಮುನ್ನ ಅವಳನ್ನು ನೋಡುತ್ತ ಅವಳ ಕಡೆ ನಡೆದುಕೊಂಡು ಹೋಗುವನು. ಇವನನ್ನು ನೋಡಿದ ಬೇರೆ ಹೆಂಗಸರು ತಮ್ಮ ತಲೆ ಚಚ್ಚಿ ಕೊಳ್ಳುತ್ತ ಅವರವರೆ ಮಾತನಾಡಿಕೊಳ್ಳುವರು. ಹಾಗೆಯೇ ಮುನ್ನ ಅವಳನ್ನ ನೋಡುತ್ತ ಅವಳ ಬದಿಯಲ್ಲಿರುವ ಇನ್ನೊಂದು ಹೆಂಗಸಿನ ಬಳಿ ಕುಳಿತುಕೊಳ್ಳುತ್ತಾನೆ. ಅವಳೊಡನೆ ಮಾತನಾಡಿದೆಂತೆ ನಟಿಸಿ ಶಾರದಾಳನ್ನು ನೋಡುತ್ತಾನೆ. ಆ ಹೆಂಗಸು ಮುನ್ನನ ಕೆನ್ನೆಯನ್ನು ಹಿಡಿದು ತನ್ನ ಕಡೆ ತಿರುಗಿಸುವಳು. ಆಗ ಮೀನು ಮಾರಾಟದಲ್ಲಿ ಮಗ್ನಳಾಗಿದ್ದ ಶಾರದ ಮುನ್ನನನ್ನು ನೋಡಿ ನಾಚಿಕೊಳ್ಳುವಳು. ಇದನ್ನು ನೋಡಿ ಮುನ್ನ ಅಲ್ಲಿಯೇ ಜಾರಿ ಬೀಳುತ್ತಾನೆ. ಆಗ Democracy ಅವನನ್ನು ಹಿಡಿದು ನಂತರ ತನ್ನ ತಲೆ ಚಚ್ಚಿ ಕೊಳ್ಳುವನು.

Marketನ ಒಳಗೆ ಅಥವ ಹೊರಗೆ ಜನ್ಮಾಷ್ಟಮಿಯ ಸಲುವಾಗಿ ವೇಷ ಹಾಕಿರುವವರು ಕುಣಿಯುತ್ತಿದ್ದಾರೆ.

CUT TO:

Cooling glass ಹಾಕಿಕೊಂಡಿರುವ ಮುನ್ನ ತನ್ನ bullet start ಮಾಡಿಕೊಳ್ಳುತ್ತಾನೆ. Democracy ಮುಂದೆ ಕುಳಿತು smile ಮಾಡುತ್ತ cooling glass ಹಾಕಿಕೊಳ್ಳುತ್ತಾನೆ. ಶಾರದ ಮನೆ ಮನೆಗೆ ಮೀನು ಮಾರುತ್ತಾ ಹೋಗುತ್ತಿದ್ದಾಳೆ. ಅವಳಿಂದ ೪೦ ಅಡಿ ದೂರದಲ್ಲಿ ಮುನ್ನ ನಿಧಾನವಾಗಿ ತನ್ನ bikeನಲ್ಲಿ ಹಿಂಬಾಲಿಸುತಿದ್ದಾನೆ. ಒಂದು ಕಡೆ roadನಲ್ಲಿ ಜನ್ಮಾಷ್ಟಮಿಗೆ ರಾಕ್ಷಸನ ವೇಷದಲ್ಲಿರುವ ಇಬ್ಬರು ಗಂಡಸರು ಶಾರದಾಳನ್ನು ನೋಡುತ್ತ ಮೀನು ಕರೀದಿಸುತ್ತಿದ್ದರೆ, ಮುನ್ನ ದೂರದಿಂದಲೇ ಅವನನ್ನು ಗುರಾಯಿಸುತಿದ್ದಾನೆ. ಅವರಲ್ಲಿ ಒಬ್ಬ ಶಾರದಾಳ ಕೈಮುಟ್ಟಲು ಪ್ರಯತ್ನಿಸುತ್ತಿರುವುದನ್ನು ಕಂಡು ಮುನ್ನ ಜೋರಾಗಿ ತನ್ನ bulletನ accelerator rise ಮಾಡುವನು. ವ್ಯಕ್ತಿ ಮುನ್ನನನ್ನು ನೋಡಿ, ಅವಳಿಗೆ ಹೋಗು ಎಂದು ಕೈ ಸನ್ನೆ ಮಾಡಿ, ಅವಳು ಅಲ್ಲಿಂದ ಹೊರಟಕೂಡಲೆ ಮುನ್ನ ಆ ವ್ಯಕ್ತಿಯ ಎದುರುಗಡೆ ನಿಧಾನವಾಗಿ ಸಾಗುತ್ತ ಅವರಿಬ್ಬರನ್ನು ಗುರಾಯಿಸುವನು. ಇದನ್ನು ಕಂಡು ಅವರಿಬ್ಬರು, ಒಬ್ಬರನ್ನೊಬ್ಬರು ಕಂಡು ತಮ್ಮ ತಲೆ ಚಚ್ಚಿಕೊಂಡು ಮುಂದೆ ಹೋಗುವರು.

CUT TO:

ಶಾರದ ಒಂದು ಬಸ್ಸಿನ ಕೊನೆಯ ಸೀಟಿನ ಕಿಟಕಿಯ ಬಳಿ ಕುಳಿತಿದ್ದಾಳೆ. ಮುನ್ನ ಬಸ್ಸಿನ ಪಕ್ಕದಲ್ಲಿ ತನ್ನ bulletನಲ್ಲಿ ಅವಳನ್ನು ನೋಡುತ್ತ, smile ಮಾಡುತ್ತ ಬರುತಿದ್ದಾನೆ. Conductor ಅವಳಿಗೆ ಟಿಕೇಟ್ ಕೊಡುವಾಗ ಬಗ್ಗಿ ಮುನ್ನನನ್ನು ನೋಡಿ ತನ್ನ ತಲೆ ಚಚ್ಚಿಕೊಂಡು ಹೋಗುವನು.

CUT TO:

ಶಾರದ ಹಾಗು ಮುನ್ನ ಇಬ್ಬರು beechನಲ್ಲಿ 20 ಅಡಿ ಅಂತರದಲ್ಲಿ ಕುಳಿತಿದ್ದಾರೆ. Democracy backgroundನಲ್ಲಿ bullet ಮೇಲೆ ಕುಳಿತಿದ್ದಾನೆ. ಒಬ್ಬ ice candyಯವನು ಬರುವುದನ್ನು ನೋಡಿ Democracy ಓಡಿ ಬಂದು ಮುನ್ನನ ಬಳಿ ಕಾಸು ಕೇಳುವನು. ಮುನ್ನ ಇದರ ಪರಿವೆ ಇಲ್ಲದೆ ಶಾರದಾಳನ್ನು ನೋಡುತ್ತಿರುವುದನ್ನು ಗಮನಿಸಿ Democracy ಮುನ್ನನ ಕಿಸೆಗೆ ಕೈಹಾಕಿ ಕಾಸು ತೆಗೆದು ice candyಯವನ ಬಳಿ ಓಡುವನು. ಅವನ ಬಳಿ ಮೂರು candyಯನ್ನು ತೆಗೆದುಕೊಂಡು, ಒಂದು candyಯನ್ನು ಶಾರದಾಳಿಗೆ ಕೊಟ್ಟು, ಇನ್ನೊಂದನ್ನು ಬೇಗ ಬೇಗನೆ ಚೀಪುತ್ತ ಮುನ್ನನ ಬಳಿಬಂದು, ಇನ್ನಷ್ಟು ಚೀಪಿ, ಅದೇ candyಯನ್ನು ಮುನ್ನನಿಗೆ ಕೊಡುವನು. ಮುನ್ನ ಶಾರದಾಳನ್ನು ನೋಡುತ್ತಾ, smile ಮಾಡುತ್ತಾ, ಅವನು ಕೊಟ್ಟ candyಯನ್ನು ತೆಗೆದು ಕೋಳ್ಳುವನು. Democracy ಹೊಸ candyಯನ್ನು ಚಿಪುತ್ತಾ bulletಬಳಿ ಹೋಗುವನು. ಶಾರದ ಮುನ್ನನನ್ನು ನೋಡಿ ತಲೆ ಚಚ್ಚಿ ಕೊಳ್ಳುತ್ತಾಳೆ .

CUT TO:

EXT. DAY: SHARADHA'S HOUSE

ಮುನ್ನ ಶಾರದಾಳನ್ನು ಹಿಂಬಾಲಿಸಿಕೊಂಡು ಅವಳ ಮನೆಯವರೆಗು ಬರುವನು. ಶಾರದ ಮನೆಯ ಒಳಗೆ ಹೋಗುತ್ತಿರುವಾಗ, ಬಾಲು ಓಡಿಕೊಂಡು ಮುನ್ನನ ಬಳಿ ಬಂದು, Democracyಯ ತಲೆಯಮೇಲೆ ಹೊಡೆದು

ಬಾಲು
ಇಳಿ, ಕೆಳಗಿಳಿ ಕೆಳಗಿಳಿ. ತಡಾ ಆಯಿತಾ...

Democracy ಕೆಳಗಿಳಿಯುತ್ತಾನೆ. ಬಾಲು ಗಡಿಬಿಡಿಯಲ್ಲಿ bullet ಹತ್ತಿ ಕೂರುವನು

ಮುನ್ನ
ಎಲ್ಲ್ ಒಯ್ತಾ ಇದೀವಿ?

ಬಾಲು
ಆ ಶಾಲಿ ಒರಿಗ್ ಬಿಡಾ.

ಮುನ್ನ ಹಾಗು ಬಾಲು bulletನಲ್ಲಿ ಹೊರಡುವರು

CUT TO:

EXT. DAY: MALPE SCHOOL

ಮುನ್ನ ಬಾಲುವನ್ನು ಶಾಲೆಯಬಳಿ ಬಿಡಲು ಹೋಗುವಾಗ ಶಾಲೆಯ ಎದುರುಗಡೆ ಬಾಬಣ್ಣ ಯಾರಿಗಾಗಿಯೋ ಕಾಯುತ್ತಿರುತ್ತಾರೆ

ಬಾಬಣ್ಣ
ಹಾಃ... ಬಂದ್ಯಾ... ಒಳ್ಗ್ ಹೋಗ್... ಎಲ್ಲಾ ಬಂದಾಯ್ತ್.
ಈ ಕರುಣಾಕರ ಇನ್ನೂ ಬರ್ಲ ಮಾರಾಯ. ಎಲ್ಲ್ ಅಂದೇಳಿ
ಹುಡ್ಕುದ್. ಇಪ್ಪತ್ನಾಲ್ಕು ಹುಲಿ ಇತ್ತ್, ಇಬ್ರೆ painter
ಇಟ್ಕಂಡ್ ಈ ರಾತ್ರಿ ಕೆಲ್ಸಾ ಆತ್ತ?

ಬಾಲು
ಯಾಕ್ ಮಂಡಿ ಬಿಸಿ ಮಾಡ್ಕಂತ್ಯಾ. ಸ್ವಲ್ಪ ಹೊತ್ತಗ್ ಬಪ್ಪ.

ಬಾಬಣ್ಣ
ಹೇಳುಕಾತ್ತಾ ಮರಾಯ? ಇದಕಿಂತ ಮೊದ್ಲ್ ಅಂವ ಸುಮಾರ್
ಸಲ ಕೈ ಕೊಡಲ್ಯಾ? ಸೀಜನ್ ಅಲ್ದನಾ. Painter ಇಲ್ಲಿಯಾ.
ಇಲ್ದಿರ್ ಅವ್ನ್ ಕರೀತೆ ಇರ್ಲ್ಲಾ ನಾ.

ಬಾಲು
ಹಂಗರ್ ಎಂತಾ ಮಾಡುದಾ

ಬಾಬಣ್ಣ ಮುನ್ನನನ್ನು ನೋಡಿ

ಬಾಬಣ್ಣ
ಹ್ವಾ.. ನೀ boatಎಲ್ಲಾ paint ಮಾಡ್ತೆ ಅಲ್ದಾ?

ಮುನ್ನ
ಏಯ್. ನಂಗ್ ಹುಲಿಗೆ paint ಮಾಡಕ್ ಬರಕಿಲ್ಲ.

ಬಾಬಣ್ಣ
ಅದ್ರಗ್ ಎಂತ ಇತ್ತಾ... Paintಅಗೆ ಅಕ್ಷರ ಬರುಕ್
ಬಪ್ಪನಿಗೆ, ಇದ್ ಭಯಂಕರ ಸುಲಬ್ವಾ. ಒಂದ್ ಗಳ್ಗಿಯಗ್
ಕಲಿತೆ.

ಮುನ್ನಾ
ಆದ್ರೆ...

ಬಾಬಣ್ಣ
ದಮ್ಮಯ... ಇಲ್ಲಾಂದೆಳಿ ಹೇಳ್ಬೇಡ. ನಿನ್ನ್ ಕಾಲಿಗ್ ಬೇಕಾರು
ಬೀಳ್ತೆ ಮಾರಾಯ. ಒಂದ್ ಮರೇದಿ ಉಳ್ಸ್.

ಬಾಲು
ಒಂದ್ ಕೈ ಕಾಣಾ... ದುಡ್ಡ್ ಬೇರೆ ಕೊಡ್ತ್ರ್.

ಬಾಬಣ್ಣ
ಹೌದ್ ಹೌದ್... ಜಾಸ್ತಿ ಎಂತ ಇಲ್ಲಾ, ಸುಮಾರಿಕ್ ಕೊಡತ್.
ದೇವರ್ ಕೆಲ್ಸಾ ಅಲ್ದಾ...

ಮುನ್ನ bulletನಿಂದ ಕೆಳಗಿಳಿಯುತ್ತಾನೆ. ಬಾಬಣ್ಣನಿಗೆ ಖುಷಿಯಾಗುತ್ತದೆ. ಮುನ್ನ bikeನ center stand ಹಾಕುವನು

CUT TO:

INT. NIGHT: MALPE SCHOOL

ಒಂದು ಹಳೆಯ ಶಾಲೆಯ ಕೋಣೆಯಲ್ಲಿ ಹುಲಿ ವೇಷಧಾರಿಗಳಿಗೆ ಬಣ್ಣ ಬಳಿಯಲಾಗುತ್ತಿದೆ. ಕೆಲವೊಂದು ಹುಲಿವೇಷಧಾರಿಗಳು ಅರ್ಧ ಮೈಗೆ ಬಣ್ಣ ಬಳಿಸಿಕೊಂಡು, ಬಣ್ಣ ಒಣಗಲು ಕಾಯುತ್ತ ಅಲ್ಲಿ ಇಲ್ಲಿ ಓಡಾಡುತ್ತಿದ್ದಾರೆ. ಮುನ್ನನು ಒಬ್ಬನಿಗೆ ಬಣ್ಣ ಬಳಿಯುತ್ತಿದ್ದಾನೆ. ಇನ್ನೊಬ್ಬ painter ನಾರಾಯಣ ಬಾಲುಗೆ ಬಣ್ಣ ಬಳಿಯುತ್ತಿದ್ದಾನೆ. Tiger1 ಆಕಾಶಮುಖವಾಗಿ ಒಂದು ದಮ್ cigarette ಎಳೆದು, ಹೊಗೆಯನ್ನು ಆಕಾಶ ಮುಖವಾಗಿ ಬಿಡುತ್ತಾ

TIGER1
ಎಲ್ಲಿ ಜಾರಿತೋ ಮನವು?

ಎಂದು ಹೊಗೆಯಲ್ಲಿ ಮಗ್ನನಾಗುತ್ತಾನೆ.

ಬಾಬಣ್ಣ
ಕಚ್ಚೆ ಜಾರುಕಿತ್ತಾ ಹೋ... ಜಾಗ್ರತಿ

TIGER1
ಎಂತದ ನಿಂದು. ಸಮ ಮಾಡಿ ಬಣ್ಣ ಬಳಿಯ...

ಬಾಬಣ್ಣ
ಹಾಂಗಲ್ಲ ಹೇಳದ್... ಯಾರ್ಯರ್ ಕಚ್ಚೆ ಹ್ಯಾಂಗ್ಯಾಗ್ ಹರ್ದ್
ಉದ್ರಿ ಬೀಳತ್ತ್ ಅಂದೇಳಿ ಹೇಳುಕ್ಕ್ ಆತಿಲ್ಲ ಮಾರ್ರೆ...

ಎಂದು Tiger1ನ ಕಡೆಗೆ ನೋಡುತ್ತಾ ವ್ಯಂಗ್ಯ ನಗೆಯನ್ನು ಬೀರುತ್ತಾನೆ.

TIGER2 (ಜೋರಾಗಿ ನಗುತ್ತ)
ಕಚ್ಚೆ ಕೇಸ್ ಸುದ್ದಿಯ?

Tiger1, ಮುಂದೆ ನಡೆಯುವ ಮಾತಿನ ಅರಿವಾಗಿ ಅಲ್ಲಿಂದ ಜಾಗ ಕಾಲಿ ಮಾಡುತ್ತಾನೆ. ಬಾಬಣ್ಣ Tiger1 ಕೋಣೆಯಿಂದ ಜಾರುವುದನ್ನು ವ್ಯಂಗ್ಯವಾಗಿ ಸನ್ನೆಮಾಡಿ ತೋರಿಸುತ್ತಾ

ಬಾಬಣ್ಣ
ಗುಂಬಳ ಕಾಯ್ ಕದ್ದದ್ ಯಾರ್ ಅಂದ್ರೆ, ಹೆಗ್ಲ್ ಮುಟ್ಕಂಡ
ಅಂಬ್ರ್. ಓಡತ್ ಕಾಣ್ ಅಂವ. ಕದ್ರ್ ಮೇಲೆ ಏಗಳಿಕೂ ಸಿಕ್ಕ
ಬಿಳುಕ್ಕಾಗ್ದ...

ನಾರಾಯಣ

ಎಂತ ಕಚ್ಚೆ ಕೇಸ್?

ಬಾಬಣ್ಣ ನಗುವನು. Paint ಮಾಡುವುದನ್ನು ನಿಲ್ಲಿಸಿ

ಬಾಬಣ್ಣ
ನಾಯಿನ್ ತೆಕಂಡ್ ಹೋಯಿ ದಂಡಿಗೆ ಮೇಲ್ ಕೂರ್ಸ್ರೇ, ಹೇಲ್ ಕಂಡಲೆ ಕೆಳಗ್ ಹಾರತಂಬ್ರ್. ಊರ್ ತುಂಬಾ ಹುಲಿ ವೇಷ ಹಾಯ್ಕಂಡ್ ತಿರ್ಗ್ತಿದ್ದನಿಗೆ ಯಕ್ಷಗಾನ್ದಗೆ ವೇಷ ಹಾಕ್ ಅಂದೇಳಿ ಕರ್ಸ್ರೆ, ಇಂವ ಅಲ್ಲಿ ಹೋಯ್ ಮಾಡದ್ ಎಂತ ಗೊತ್ತಿತಾ?

ನಾರಾಯಣ (ಬಾಲುಗೆ)
ಏ ಬಾಲು. ಸಮ ನಿಂತ್ಕೊಳ...

ಬಾಬಣ್ಣ
ದೊಡ್ಡ್ ಮನಿಯಗ್ ಆಟ. ಆ ಮನಿ ಹೆಂಗ್ಸ್ ಇವ್ನಿಗ್ ಮೊದ್ಲಿಂದ್ಲೂ ಬಹಳ ಹತ್ರ. ಕರ್ಣನ್ ಕಿರೀಟ ಗೊತ್ತಿತಲೆ. ಇಂತ ದೊಡ್ಡ್ ಕಿರೀಟ. ಇಂವ ಕಿರೀಟ ಹೊತ್ಕಂಡ್ ಅದೇ ಮನೆ ಬೇಲಿ ಹಾರಿ, ಉಪ್ಪರಿಗೆ ಹತ್ತಿ ದಾನ ಮಡದ್ದೇ ಬೇರೆ. ಇಂವ ಮಂಚ ಹತ್ತದ್ದೇ ತಡ, ಇವ್ ನ ಪ್ರವೇಶಕ್ಕೆ ಭಾಗವತರ್ ಪದ ತೆಕಂಡ್ರ್. ಕೆಲ್ಸ ಅರ್ಧಗೆ ಬಿಟ್ಟ್, ಗುಪ್ಪ್ ಕಟ್ಟಿ ಕೆಳಗ್ ಹಾರ್ದನ್ direct ರಂಗಸ್ಥಳಕ್ಕೆ entry. ಕೊಣುಕ್ start... ಅವ್ನ ತೊಡಿ ಹ್ಯಾಂಗ್ ಬಗ್ದ್ ಹೋಯ್ತ್ ಕಣಿ.

ಅಷ್ಟರಲ್ಲಿ Tiger1 ಕೋಣೆಗೆ ಮರಳಿ ಬಂದು

TIGER1
ಅವರವರ ಭಾವಕ್ಕೆ ತಕ್ಕಂತೆ ಪಾತ್ರಗಳು ಬೇರೆ...

ಬಾಬಣ್ಣ
ಹೌದ್ ಹೌದ್. ನಿನ್ನ ಪಾತ್ರದ್ ಕಿತಾಪತಿಯಗ್ ಮೇಳದರ್ ಪೆಟ್ಟ್ ತಿಂತಿದ್ದೀರ್...

ದಿನೇಶನು ಒಳ ಬರುವನು...

ಬಾಬಣ್ಣ
ಹೊ ದಿನೇಶ... ಒಳ ಬಾ ಮಾರ್ರೆ. ಏನ್ ಇಲ್? ಹುಲಿ ಹಾಕ್ತಿಯ ಹೇಂಗೆ?

ದಿನೇಶ
ಹುಲಿಯ? ನೀವ್ ಚೆನ್ನಾಗ್ ಹೇಳ್ ಬಿಟ್ರಿ. ಬೇರೆ ಏನ್ ಕೆಲ್ಸ ಇಲ್ವ ನಂಗೆ?

ಬಾಬಣ್ಣ
ಹಂಗಾರೆ ನಂಮ್ಗೆಲ್ಲ ಬೇರೆ ಎಂತ ಕೆಲ್ಸ ಇಲ್ಲ ಅಂದೇಳಿಯನ?

ಬಾಲುಗೆ paint ಮಾಡ್ತಿರುವ ನಾರಾಯಣ

ನಾರಾಯಣ
ಇದು ವರ್ಷಗೆ ಒಂದೇ ಸತಿಯಲ್ಲ ಮಾರ್ರೆ... (ಬಾಲುವನ್ನು ಕುರಿತು) ಏ ಬಾಲು. ಸಮೆ ನಿಂನ್ತ್ಕೊಳ. ಎಷ್ಟು ಅಲ್ಲಾಡ್ತಿ ಮಾರ್ರೆ?

ದಿನೇಶ
ಯಾರತ್ತಾದ್ರು cigarette ಇದ್ಯಾ?

TIGER3

ಬೀಡಿ ಆಗ್ತದ?

ದಿನೇಶ
ಬೀಡಿಯ? ಬೀಡಿ ಬೇಡಪ್ಪ...

ನಾರಾಯಣ
ಹೊರ್ಗಡೆ ಇಸ್ಪಿಟ್ ಆಡ್ತಿದ್ದಾರಲ್ಲ... ಜಗ್ಗು ಹತ್ರ role ಮಾಡಿದ ಬಂಗಿ ಇರ್ ಬೇಕು ನೋಡು...

ದಿನೇಶ (ನಗುತ್ತ)
ಹೌದ? ಹಾಗಾದ್ರೆ ಮದ್ಯರಾತ್ರಿಯಲ್ಲಿ lottery ಹೊಡಿತು...

ಎಂದು ದಿನೇಶ ಕೋಣೆಯಿಂದ ಹೊರಗೆ ಹೋಗುವನು. ಅವನು ಹೋಗುವುದನ್ನು ನೋಡುತ್ತ ನಾರಾಯಣ

ನಾರಾಯಣ (ನಗುತ್ತ)
ಓಯ್ ಬಾಬಣ್ಣ... ನೀವ್ ಹೇಳಿದ್ದ್ ಸತ್ಯ ಮಾರ್ರೆ. ನಾಯಿಯನ್ ದಂಡಿಗೆ ಮೇಲೆ ಕೂರ್ಸಿದ್ರೆ, ಹೇಲ್ ನೋಡಿದ್ ಕೂಡ್ಲೆ ಕೆಳಗೆ ಹಾರ್ತದೆ..

ಬಾಬಣ್ಣ ನಗುವರು. ಅಲ್ಲಿರುವ Tiger4ಅನ್ನು ಕುರಿತು

ಬಾಬಣ್ಣ
ಶಂಕರಣ್ಣನ್ ಮನೇಲ್ ಇವತ್ತ್ ಆಟ ಇತ್ತನ?

TIGER4
ಹರಕೆ ಆಟ ಅಂತೆ...

ಬಾಬಣ್ಣ
ಯಾವ್ ಮೇಳ?

TIGER4
ಪೆರಡೂರ್ ಮೇಳ...

ಬಾಬಣ್ಣ ಮುನ್ನನನ್ನು ನೋಡಿ

ಬಾಬಣ್ಣ
ಹೋ ಮುನ್ನ. ನೀನ್ ಹೋಯಿ rest ತೆಕೊ. ಉಳ್ದವರ್ನಲ್ಲ ನಾನು ನಾರಾಯಣ ಕಾಂತೊ...

ಮುನ್ನ ಸರಿ ಅನ್ನೊ ರೀತಿಯಲ್ಲಿ ತಲೆ ಅಲ್ಲಾಡಿಸಿ ಕೋಣೆಯಿಂದ ಹೊರ ಬರುತ್ತಾನೆ. ಹೊರಗೆ ಕೆಲವರು ಇಸ್ಪಿಟ್ಟ್ ಆಡುತ್ತಿದ್ದಾರೆ. ಅವರನ್ನು ದಾಟಿ ಮುಂದೆ ಒಂದು ಜಾಗದಲ್ಲಿ ಒಣ ತೆಂಗಿನ ಗರಿಯಲ್ಲಿ ಮಾಡಿದ ಚಾಪೆ ಇರುತ್ತದೆ. ಮುನ್ನ ಅದರಲ್ಲಿ ಬಂದು ಮಲಗುವನು.

CUT TO:

EXT. DAY: MALPE SCHOOL

ಮುನ್ನ ಶಾಲೆಯ ಆವರಣದಲ್ಲಿ ಮಲಗಿರುತ್ತಾನೆ. ಒಬ್ಬ ಹುಡುಗ ಅವನನ್ನು ಎಬ್ಬಿಸುವನು. ಕಣ್ಣು ತೆರೆದ ಮುನ್ನ, ಬಣ್ಣ ಹಾಕಿಕೊಂಡಿರುವ ಹುಡುಗನನ್ನು ನೋಡಿ ಒಂದು ಕ್ಷಣ ಭಯಪಟ್ಟು, ಅದು Democracy ಎಂದು ತಿಳಿದ ಮೇಲೆ ಸುಮ್ಮನಾಗುತ್ತಾನೆ

DEMOCRACY
ಶಂಕರಣ್ಣನ ಮನೆಗೆ ಹೋಗ್ಬೇಕಂತೆ...

ಮುನ್ನ
ಏನಕ್ಕಂತ್ಲಾ?

DEMOCRACY
ಗೊತ್ತಿಲ್ಲಪ್ಪೋ...

ಮುನ್ನ ಎದ್ದೇಳುತ್ತ

ಮುನ್ನ
ಎನ್ಲಾ ಇದು ನಿನ್ ವೇಷಾ?

DEMOCRACY
ನಾನ್ doctor ಇವತ್ತು... Medicine ನೋಡು...
ಬೇಕಾ?

ಎಂದು ತನ್ನ color ತುಂಬಿರುವ bottle ತೋರಿಸುವನು. ಮುನ್ನ ಅದನ್ನು ನೋಡುತ್ತ ಎದ್ದೇಳಿದರೆ, ಹಿಂದೆ ನಿಂತಿದ್ದ Democracyಯ ಮೂವರು ಗೆಳೆಯರು ಹತ್ತಿರ ಬರುವರು. Democracy ತನ್ನ ಗೆಳೆಯರನ್ನು ತೋರಿಸುತ್ತ

DEMOCRACY
ನೋಡು... ಇವನು paper ಮಾರುವವನು

ಹುಡುಗ ೧
Paper paper paper

Democracy ತನ್ನ ಎರಡನೆ ಸ್ನೇಹಿತನನ್ನು ತೋರಿಸುತ್ತ

DEMOCRACY
ಇವನು ಪೀಪಿ ಊದ್ತಾನೆ...

ಆಗ ಅವನು ತನ್ನ ಕೊಳಲನ್ನು ಊದಿ ನಂತರ ಮುನ್ನನ ಮುಂದೆ ಕೈ ಚಾಚುವನು. ಮುನ್ನ ಅದನ್ನು ನೋಡುವನು

DEMOCRACY
ಕೃಷ್ಣ ಇವತ್ತು ಬೇರೆ ಬೇರೆ ವೇಷದಲ್ಲಿ ಬರ್ತನಂತೆ. ಇವನೇ
ಆಗಿರ್ಬಹುದು. ವಾಪಸ್ ತೆಗೊಳುವ ಮುಂಚೆ ಕೈ ತುಂಬ್ಸು...

ಮುನ್ನ ಅವನಿಗೆ ಹಣ ಕೊಡುವಾಗ ಮೋದಲನೆಯವನು ಸಹ ಕೈ ನೀಡುತ್ತಾನೆ. ಮುನ್ನ ಅವನಿಗೂ ಹಣ ಕೊಡುತ್ತಾನೆ. ಮೂರನೆಯವನಿಗು ಹಣ ಕೊಡಲು ಹೋದಾಗ

DEMOCRACY
ಇವನು...(ಯೋಚಿಸಿ). ಎಯ್ ನೀನ್ ಎಂತದಾ?

ಮೂರನೆಯವನು ಕೈಯಲ್ಲಿ ಸೊಪ್ಪು ಹಿಡಿದುಕೊಂಡಿದ್ದಾನೆ

ಹುಡುಗ ೩
Doctorಉ

DEMOCRACY
ಏಯ್... ನೀನ್ ಹೇಗ doctor ಆಗ್ತೀಯಾ? ನಾನ್
doctoru. ನನ್ ಕೈಯಲ್ಲಿ medicine ನೋಡು...

ಮೂರನೆಯವನು ಸ್ವಲ್ಪ ಗಲಿಬಿಲಿಯಾಗಿ, ನಂತರ ತನ್ನ ಕೈಯಲ್ಲಿರುವ ಸೊಪ್ಪನ್ನು ನೋಡಿ

ಹುಡುಗ ೩
ನಾನು Ayurveda doctorಉ

DEMOCRACY
ಹೂಃ... ಇವನು Ayurveda doctorಉ

ಹುಡುಗ೩ (ಕಿರುಚುತ್ತಾ)
ಎಂದೂ ಬತ್ತದ ಉತ್ಸಾಹ, ನಿಮ್ಮಲ್ಲಿ
ನವಚೈತನ್ಯಮೂಡಿಸುತ್ತದೆ...

ಮುನ್ನ ಒಳಗೋಳಗೆ ನಗುತ್ತ Democracyಗೆ ಹಣ ಕೊಡುವನು. ನಂತರ ಅಲ್ಲಿಂದ ತನ್ನ bullet ಹತ್ತಿರ ಹೋಗುವನು. Camera ಮುನ್ನನ ಮುಖವನ್ನು ಸೆರೆಹಿಡಿಯುತ್ತ ಹಿಂದೆ ಸರಿದರೆ backgroundನಲ್ಲಿ Democracy ಕೂಗುತ್ತ

DEMOCRACY
ಮಧ್ಯಾನ ಮೇರವಣಿಗೆ ನೋಡ್ಲಿಕ್ಕೆ ರಥಬೀದಿಗೆ ಬರ್ತಿಯಾ?

ಮುನ್ನಾ
ಗೊತ್ತಿಲ್ಲ...

DEMOCRACY
ನೀನ್ ಎಲ್ಲಿ ಬರ್ತಿಯಾ... ನಿಂದು ಬರೀ feelingsಎ
ಆಯಿತು... ಬಾರೋ... ಚೆನ್ನಾಗಿರ್ತದೆ.

ಮುನ್ನ ಏನು ಪ್ರತಿ ಉತ್ತರಿಸದೆ ಅಲ್ಲಿಂದ ಹೊರಡುವನು

CUT TO:

EXT. DAY: SHANKER POOJARY'S HOUSE

ಮುನ್ನ ತನ್ನ bulletನಲ್ಲಿ ಶಂಕರ್ ಪೂಜಾರಿಯ ಮನೆಯ ಬಳಿ ಬಂದು ನಿಲ್ಲಿಸಿ, ಇಳಿಯುತ್ತಿದ್ದಂತೆ ಶಂಕರ್ ಪೂಜಾರಿಯ ಮನೆಯ ಕಡೆ ನೋಡುತ್ತಾನೆ. ಶಂಕರ್ ಪೂಜಾರಿ ರಿಚ್ಚಿಯನ್ನು ಅವರ ಮುಂದೆ ಕೂರಿಸಿಕೊಳ್ಳುತ್ತಿದ್ದಾರೆ (Different angle from Chapter 2). ಶಂಕರ್ ಪೂಜಾರಿಯವರ ಕಡೆಯವನು ಬಂದು

ವ್ಯಕ್ತಿ
ಕಾಯ್ಬೇಕಂತೆ... ಬರ್ತರೆ...

ಅವನ ಮಾತಿಗೆ ತಲೆ ಅಲ್ಲಾಡಿಸಿ, ಅಲ್ಲಿಯೇ ಕೋಳಿಗಳಿಗೆ ತಾಲೀಮು ನಡೆಯುತಿರುವುದನ್ನು ಕಂಡು ಅದರಬಳಿ ಹೋಗಿ ಕುಳಿತುಕೊಳ್ಳುವನು. ಸ್ವಲ್ಪ ಹೊತ್ತಿನ ನಂತರ ಕಣ್ಣುಮುಚ್ಚಿದರೆ, ಅವನಿಗೆ ಮತ್ತೆ ಅಲೆಗಳ ಶಬ್ದ ಕೇಳುತ್ತದೆ. Backgroundನಲ್ಲಿ ಮುನ್ನನ love theme ಶುರುವಾಗುತ್ತದೆ .

**INSERT** ಮಲ್ಪೆ beechನಲ್ಲಿ ಕೋಳಿಜಗಳ ನಡೆಯುತ್ತಿರುತ್ತದೆ. ಮುನ್ನ ಅದನ್ನು ನೋಡುತ್ತಿದ್ದವನು, ಅಲ್ಲಿಂದ ಎದ್ದು ಶಾರದಾಳ ಬಳಿ ನಡೆದು ಇಪ್ಪತ್ತು ಅಡಿ ಅಂತರದಲ್ಲಿ ಕುಳಿತುಕೊಂಡು, ಅವಳನ್ನೇ ನೋಡುವನು. ಸ್ವಲ್ಪ ಸಮಯದ ನಂತರ ಅವನ ಬುಜದ ಮೇಲೆ ಒಂದು ಕೈ ಬಂದು ಎಬ್ಬಿಸುತ್ತದೆ.

CUT TO:

ದಿನೇಶನ ಕೈ ಮುನ್ನನ ಹೆಗಲ ಮೇಲಿರುತ್ತದೆ. ಶಂಕರ್ ಪೂಜಾರಿ ರಿಚ್ಚಿಯ ಜೊತೆ ಗದ್ದೆಯಕಡೆ ಹೋಗುತ್ತಿದ್ದಾರೆ.

ದಿನೇಶ ಮುನ್ನನನ್ನು ನೋಡುತ್ತ

ದಿನೇಶ
ಬಾಲು ಗೊತ್ತಲ್ವ ನಿಂಗೆ

ಮುನ್ನ
ಯ್ಯಾಕೆ?

ದಿನೇಶ
ಸುಮಾರ್ ದಿನದಿಂದ ಕೆಲ್ಸಗ್ ಬರ್ತಿಲ್ವಂತೆ. ನೀನೇನಾದ್ರು
ನೋಡಿದ್ಯಾ?

ಮುನ್ನ
ಅಯ್ಯೋ. ಹುಲಿವೇಷ ಹಾಕವ್ನೆ. ನಿನ್ನೆ ರಾತ್ರಿ ನೀನ್ ಇಸ್ಕೂಲ್ ತವ ಬಂದಿಯಲ್ಲಾ, ಅಲ್ಲೆ ಇದ್ದ. ಕ್ಯಾಮೆ ಇಲ್ದ್ ಬಡ್ಗಿ ಮಗಿನ್ ಅಂಡ್ ಕೆತ್ತಾದ್ ಅಂತೆ.

ದಿನೇಶ ಸ್ವಲ್ಪ ಯೋಚಿಸಿ ರಿಚ್ಚಿ ಹಾಗೂ ಶಂಕರ್ ಪೂಜಾರಿಯ ಬಳಿನೋಡುತ್ತಾನೆ. ಅವರಿಬ್ಬರು ಗಾಡವಾದ ಮಾತುಕಥೆಯಲ್ಲಿದ್ದಾರೆ.

ದಿನೇಶ
ಶಂಕರಣ್ಣ ಸಿಟ್ಟ್ಮಾಡ್ಕೊಂಡಿದ್ದಾರೆ ಅವನ್ ಮೇಲೆ

ಮುನ್ನ
ಕೆಲ್ಸಗ್ ಬರ್ತಿಲ್ಲ ಅಂತನಾ?

ದಿನೇಶ
ಅವನ್ ಕೆಲ್ಸಗ್ ಬರ್ಲಿಲ್ಲಾ ಅಂದ್ರೆ ಶಂಕ್ರಣ್ಣ ತಲೆ ಕೆಡ್ಸ್ಕೊತರ?

ಮುನ್ನ
ಮತ್ತೆ. ಇನ್ನೇನ್ ಮಾಡ್ದ?

ದಿನೇಶ ಶಂಕರ್ ಪೂಜಾರಿಯ ಕಡೆ ನೋಡುತ್ತಾನೆ. ಶಂಕರ್ ಪೂಜಾರಿ ರಿಚ್ಚಿಯ ಹತ್ತಿರ ಮಾತನಾಡುತ್ತಿದ್ದಂತೆ ಒಮ್ಮೆ ದಿನೇಶ ಹಾಗೂ ಮುನ್ನನನ್ನು ನೋಡುವನು

ದಿನೇಶ
ಏನಿಲ್ಲ

ಮುನ್ನ
ಏನಂತಾ ಹೇಳ್ಯಾ. ನಾನ್ ಅವ್ನ್ ತಾವ್ ಮಾತಾಡ್ತೀನಿ.

ಅಷ್ಟರಲ್ಲಿ ಶಂಕರ್ ಪೂಜಾರಿ ಮುನ್ನನನ್ನು ಕರೆಯುವನು. ಮುನ್ನ ಅದನ್ನು ನೋಡಿ ದಿನೇಶನಿಗೆ

ಮುನ್ನ
ಒಸಿ ಇಲಲ್ರ್ ಬಂದೆ. ಎಲ್ಲಿಗು ಹೋಗ್ಬೇಡ

ಎಂದು ಶಂಕರ್ ಪೂಜಾರಿಯ ಕಡೆಗೆ ಹೋಗುವನು. ಮುನ್ನನ ಹಿಂದೆ ದಿನೇಶನು ಬರುವನು. ಆಗ ಶಂಕರ್ ಪೂಜಾರಿ ರಿಚ್ಚಿಗೆ

ಶಂಕರ್ ಪೂಜಾರಿ
ಸರಿ. ನನಗೆ ವಿಷಯ ಗೊತ್ತಾದ್ ಕೂಡಲೆ ಯಾರ್ನದ್ರು car ಒಟ್ಟಿಗೆ ಕಳಿಸ್ತೆನೆ. ಅವನು ನಿನ್ನನ್ನು ಅಲ್ಲಿಗೆ ಕಕರ್ಕೊಂಡ್ ಹೋಗ್ತಾನೆ. ನೀನ್ ಮೊದ್ಲು ಆ ಬಾಲುನ್ ಹುಡ್ಕಿ ಎಂತ ಮಾಡ್ತಿಯ ನೋಡು

ರಿಚ್ಚಿ
ಸರಿ...

ಎಂದು ರಿಚ್ಚಿ ಅಲ್ಲಿಂದ ಹೊರಡುವನು. ಅಲ್ಲಿಯೇ ಹತ್ತಿರದಲ್ಲಿ ನಿಂತಿದ್ದ ಮುನ್ನ ಪೂಜಾರಿಯ ಬಳಿ ಬರುವನು. ಶಂಕರ್ ಪೂಜಾರಿ ಮುನ್ನನನ್ನು ಕುರಿತು

ಶಂಕರ್ ಪೂಜಾರಿ
ಈ China made engine...

ಎನ್ನುವಷ್ಟರಲ್ಲಿ, ರಿಚ್ಚಿ ಸುಧಿಯನ್ನು ಕರೆಯುವುದು backgroundನಲ್ಲಿ ಕೇಳಿ ಬರುತ್ತದೆ. ಶಂಕರ್ ಪೂಜಾರಿಯ ಗಮನ ರಿಚ್ಚಿಯ ಹತ್ತಿರ ಓಡುವ ಸುಧಿಯ ಕಡೆ ಹೋಗುವುದು

ಶಂಕರ್ ಪೂಜಾರಿ (ಕೂಗುತ್ತ)

ಸುಧಿ...

ಓಡುತ್ತಿರುವ ಸುಧಿ ನಿಂತು, ಶಂಕರ್ ಪೂಜಾರಿಯನ್ನು ಕಂಡು, ಅವರ ಕಡೆ ಬಂದು ನಿಲ್ಲುವನು. ಸುಧಿ ಕೈಯಲ್ಲಿದ್ದ cigar ಬಚ್ಚಿಡಲು ಪ್ರಯತ್ನಿಸುತ್ತಾನೆ. ಅದನ್ನು ಕಂಡ ಶಂಕರ್ ಪೂಜಾರಿ

ಶಂಕರ್ ಪೂಜಾರಿ
ಎಂತದ ಅದು

ಸುಧಿ ಕೈಯಲ್ಲಿದ್ದ cigarಅನ್ನು ತೋರಿಸಿ ನಾಚುತ್ತಾನೆ

ಶಂಕರ್ ಪೂಜಾರಿ
ಮೊದ್ಲು ಸರಿಯಾಗಿ ಬೀಡಿ ಎಳಿಲಿಕ್ಕ್ ಕಲಿ. (pause)
ನೋಡು. ಅವನಿಗೆ ಸ್ವಲ್ಪಸ control ಇಲ್ಲ. ಸ್ವಲ್ಪ
ನೋಡ್ಕೊ. ಎಷ್ಟ್ ಬೇಕ್ ಅಷ್ಟೆ. ಗೊತ್ತಾಯ್ತಾ

ಸುಧಿ
ಸರಿ ಅಣ್ಣ

ಶಂಕರ್ ಪೂಜಾರಿ ಹೊರಡಲು ಸನ್ನೆ ಮಾಡುವರು. ಸಧಿ ರಿಚ್ಚಿಯ ಕಡೆ ಓಡುವನು. ಮುನ್ನನ ಗಮನ ಓಡುವ ಸುಧಿಯ ಮೇಲಿರುತ್ತದೆ. ಶಂಕರ್ ಪೂಜಾರಿ ಅವನನ್ನು ಕರೆದಕೂಡಲೆ, ಮುನ್ನ ಶಂಕರ್ ಪೂಜಾರಿಯ ಕಡೆ ನೋಡುವನು

ಶಂಕರ್ ಪೂಜಾರಿ
ಮುನ್ನ. ಈ 98 ನಂಬರ್ boat ತೊಂದ್ರೆ ಕೊಡ್ತಿದ್ಯಂತೆ.
ಸಂಜೆ 4 ಗಂಟೆಗೆ ರಿಚ್ಚಿ ಹತ್ರ ದಡಕ್ಕೆ ಎಳಿಲಿಕ್ಕೆ ಹೇಳಿದ್ದೇನೆ.
ಒಮ್ಮೆ ಹೋಗಿ ನೋಡು...

ಮುನ್ನ
ಸರಿ ಅಣ್ಣಾ...

ಶಂಕರ ಪೂಜಾರಿ
ಈ ಚೈನ ಮೇಡ್ ಇಂಜಿನ್ ಹೇಗಿದೆ?

ಮುನ್ನ
ದೋಡ್ engine ಅಣ್ಣ. ನಮ್ ಅಲ್ ಜಾಸ್ತಿ ಇಲ್ಲ, ಆದ್ರೆ
Load ಚನ್ನಾಗ್ ತಗತದ ಅಂತೆ

ಶಂಕರ ಪೂಜಾರಿ
ಹುಃ ಗೊತ್ತುಂಟು... ಒಂದು order ಮಾಡಿದ್ದೇನೆ. ಸದ್ಯಕ್ಕೆ
ಒಂದ್ ತಸೆರ್ಸುವ. ಚೆನ್ನಾಗಿದ್ರೆ ಆಮೇಲ್ ನೊಡುವ...

ಮುನ್ನಾ
ಸರಿ ಅಣ್ಣಾ...

ಶಂಕರ್ ಪೂಜಾರಿ
ಹೊರಡು....

ಮುನ್ನ ತಲೆ ಅಲ್ಲಾಡಿಸಿಕೊಂಡು ಅಲ್ಲಿಂದ ಹೋರಡುವನು

CUT TO:

EXT. DAY: MALPE BEACH

ಕೆಲವೊಂದು Cut in shots. ಶಾರದಾ beechನಲ್ಲಿ ತನ್ನ ಮೀನು ಬುಟ್ಟಿಯ ಪಕ್ಕದಲ್ಲೆ ಕೂತಿದ್ದಾಳೆ. ಮುನ್ನ ಅವಳಿಂದ ಇಪ್ಪತ್ತು ಅಡಿ ಅಂತರದಲ್ಲಿ ಕೂತಿದ್ದಾನೆ.

She Looked at me, she smiled so did I

Her lips moved, I thought I heard her say something

But it was whispers in the wind...

I wanna see her all day, I hope the time doesn't fly

For I know in the evening light that she'll be gone

And then the lonely hours begin

And all she leaves behind to find her in the dusk

Are whispers in the wind.

And in the night when the rain fall, so softly as a mist...

I hear a sound that whispers, a sound just like a kiss.

The moon does shine full, and it shows me where to walk...

From the sea shore I hear the waves, I remember how we talked.

Sitting at a distance, staring at the sea... no words were needed then,

Between our hearts, our love would flow, like whispers in the wind.

The night ends as the new day began, I looked for her,

And there she is, even more beautiful than yesterday

She Looked at me, she smiled so did I Her lips moved,

I thought I heard her say something

But it was whispers in the wind...

ಸ್ವಲ್ಪ ಹೊತ್ತಿನ ನಂತರ Democracy ಓಡಿಬಂದು ಶಾರದಾಳಿಗೆ ಏನೋ ಹೇಳುವನು. ಅವನ ಹಿಂದೆ ಅವನ ಮೂವರು ಸ್ನೇಹಿತರು ಬಂದಿದ್ದಾರೆ. ಶಾರದಾಳು Democracyಯ ಮಾತು ಕೇಳಿ ಗಾಬರಿಯಿಂದ ಓಡಿ ಹೋಗುವಳು. ಇದನ್ನು ನೋಡಿದ ಮುನ್ನ Democracyಯ ಹತ್ತಿರ ಓಡಿಬಂದು

ಮುನ್ನ

ಏನಾಯಿತ್ಲಾ?

DEMOCRACY

ಅವರು ಬಾಲಣ್ಣನ್ನ ಹಿಡ್ಕೊಂಡ್ ಹೋದ್ರು

ಮುನ್ನ

ಯಾರು?

DEMOCRACY

ರಿಚ್ಚಿ, ಸುಧಿಯಣ್ಣ ಎಲ್ಲಾ ಸೇರಿ... ಸರಿಯಾಗ್ ಹೊಡ್ದ್ರು.
ಬಾಲಣ್ಣನ ಮೈಯೆಲ್ಲಾ ರಕ್ತ...

ಮುನ್ನನಿಗೆ ದಿನೇಶ ಹೇಳಿರುವುದು ನೆನಪಾಗುತ್ತದೆ,

ಮುನ್ನ
ಯಾವಾಗ್ ಆಯ್ತು? ಎಲ್ಲಿಗ್ ಎತ್ತಾಕ್ಕಂಡ್ ಓದ್ರು ಗೊತ್ತ?

DEMOCRACY
ಮಧ್ಯಾನ... ಎಲ್ಲಿಗ್ ಕಕರ್ಕೊಂಡ್ ಹೋದ್ರು ಗೊತ್ತಿಲ್ಲ.

ಮುನ್ನ ಗಾಭರಿಯಿಂದ ಓಡಲು ಪ್ರಾರಂಭಿಸಿದವನು ತಟ್ಟನೆ ನೆನಪಾಗಿ

ಮುನ್ನ
ಎಲ್ಲಾಯಿತು?

DEMOCRACY
ಜೋಡ್ ರಸ್ತೆ...

ಮುನ್ನ ಅವನ bullet ಹತ್ತಿರ ಓಡುತ್ತಾನೆ. ಇದನ್ನು Democracy ಹಾಗು ಅವನ ಮೂವರು ಸ್ನೇಹಿತರು ನೋಡುತ್ತಾರೆ. Camera ಅವರ ಹತ್ತಿರ ಹೋಗುತ್ತದೆ

ಹುಡುಗ ೧
ಪೇಪರ್ ಪೇಪರ್...

DEMOCRACY
Medicine, medicine...

ಆಗ paper paper track ಪ್ರಾರಂಭವಾಗುತ್ತದೆ. ನಾಲ್ವರು ಮಕ್ಕಳು ಹಾಡುತ್ತಿದ್ದಾರೆ. ಮುನ್ನ ಬಾಲುವಿಗಾಗಿ ತನ್ನ bulletನಲ್ಲಿ ಊರೆಲ್ಲಾ ಹುಡುಕುತ್ತಿದ್ದಾನೆ

CUT TO:

EXT. DAY: JODRASTE

ಮುನ್ನನ bike ಬಂದು ಜೋಡ್ ರಸ್ತೆಯಲ್ಲಿ ನಿಲ್ಲುತ್ತದೆ. ಅಲ್ಲಿ ನೋಡಿದಾಗ ಯಾರು ಕಾಣುವುದಿಲ್ಲ. ಅಲ್ಲಿನಡೆದುಕೊಂಡು ಹೋಗುತ್ತಿದ್ದ ಒಬ್ಬನನ್ನು ನಿಲ್ಲಿಸಿ

ಮುನ್ನ
ಇಲ್ಲೇನಾರ ಜಗ್ಳಾ ಆಯ್ತಾ?

ವ್ಯಕ್ತಿ
ಗೊತ್ತಿಲ್ಲ...

ಮುನ್ನ ಸುತ್ತಲು ನೋಡಿ, ಆ ವ್ಯಕ್ತಿಗೆ

ಮುನ್ನ
ಇಲ್ಲಿ ಹುಲಿ ವೇಷ ಹಾಕಂಡಿದ್ರಲ್ಲಾ. ಅವ್ರೆಲ್ಲಾ ಎಲ್ಲ್ ಹೋಂಟ್ಹೋದ್ರು?

ವ್ಯಕ್ತಿ
ಹಾ... ಅಲ್ಲೆ bus stand ಒಳಗೆ ಕುಳಿತಿದ್ದಾರೆ ನೋಡಿ

ಮುನ್ನ ತನ್ನ bikeಅನ್ನು start ಮಾಡಿ bus stand ಕಡೆ ಹೋಗುತ್ತಾನೆ

CUT TO:

EXT. DAY: JODRASTE / BUS STAND

ಮುನ್ನ ಬಸ್ ಸ್ಟಾಂಡ್ ಬಳಿ ಬೈಕ್ ನಿಲ್ಲಿಸಿ ಒಳಗೆ ಓಡಿಬರುವನು. ಕೆಲವೊಂದು ಹುಲಿಗಳು ಅಲ್ಲಿರುವ barನ ಬಳಿ ಇರುವರು. ಇನ್ನುಳಿದವರು ಬಸ್ ಸ್ಟಾಂಡ್ ಒಳ್ಗೆ ಕೂತಿರುವರು. ಮುನ್ನ ಒಳಗೆ ಓಡಿಬರುತ್ತಾ...

ಮುನ್ನ
ಬಾಲು?

ಎಲ್ಲರು ಒಬ್ಬೊಬ್ಬರ ಮುಖ ನೋಡಿಕೊಂಡು, ಅವರಲ್ಲಿ ತಾಸೆ ಬಾರಿಸುವವನು

ತಾಸೆಯವ
ರಿಚ್ಚಿ ಕಡೆಯವರು...

ಮುನ್ನ
ಯಾವ್ ಕಡೆ ಹೋದ್ರು?

ಹುಲಿ
ಮಲ್ಪೆ ಕಡೆ ಹೋದ್ರಾಂತ...

ಮುನ್ನ bike ಕಡೆ ಹೊರಡುವನು. ಎಲ್ಲರು ಮುಖ ಮುಖ ನೋಡಿಕೋಳ್ಳುವರು...

CUT TO:

ಮುನ್ನ ಮಲ್ಪೆಯ ಬಳಿ ಹುಡುಕುವ ಇನ್ನಷ್ಟು montages...

CUT TO:

EXT. DAY: MALPE HARBOR

ಮುನ್ನ ತನ್ನ bulletನಲ್ಲಿ ಮಲ್ಪೆ harbor gate ಬಳಿ ಬಂದು ನಿಲ್ಲುವನು. ಅಲ್ಲಿರುವ watchman ಬಳಿ

ಮುನ್ನ
ಬಾಲುನ್ ನೋಡ್ದಾ?

WATCHMAN
ಇಲ್ಲ... ಎಂತಕೆ?

ಮುನ್ನ
ಹುಲಿ ವೇಷ ಹಾಕ್ಕಂಡಿದ್ದ...

watchman ಸ್ವಲ್ಪ ಯೋಚಿಸಿ

WATCHMAN
ಆವಾಗ್ಲೆ ಸುಧಿ ರಿಕ್ಷದಲ್ಲಿ ಹಾಕ್ಕೊಂಡ್ ಕಕರ್ಕೊಂಡ್
ಹೋದ್ನಲಾ... ಬಾಲುನಾ ಅದು?

ಮುನ್ನ ಸರಿ ಎನ್ನುವಂತೆ ತನ್ನ ಬೈಕ್ ಸ್ಟಾರ್ಟ್ ಮಾಡಿಕೊಂಡು ಹಾರ್ಬರ್ ಬಳಿಗೆ ಹೋಗುವನು. ಅಲ್ಲಿರುವ ಬೋಟ್ ಬಳಿ ನಿಂತಿರುವವರಲ್ಲಿ ಬಾಲುವಿನ ಬಗ್ಗೆ ವಿಚಾರಿಸುವನು. ಅವರು ಗೊತ್ತಿಲ್ಲ ಎನ್ನುವಂತೆ ಸನ್ನೆ ಮಾಡುವರು. ತನ್ನ bikeನಲ್ಲಿ ಮುನ್ನ harbor ಒಳಗೆ ಹುಡುಕುವ ಇನ್ನಷ್ಟು montages...

CUT TO:

ಮುನ್ನ harborನ ಒಂದು ಕಡೆ ಸಮುದ್ರವನ್ನು ನೋಡುತ್ತ ಕೂತಿರುವನು. ಅವನ ಪಕ್ಕದಲ್ಲಿ ಇಬ್ಬರು ಗಾಲ ಹಾಕಿ ಮೀನು ಹಿಡಿಯಲು ಬಂದವರು, ಅವರಲ್ಲಿ ಒಬ್ಬ ಮುನ್ನನನ್ನು ನೋಡಿ

ವ್ಯಕ್ತಿ

ಏ ಮುನ್ನ... ಇಲ್ಲಿ ಎಂತ ಮಾಡ್ತಿದ್ದೀಯ?

ಏನು ಹೇಳಲು ತೋಚದೆ ನಂತರ್

ಮುನ್ನ
ಶಂಕರಣ್ಣ engine ready ಮಾಡಕ್ ಕರ್ದವ್ರೆ..

ವ್ಯಕ್ತಿ
ಯಾವ್ದಂತೆ?

ಮುನ್ನ ಯೋಚಿಸಿ

ಮುನ್ನ
98

ವ್ಯಕ್ತಿ
98... ರಿಚ್ಚಿ ಆವಾಗ್ಲೆ ತಕ್ಕೋಂಡು ಹೋದ್ನಲ್ಲ ಮಾರಾಯ.
ಇಷ್ಟೊತ್ತಿಗೆ ದಡಕ್ಕೆ ಎಳಿತಿರ್ ಬೇಕು.

ಮುನ್ನ ಏನೋ ನೆನಪಾದಂತೆ time ನೋಡುವನು. ಗಂಟೆ 5 ಆಗಿರುತ್ತದೆ. ಅಲ್ಲಿಂದ ಎದ್ದು bullet ಕಡೆ ಓಡುವನು

ವ್ಯಕ್ತಿ
ಎಂತ ಆಯಿತಾ ಓ...

CUT TO:

EXT. DAY: MALPE HARBOR / DOCKING AREA

ಮುನ್ನ ತನ್ನ bikeನಲ್ಲಿ ಬಂದು docking areaದಲ್ಲಿ ನಿಲ್ಲಿಸುವನು. ರಿಚ್ಚಿ ಹಾಗು ಉಳಿದ ಕಾರ್ಮಿಕರು ಹಡಗನ್ನು ಎಳೆಯುತ್ತಿದ್ದಾರೆ. ಮುನ್ನ, ತನ್ನ tool kitಅನ್ನು ಹಿಡಿದುಕೊಂಡು ಗಾಣದ ಹತ್ತಿರ ಬಂದು, ಹಡಗನ್ನು ನೋಡುತ್ತ ನಿಲ್ಲುವನು. ಅದನ್ನು ನೋಡಿದ ಸುಧಿ

ಸುಧಿ
ಏಯ್... ಎಂತ ಮಾಡ್ತಿದ್ದಿಯಾ? ಮೇಲ್ ಹೋಗಿ engine
ನೋಡ...

CUT TO:

ಮುನ್ನ ಹಡಗನ್ನು ಹತ್ತಿಕೊಂಡು ಮೇಲೆ ಹೋಗುವನು. ಹಡಿಗಿನ ಮೇಲೆ ಬಂದಾಗ, ನೆಲದ ಮೇಲೆ ರಕ್ತದ ಕಲೆಗಳು ಕಾಣಿಸುತ್ತದೆ. ದಿನೇಶ ಹಾಗು ಇನ್ನೊಬ್ಬ ಅಲ್ಲೆ ಇರುವರು. ಮುನ್ನ engine roomಗೆ ಹೋಗಿ ಕೆಲಸವನ್ನು ಪ್ರಾರಂಭಿಸುವನು. ಸ್ವಲ್ಪ ಸಮಯದ ನಂತರ, ದಿನೇಶ ಹಾಗು ಇನ್ನೊಬ್ಬ ಅಲ್ಲಿಂದ ಹೊರಟಿರುವುದನ್ನು ನೋಡಿ, ಮುನ್ನ engine roomನಿಂದ ಹೊರಗೆ ಬಂದು ರಕ್ತದ ಕಲೆಗಳನ್ನು ಪರೀಕ್ಷಿಸಿ ನೋಡುವನು. ಅಲ್ಲಿಂದ ಎದ್ದು ಹಡಗಿನ ಕೆಳಗೆ ನೋಡಿದಾಗ, ರಿಚ್ಚಿ ತನ್ನ ಕೈಯನ್ನು ತೊಳೆದು ಅಲ್ಲಿಂದ ಹೊರಡುತ್ತಿರುವನು. ಅವನ ಹಿಂದೆ ಸುಧಿ ಹಾಗು ದಿನೇಶನೂ ಹೊರಡುವರು. ಆಗ ಮುನ್ನನಿಗೆ ತನ್ನ ಕಾಲ ಕೆಳಗೆ ಏನೋ ತಗುಲಿದಂತೆ ಬಾಸವಾಗುತ್ತದೆ. ಕಾಲ್ ಕೆಳಗೆ ನೋಡಿದಾಗ, ಅಲ್ಲಿ fire ಆಗಿರುವ empty bullet cartridge ಇರುತ್ತದೆ. ಮುನ್ನ ಅದನ್ನು ಎತ್ತಿ ನೋಡಿ, ಬಾಲು ಸತ್ತಿರಬಹುದೆಂದು ಗ್ರಹಿಸುತ್ತಾನೆ.

CUT TO:

ಮುನ್ನ ತನ್ನ tool kit ಹಿಡಿದುಕೊಂಡು bikeನ ಕಡೆ ನಡೆದುಕೊಂಡು ಹೋಗುತ್ತಿರಬೇಕಾದರೆ, camera ಅವನನ್ನು ಸೆರೆಹಿಡಿಯುತ್ತ ಹಿಂದಕ್ಕೆ ಸರಿಯುತ್ತದೆ. Backgroundನಲ್ಲಿ ಕಾರ್ಮಿಕರು ಹಡಗನ್ನು ಎಳೆಯುತ್ತಿದ್ದಾರೆ.

CUT TO:

INT. DAY: REGINA'S HOUSE

ರೆಜಿನ ತನ್ನ ಮನೆಯ ಉಯ್ಯಾಲೆಯ ಮೇಲೆ ಕೂತ ರೆಜಿನ ಹಾಳೆಯ ಮೇಲೆ chapter ಮುಗಿಸಿ, cardboardಅನ್ನು ಉಯ್ಯಾಲೆಯ ಮೇಲಿಟ್ಟು ಅಡುಗೆ ಮನೆಯ ಕಡೆಗೆ ಹೊರಡುವಳು. Pass ಆಗುವ ತಾಯಿ

ತಾಯಿ
ಇನ್ನೊಂದ್ ಗಂಟೆಲಿ ಬಂದ್ ಬಿಡ್ತೀನಿ ಕಣೆ. Fridgeಅಲ್ಲಿ carrot juice ಮಾಡಿ ಇಟ್ಟಿದ್ದೀನಿ. ಹೊರಗೆ ಎಲ್ಲಾದ್ರು ಹೋಗೋದಾದ್ರೆ ಮನೆ key ಅಲ್ಲೆ drawನಲ್ಲಿದೆ

ರೆಜಿನ ಅಡುಗೆ ಮನೆಯಲ್ಲಿ fridgeಅನ್ನು open ಮಾಡಿ, ಒಂದು bottleನಲ್ಲಿದ್ದ juiceಅನ್ನು ತೆಗೆದು, ಒಂದು glassನಲ್ಲಿ ಹಾಕಿ, ಅಲ್ಲಿರುವ ಕಿಟಕಿಯ ಬಳಿ ಬರುವಳು. ಕಿಟಕಿಯ ಹೊರಗೆ ಒಂದು ಕಾಗೆ ಕಾಣುವುದು. ರೆಜಿನ, ಕಾಗೆಯನ್ನು ನೋಡುತ್ತ, juice ಕುಡಿಯುತ್ತಾಳೆ. ಅವಳ pocket ಇಂದ voice recorderಅನ್ನು ಹೊರಗೆ ತೆಗೆದು play ಮಾಡುತ್ತಾಳೆ. ಶಂಕರ್ ಪೂಜಾರಿ voice ಕೇಳುತ್ತದೆ. ರೆಜಿನ fast forward ಮಾಡುವಳು. ದಿನೇಶನ voiceಅನ್ನು ಕೇಳಿ ಮತ್ತೆ fast forward ಮಾಡುವಳು. ಬಾಲುವಿನ voice ಕೇಳಿ ಅದನ್ನು ಆಲೈಸುತ್ತಾಳೆ

ಬಾಲು (VOICE FROM THE RECORDER)
ಅವು ಹಡ್ಬಿ ರಂಡಿಯವ್, ನನ್ನ ನಾಯಿ ಎಳ್ಕ್ ಹೋದಾಗೆ ಎಳ್ಕಾ ಹೋದೊ

ಅದನ್ನು ಕೇಳಿ ರೆಜಿನ ಸ್ವಲ್ಪ rewind ಮಾಡಿ ಪುನಃ play ಮಾಡುತ್ತಾಳೆ

ಬಾಲು (VOICE FROM THE RECORDER)
ಬೋಳಿ ಮಗ. ನಾಯಿ ಸೂಳೆ ಮಗಾ ಅಂವ...

ರೆಜಿನ ಇನ್ನೊಮ್ಮೆ rewind ಮಾಡಿ play ಮಾಡುವಳು

ಬಾಲು (VOICE FROM THE RECORDER)
ನಂಕೇಲ್ ಎಂತ ಕೇಣ್ ಬೇಡಿ. ನಂಗು ಅದಕ್ಕು ಎಂತ ಸಂಬಂದು ಇಲ್ಲ...

CUT TO:

EXT. DAY: JODRASTE / BUS STAND

ಬಾಲು, ಉಡುಪಿಯ ಜೋಡುರಸ್ತೆಯ ಬಳಿ ಇರುವ ಹಳೆಯ bus standನಲ್ಲಿ ಸಂಪೂರ್ಣ ಮದ್ಯಪಾನ ಮಾಡಿ, ಒಂದು cement seatನ ಮೇಲೆ ಹತ್ತಿ, ಬಿಟ್ರೆ ಓಡಿಹೋಗುವ ಹಾಗೆ ಕುಳಿತಿದ್ದಾನೆ. ಅವನ ಹತ್ತಿರ ಕೊರಗ ನಿಂತಿದ್ದಾನೆ. ರೆಜಿನ, ಅವನ ಮುಂದೆ ನಿಂತಿದ್ದಾಳೆ. ಅವಳ ಕೈಯಲ್ಲಿ voice recorder ಇದೆ. ಅದನ್ನು ಕಂಡು ಬಾಲು

ಬಾಲು
ಇಲ್ಕಣ್... ಅದನ್ನ್ ನನ್ನ್ ಹತ್ರ ತಬರ್ಬೇಡ ಗೊತ್ತಾಯ್ತಾ? ನಿಂಗ್ ದಮ್ಮಯ್ಯ ಮರೆತಿ, ನನ್ ಬಿಟ್ಟ್ ಬಿಡ. ದೇವ್ರ್ ಸತ್ಯಕ್ಕೂ ನಂಗ್ ಅದರ ಸುದ್ದಿ ಮಾತಾಡುಕ್ ಖುಷಿ ಇಲ್ಲ.

ಎಂದು ಅಲ್ಲಿಂದ ವೇಗವಾಗಿ ಹೊರ ನಡೆಯುತ್ತಾನೆ. ರೆಜಿನ ಅವನನ್ನು ಹಿಂಬಾಲಿಸುತ್ತ ಬರುವಳು. ಕೊರಗ ಅವರ ಹಿಂದೆ ಹಿಂದೆ ಬರುವನು

ರೆಜಿನ
ನೋಡಿ. ಒಂದ್ ಸ್ವಲ್ಪ ಹೊತ್ತು... ನಾನ್ ನಿಮ್ಗೆ ಜಾಸ್ತಿ ತೊಂದ್ರೆ ಕೊಡಲ್ಲ...

ಬಾಲು
ಅಯ್ಯ ಅಕ್ಕ... ನೀನ್ ಕೊಡ್ತಿಪ್ಪ್ ತೊಂದ್ರೆ ಸಾಲ್ದ? ನಾನ್ ಒಬ್ಬ

ಸಾದಾರಣ ಮನ್ಸ. ನಂಗೆ ಎಂತ ಗೊತ್ತಿರ್ತ್? ನನ್ನನ್ ದಯ್ವಿಟ್ಟ್
ಈ ವಿಷಯಕ್ ಯಳಿ ಬ್ಯಾಡ...

ರೆಜಿನ
ನೋಡಿ. ನಿಮ್ಗೆ ನಿಮ್ಮ್ ಹೆಸ್ರು ಬಿಟ್ಟ್ ಕೊಡ್ಬಾರ್ದುದ ಅಂತಿದ್ರೆ...
ನಿಮ್ಮ್ ಹೆಸ್ರು ಆಚೆ ಬರ್ದಿದ್ದ ಹಾಗೆ ನಾನ್ ನೋಡ್ಕೋತಿನಿ

ಬಾಲು
ಯಬ್ಬಾ ಮಾರೇತಿ... ನನ್ನಾ ಒಬ್ಬೆ ಇಪ್ಪುಕ್ ಬಿಡ್ತಿಯಾ? ನಂಗ್
ಈ ಜೀವ್ಮಾನ್ ಸಾಕಾಯ್ ಹೊಯಿತ್. ಮೊದಲ್ ಆ ಪೋಲಿಸನ್
ಬಂದ್ ಜೀವ್ ತಿಂತಾ. ಕಡೀಕ್ ಆ ಲಾಯರ್. ಅವರಿಬ್ರುರ
ಸಾಲ ಅಂದೇಳಿ... ಈಗ ನೀ ಬಂದ್ಯಾ? ಅಲ್ ಕಾಣ್...
ಎಲ್ಲಾ ನಮ್ಮನ್ನೇ ಕಾಂತ ಇದ್ರ್. ಅವರೆಲ್ಲ ನನ್ನ್ ಬಗ್ಗೆ ಎಂತ
ಎಣಿಸ್ಕಂತಿಲ್ಲ ನೀನೆ ಹೇಳ್?

ಅಷ್ಟರಲ್ಲಿ ಬಾಲು ತಿರುಗುವನು. ಅಲ್ಲೊಂದು ಮರವನ್ನು ನೋಡಿ, ಏನೋ ನೋಡಿದಂತೆ, ಅತ್ತ ಕಲ್ಲನ್ನು ಎಸೆಯಲು ಪ್ರಾರಂಭಿಸುತ್ತಾನೆ. ಇದನ್ನು ಕಂಡ ರೆಜಿನ, ಭಯದಿಂದ ಹಿಂದೆ ಸರಿಯುತ್ತಾಳೆ.

ಬಾಲು
ಈ ಹಡ್ಬಿ ಕಾಕಿ ಒಂದ್... ನಿನ್ನನ್ನ್ ಇವತ್ತ್ ಜೀವ ಸಮೇತ
ಬಿಡುದಿಲ್ಲ... ಎಲ್ಲದ್ಕೂ ನೀನೆ ಕಾರಣ. (ಕಲ್ಲೆಸೆಯುತ್ತ)
ತೆಕೊ... ನಿನ್ನ ವಾಲಿಕಳುಕೆ...

ರೆಜಿನ ಭಯದಿಂದ ಬಾಲುವನ್ನು ನೋಡುತ್ತಿರುವಳು. ಅವಳಿಗೆ, ಇಲ್ಲೇನು ನಡೆಯುತ್ತಿದೆ ಎಂದು ತಿಳಿಯುತ್ತಿಲ್ಲ. ಅವಳು ಕೊರಗನ ಕಡೆಗೆ ಒಮ್ಮೆ ನೋಡುವಳು. ಅದನ್ನೆ ಕಾಯುತ್ತಿದ್ದ ಕೊರಗ, ರೆಜಿನಾಳು ಅವನ ಕಡೆಗೆ ನೋಡಿದ ಕೂಡಲೆ, ಉತ್ಸುಕನಾಗಿ ಹೋಗಿ ಬಾಲುವನ್ನು ಹಿಡಿದು

ಕೊರಗ
ಏಯ್... ಎಂತ ಮಾಡ್ತಿದ್ದೀಯಾ? ಹೆಣ್ಣ್ ಅಲ್ದನಾ? ಅವಳಿಗ್
ಹ್ಯಾಂಗ್ ಇಲ್ಲ ಅಂತಿಯಾ? ಏನೋ, ಒಂಚೂರ್ ಉಪ್ಕಾರ
ಕೇಂತಿದ್ದಳ್. ಒಂಚೂರ್ ಉಪ್ಪು ಕಾರ ಹಾಕಿ ಕೊಡುದ್ ಅಪ್ಪ.

ಬಾಲು
ಏಯ್ ಕೊರ್ಗ. ನೀನ್ ನಿವಾಳ್ಸಾ. ನಿಂಗ್ ಅವುಳ್ ಕೈಲ್
ಮಾತಾಡ್ಕಂಬಗ್ ಇದ್ರೆ, ಮಾತಾಡ್ ಹೋಗ್. ನಂಗ್ ಎಂತ
ಮಾಡ್ಕ್ ಅಂದೇಳಿ ಹೇಳ್ಬೇಡ.

ಕೊರಗ
ಏಯ್ ಬಾರ... ಹೆಣ್ಮಕ್ಕಳಿಗ್ ಇಲ್ಲ ಅಂಬಕ್ ಆಗ್ದಾ. ಅವಳ್
ನಿನ್ನ್ ಹೆಸರ್ ಬೇರೆ ಹೊರಗ್ ಬರ್ದಿದ್ದಾಗೆ ಕಾಂತೆ
ಅಂದಿದಳ್...

ಎಂದು ಬಾಲುವನ್ನು ಪುನಃ bus stand ಒಳಗೆ ಕರೆದುಕೊಂಡು ಬರುವನು.

ಬಾಲು
ಅವಳ್ ನನ್ನ ಹೆಸ್ರ್ ಬಿಟ್ಟ್ ಕೊಟ್ರ್ ಎಂತ ಆತ್? ನಂಗ್ ಎಂತ್
ಹೆದ್ರಿಕಿಯನಾ? ಏಯ್... ನಂಗ್ ಯಾರ್ ಕ್ಯಾರ್ ಇಲ್ಲಿಯಾ...

ಕೊರಗ ಬಾಲುವನ್ನು cement seatನ ಮೇಲೆ ಕೂರಿಸಿ, ಒಂದು ಕುರ್ಚಿಯನ್ನು ತರಲು ಕೂಗುವನು. ಒಬ್ಬ ಚಿಕ್ಕ ಹುಡುಗ ಕುರ್ಚಿಯನ್ನು ತಂದು ಕೊಡುವನು. ರೆಜಿನ ಹೊರಗೆ ಕಾಯುತ್ತಿರುವುದನ್ನು ನೋಡಿ

ಕೊರಗ
ನೀವ್ ಒಳಗ್ ಬನ್ನಿ... (ಅವಳು ಒಳಗೆ ಬರುವಳು)
ಕೂಕಣಿ... ಕೂಕಣಿ...

ರಿಜಿನ ಬಂದು ಕುರ್ಚಿಯ ಮೇಲೆ ಕೂರುವಳು

ಕೊರಗ
ಹಾಂ. ಈಗ ನಿಮಗೆ ಎಂತ ಬೇಕ್ ಕೇಣಿ. ನಾ ಹೇಳ್ತೆ...

ಬಾಲು
ಬೋಸುಡಿ... ನಿಂಗ್ ಎಂತ ಗುತಿತಾ? ನೀ ಸುಮ್ಮನ್ ಕೂಕೊ.
ನಾ ಹೇಳ್ತೆ...

ಬಾಲು, ಕಾಗೆಯನ್ನು ಕಂಡು ರೆಜಿನಾಳಿಗೆ

ಬಾಲು
ಆ ಕಾಕಿ ಕಾಂತಿತ್ತಾ?

ಎಂದವನೆ ಎದ್ದು, ಅಲ್ಲಿ ಇಲ್ಲಿ ಕಲ್ಲನ್ನು ಹುಡುಕುತ್ತಾ ಕಾಗೆಯ ಕಡೆಗೆ

ಬಾಲು
ನಿನ್ನ ವಾಲಿಕಳುಕ್... ಬೋಳಿಮಗಂದ್...

ಎಂದು ಬರಿ ಕೈಯನ್ನು ಕಲ್ಲು ಎಸೆದಂತೆ ಕಾಗೆಯ ಕಡೆಗೆ ಬೀಸುವನು

ಬಾಲು
ನನಗ್ ಅದ್ ಸಿಕ್ತಲೆ... ಆಗಳಿಕ್ಕಿಂದ ಆ ಕಾಕಿ ನನ್ನ ಬೆನ್
ಹತ್ಕಂಡಿತ್

ರೆಜಿನ
ಅದು ಅಂದ್ರೆ?

ಕಾಗೆಯ ಕಡೆಗೆ ನೋಡುತ್ತಿದ್ದ ಬಾಲು, ಒಂದು ಗುಂಗಿನಲ್ಲಿ ನಿಧಾನವಾಗಿ ನಡೆದು ರಿಜಿನಾಳ ಎದುರು ಬಂದು ಕೂರುವನು. ಕುಳಿತು ತನ್ನ ಕೈಗಳಿಂದ ಅದರ ಆಕಾರವನ್ನು ತೋರಿಸುವನು. ಅನುಮಾನದಿಂದ ರೆಜಿನ

ರೆಜಿನ
ಏನದು?

ಬಾಲು
ಶ್... ಅದರ ಹೆಸ್ರ್ ಹೇಳುಕಾಗ. ಶನಿ... ಶನಿ ಬೆನ್ನ್
ಹತ್ತಾ... ಅದ್ ಯಾಯರ್ಯಾರ್ ಕೈಗ್ ಹೋಯ್ತೊ... ಅವರ್
ಯಾರಿಗೂ ಒಳ್ಳೆದ್ ಆಯಿಲ್ಲ. ನಾ ಮೀನ್ ಹಿಡುಕ್ ಹೋದಳಿಕೆ,
ಸಮುದ್ರದ್ ಮಧ್ಯ ಸಿಕ್ಕದ್ದ್

ರೆಜಿನ
ಅದು ಹೆಂಗ್ ಕಾಣ್ಸುತ್ತೆ?

ಬಾಲು ತನ್ನ ಕೈಗಳಿಂದ ಅದರ ಆಕಾರ ಮಾಡಿ ತೋರಿಸುವನು

CUT TO:

EXT. DAY: FISHING BOAT

Song takes off

ಬಾಲು ಹಾಗು 7 ಜನ ಮೀನುಗಾರರು ಸಮುದ್ರದ ಮಧ್ಯೆ ಮೀನು ಹಿಡಿಯಲು ಬಲೆಯನ್ನು ಬೀಸಿದ್ದಾರೆ. ಜೋರಾಗಿ ಮಳೆ ಬರುತ್ತಿದೆ. ಬಲೆಗೆ ಏನೋ ಸಿಲುಕಿದಂತಾಗಿ ಅದನ್ನು ಎಳೆಯಲು ನಾಲ್ವರು ಪ್ರಯತ್ನಿಸುತ್ತಾರೆ. ಅವರಿಂದ ಆಗದೆ ಇದ್ದಾಗ, ಅದರಲ್ಲೊಬ್ಬ ಸಹಾಯಕ್ಕಾಗಿ ಉಳಿದವರನ್ನು ಕೂಗುವನು. ಆಗ ಉಳಿದವರು ಹೋಗಿ ಅವರನ್ನು ಸೇರಿಕೊಳ್ಳುವರು. ಆದರು ಎಳೆಯಲು ಕಷ್ಟವಾಗುತ್ತದೆ. ಇದನ್ನು ಕಂಡ ಹಡಗಿನ ಚಾಲಕ ತನ್ನ steeringಅನ್ನು lock ಮಾಡಿ, ಅವನು ಅವರನ್ನು ಸೇರಿಕೊಳ್ಳುವನು. ಬಹಳ ಪ್ರಯತ್ನದ ನಂತರ ಕಷ್ಟಪಟ್ಟು ಅದನ್ನು ಎತ್ತಿ ಒಳಹಾಕುವರು. ಆ ಬಲೆಯನ್ನು ತರೆದಾಗ, ಅದರಲ್ಲಿ

ಒಂದಷ್ಟು ಮೀನಿನ ಜೊತೆ, ಒಂದು ದೊಡ್ಡ ಮರದ ದಿಮ್ಮಿಯು ಇರುವುದು. ಎಲ್ಲರು ಬಹಳ ಬೇಸರ ಗೊಳ್ಳುವರು. ಬಾಲು ಆ ದಿಮ್ಮಿಯ ಬಳಿ ಬರುವನು. ಹಿಂಬದಿಯಲ್ಲಿ ಕಾಗೆಗಳೆಲ್ಲ 'ಕಾ ಕಾ' ಎಂದು ಕಿರುಚುತ್ತಿರುತ್ತದೆ. ಒಂದು ಕಾಗೆ ಆ ದಿಮ್ಮಿಯ ಸಮೀಪದಲ್ಲಿ ಹಡಗಿನ ಎತ್ತರದ ಜಾಗದಲ್ಲಿ ಬಂದು ಕುಳಿತುಕೊಂಡು ದಿಮ್ಮಿಯನ್ನು ನೋಡುತ್ತಿರುತ್ತದೆ. ಬಾಲು ಆ ದಿಮ್ಮಿಯನ್ನು ನೋಡುತ್ತಿರುವಾಗ ಆ ಕಾಗೆಯ ಕೂಗನ್ನು ಕೇಳಿ ಅದರ ಕಡೆ ತಿರುಗುವನು. ಕಾಗೆಯು ಅವನನ್ನು ನೋಡಿ ಕಿರುಚುತ್ತದೆ. ಬಾಲು ಅದನ್ನು ಲೆಕ್ಕಿಸದೆ ದಿಮ್ಮಿಯನ್ನು ನೋಡುವನು

ಬಾಲು (VOICE OVER)
ಆ ದಿವ್ಸ ಬಲಿ ಹಾಕಿ ಎಳೂಕೆ ನಮ್ 8 ಜನ್ರಿಗ್ ಆಯಿಲ್ಲ. ಎಳ್ದ್ ಬಲಿ ಒಳಗ್ ಕಾಂಬತ್ತಿಗೆ, ಮೀನೊಟ್ಟಿಗೆ ಇಂತಾ ದೊಡ್ಡ್ ಒಂದ್ ಮರನ್ ತುಂಡ್.

CUT TO:

ಹಡಗು ದಡಕ್ಕೆ ಬಂದಿದೆ. ಮೀನುಗಳನ್ನು unload ಮಾಡಲಾಗುತ್ತಿದೆ. ಬಾಲು ಹಾಗು ಇನ್ನೊಬ್ಬ ಆ ಮರದ ತುಂಡನ್ನು ಎತ್ತಿಕೊಂಡು ಬಂದು ಹೊರಗಡೆ ಇಡುವರು. Camera ಮರದ ತುಂಡಿನ ಕಡೆ ಚಲಿಸುತ್ತದೆ. ಸ್ವಲ್ಪ ಹೊತ್ತಿನ ನಂತರ ರಾತ್ರಿಯಾಗುತ್ತದೆ. Same shot, background ಬದಲಾಗುತ್ತದೆ.

ಬಾಲು (VOICE OVER)
ನಾವ್ ಬಪ್ಪತ್ತಿಗ್ ಅದನ್ನ ಬಂದರಿಗ್ ತೆಕಬಂತ್. ಉಳ್ದರ್ ಎಲ್ಲ ಅದನ್ ಬಿಸಾಕ್ವ ಅಂದ್ರ್. ಆರೆ, ನಂಗ್ ಮಾತ್ರ ಅದನ್ ಬಿಡುಕ್ ಮನ್ಸೇ ಆಯಿಲ್ಲಾ...

CUT TO:

EXT. NIGHT: SHARADHA'S HOUSE

Camera ಹಿಂದಕ್ಕೆ ಬರುತ್ತದೆ. ಎದುರುಗಡೆ ಶಾರದಾಳ ಮನೆ. ನಿಧಾನವಾಗಿ ಅವಳಮನೆಯ ಒಳಗೆ ಹೋದರೆ, ಅಲ್ಲಿ ಅವಳ ಅಣ್ಣ ಬಾಲು ಮಲಗಿರುತ್ತಾನೆ. ಕಾಗೆಯ ಸದ್ದು ಪ್ರಾರಂಭವಾಗುತದೆ. ಬಾಲು ಆ ಶಬ್ದದಿಂದ ಕಿರಿಕಿರಿಯಾಗಿ ತಟ್ಟನೆ ಎದ್ದು ಹೊರ ಬರುವನು. ಕೂಗುತ್ತಿರುವ ಕಾಗೆಯನ್ನು ತನ್ನ ಕೈ ಬೀಸಿ ಓಡಿಸಲು ಪ್ರಯತ್ನಿಸುವನು, ಆದರೆ ಆ ಕಾಗೆ ಅಲ್ಲಾಡುವುದಿಲ್ಲ. ಅದು ಹೋಗದೆ ಇದ್ದಾಗ ಬಾಲು ಅಲ್ಲಿರುವ ಮರದ ದಿಮ್ಮಿಯನ್ನು ನೋಡುವನು.

ಬಾಲು (VOICE)
ಆ ರಾತ್ರಿ ಕಾಕಿ ಮರ್ಲಹಿಡ್ದಗ್ ಕೂಗ್ತಿತ್... ನಾನ್ ಅದನ್ನ ಎಷ್ಟ್ ಓಡ್ಸ್ರೂ ಅದ್ ಹೊಯಿಲೇ ಇಲ್ಲ... ನಂಗ್ ಕಡಿಕ್ ಗುತಾಯಿತ್... ಆ ಕಾಕಿ ಸಮುದ್ರದಿಂದ ನನ್ನ ಬೆನ್ನಟ್ ಬಂದಿತ್ ಅಂದೇಳಿ... ಅದ್ ಕೂಗುದ್ ನಿಲ್ಲಿಸ್ಲೇ ಇಲ್ಲ. ಅದರ್ ಕಣ್ಣ್ ಆ ಮರದ್ ತುಂಡಿನ್ ಮೇಲೆ ಇದ್ದಿತ್..

ಬಾಲುವಿಗೆ ತಟ್ಟನೆ ಏನೋ ಅರಿವಾಗುತ್ತದೆ. ಅವನು ಹಿಂದೆ ತಿರುಗಿ ಕಾಗೆಯನ್ನು ನೋಡುತ್ತಾನೆ. ಕಾಗೆಯ ಕಣ್ಣು ಮರದ ದಿಮ್ಮಿಯ ಮೇಲಿದೆ. ಕೆರಳಿದ ಬಾಲು ಒಮ್ಮೆಲೆ ಹೋಗಿ ಆ ದಿಮ್ಮಿಯನ್ನು ಎತ್ತಲು ಪ್ರಯತ್ನಿಸುವನು. ಅದು ಬಹಳ ಭಾರವಿರುತ್ತದೆ. ಕಷ್ಟಪಟ್ಟು ತನ್ನ ತಲೆಯ ಮೇಲೆತ್ತಿ ಕಾಗೆಯನ್ನು ನೋಡುವನು. ಕಾಗೆ ಕೂಗುವುದನ್ನು ನಿಲ್ಲಿಸಿ ಇವನ ಕಡೆಯೇ ನೋಡುತ್ತದೆ. ನಂತರ ಇಬ್ಬರು ಸ್ವಲ್ಪಹೊತ್ತು ಮೌನವಗುತ್ತಾರೆ. ಕಾಗೆ ಮೌನ ಮುರಿದು ಒಮ್ಮೆ ಕಾ... ಎಂದು ಕೂಗುತದೆ. ಆಗ ಬಾಲು ಜೋರಾಗಿ ಕಿರುಚುತ್ತ, ಆ ದಿಮ್ಮಿಯನ್ನು ಕಾಗೆಯ ಕಡೆಗೆ ಎಸೆಯುವನು. ರಬಸಕ್ಕೆ ದಿಮ್ಮಿ ಸ್ವಲ್ಪ ದೂರದಲ್ಲಿ ಬೀಳುತದೆ. ಬಾಲು ಆ ದಿಮ್ಮಿಯನ್ನು ಕಂಡು ಆಶ್ಚರ್ಯಚಕಿತನಾಗುತ್ತಾನೆ. ನಿಧಾನವಾಗಿ ಅದರ ಬಳಿ ಹೋಗುವನು. ಅದರಿಂದ ಒಂದು ಸ್ವರ್ಣ ಬೇಳಕು (golden light) ಇವನ ಮುಖವನ್ನು ಆವರಿಸುತ್ತದೆ

ಬಾಲು (VOICE)
ನಂಗ್ ಸಿಟ್ಟ್ ತಡುಕ್ ಆಯಿದೆ, ಆ ಮರದ್ ತುಂಡನ್ನಾ ಕಾಕಿ ಬದಿಗ್ ಬಿಸಾಕ್ದೆ... ಆ ಮರನ್ ತುಂಡ್ ಒಡ್ದ್ ಎರಡ್ ಚೂರ್! ಚೂರ್ ಆರ್ ಕೂಡ್ಲೆ ಎಂತ ಕಾಂಬದ್! ನನ್ ಜೀವಮಾನ್ದಗ್ ಕಂಡದ್ರಗೆ, ಎಗಳು ಇಷ್ಟ್ ಚಂದು ಇದ್ದದನ್ನ ಕಾಣ್ಲ. ಚಿನ್ನ...

ಚೆನ್ನದ್ ಕಂಡಗ್ ಪಳ ಪಳಾ ಅಂತಿತ್.

CUT TO:

EXT. DAY: JODRASTE / BUS STAND

ಬಾಲು ಗಾಡವಾದ ಯೋಚನೆಯಲ್ಲಿರುವನು. ತಟ್ಟನೆ ಎಚ್ಚೆತ್ತು ರೆಜಿನಾಳನ್ನು ಕಂಡು

ಬಾಲು
ಅದ್ ಭೈಂಕರ ಬೆಲಿ ಬಾಳತ್ ಅಂಬ್ರ್ ಗುತಿತ? ನಮ್ ದೇಶದಗ್ ಅಲ್ಲಾ, ಹೊರ್ ದೇಶದಗೆಲ್ಲಾ ಬಳ ಡಿಮಾಂಡ್ ಇತ್ ಅಂಬ್ರ್. ಅವ್ರ್ ಎಷ್ಟ್ ಕೊಡುಕ್ ರೆಡಿ ಇದ್ದಿರ್ ಗುತೀತಾ? ಲಕ್ಷ... ಕೋಟಿ... ಲೆಕ್ಕ ಮಾಡುಕ್ ಆತಿಲ್ಲಾ, ಅಷ್ಟ್ ದುಡ್ಡ್. ಅದ್ ಸುಮಾರ್ ವರ್ಷ ಹಳತೇ. ಅದ್ ಬೇರೆ ಎಲ್ಲು ಸಿಕ್ಕುದಿಲ್ಲ. ಸಮುದ್ರದ್ ಆಳದಗ್ ಮಾತ್ರ ಸಿಕ್ಕುದ್.

ರೆಜಿನ ಇವನ ಮಾತು ನಂಬಬಹುದಾ ಎನ್ನುವ ಅನುಮಾನದಲ್ಲಿ

ರೆಜಿನ
ಇವಾಗ್ ಅದು ಎಲ್ಲಿದೆ?

ಬಾಲು ಸ್ವಲ್ಪ ಹೊತ್ತು ಯೋಚಿಸಿ

ಬಾಲು
ಅದ್ ಸಿಕ್ರ್ ಕೂಡ್ಲೆ, ಒಬ್ಬ ಬೊಂಬಾಯನ್ ಕಂಡ್ ಮಾರಿಬಿಟ್ಟೆ. ಆ ಬೋಳಿಮಗ ಹತ್ ಸಾವ್ರ ಆಡ್ವನ್ಸ್ ಕೊಟ್ಕಂಡ್ ಉಳದ್ ಮಾಲ್ರ್ ಮೇಲ್ ಪಿಪ್ಟಿ ಪಿಪ್ಟಿ deal ಅಂದ. ಆರೆ ಕಡಿಕ್ ಅಂವ ನಂಗ್ ಫೋನ್ ಮಾಡ್ಕಂಡ್ ಯಾರೋ ಹಾರ್ಸ್ಕ್ಯಾ ಹೋರ್ ಅನ್ಲಕ್ಕ? ಅದೆಲ್ಲಾ ನಂಗೆಂತಕೆ? ಹಾರ್ಸ್ಕೊಂಡ್ ಹೋರೆ, ಹಾರ್ಸ್ಕೊಂಡ್ ಹೊದನ್ ಹಿಡಿ, ನಂಗ್ ನನ್ ದುಡ್ಕೊಡ್ ಅಂದೆ. ಆತಿಲ್ಲಾ ಅಂದ. ಅದ್ ವಾಪಾಸ್ ಸಿಕ್ವಲೊರಿಗೆ ಅವನಿಗ್ ದುಡ್ಡಕೊಡುಕ್ ಆತಿಲ್ಲಾ ಅಂಬ್ರ್. ಇಗ ನೀವೆ ಹೇಳಿ? ಇಷ್ಟಪ್ಪ ದುಡ್ಡಿನ್ ವಿಷಯದಗೆ ಇವ್ರನ್ನೆಲ್ಲ ನಂಬುಕಾತ್ತ?

ರೆಜಿನಾಳ ಕಿವಿಯ ಹತ್ತಿರ ಬಂದು ಗುಟ್ಟುಹೇಳುವಹಾಗೆ

ಬಾಲು (WHISPERING)
ಈ ಶಂಕರ್ ಪೂಜಾರಿಯು ಅದ್ರ ಹಿಂದ್ ಬಿದ್ದಿದಾ, ಗುತೀತ? ಬಾಂಬೆಯಗ್ ಎಲ್ಲಿಗ್ ಕಳ್ಸಿದೆ ಅಂದೆಳಿ ತಿಳ್ಕಂಬಕೆ ಅಂವ ಹಡ್ಬಿ ರಿಚ್ಚಿನ್ ನನ್ ಹಿಂದ್ ಬಿಟ್ಟ.

ರೆಜಿನಾ (WHISPERING)
ಆದ್ರೆ ಶಂಕರ್ ಪೂಜಾರಿಯವರು ಹೇಳಿದ್ರು...

ಬಾಲು
ಅವನ್ ಮೀನ್ನ ಕದ್ ಮಾರ್ತಿದ್ದೆ ಅಂದ್ನಾ? (ಮನಸ್ಸಿನಲ್ಲಿಯೇ) ಬೋಳಿ ಮಗಾ. ಊರಿಗ್ ಉಪ್ದೇಶ ಮಾಡ್ತನ್, ಓಲಿಗ್ ಉಚ್ಚೆ ಹೊಯ್ದು ಅಂಬ್ರ್... (ನಿಧಾನವಾಗಿ ಅವಳಿಗೆ) ಈ ಶಂಕರ್ ಪೂಜಾರಿಗೆ ಬೊಂಬಾಯಗ್ ಒಳ್ಳೆ ಲಿಂಕ್ ಇತ್. ಅವ್ನಾ ಯಾವ್ ವಿಷಯದಗು ನಂಬುಕಾತಿಲ್ಲ.

ಮಾತನಾಡುತ್ತಿದ್ದಂತೆಯೇ ಕಾಗೆಯ ಶಬ್ದ ಜೋರಾಗಿ ಕೇಳುತ್ತದೆ. ಅವನಿಗೆ ಹಿಂಸೆ ತಡೆಯಲಾಗದೆ ತನ್ನೆರಡು ಕಿವಿಯನ್ನ ಮುಚ್ಚಿಕೊಂಡು

ಬಾಲು
ಆ... ಈ ಕಾಕಿ ಒಂದ್... ಹೆಣರಂಡಿದ್ ನಿಲ್ಸುದಿಲ್ಲಿಯಲೇ...

ಇವತ್ತ್ ನಾನ್ ಅದನ್ನ ಕೊಂದೇ ತೀರ್ತರ್ತೆ...

ಎಂದು frame out ಆಗುವನು

CUT TO:

INSERT ರೆಜಿನಾಳ ಮನೆಯ ಅಡುಗೆ ಮನೆಯ ಕಿಟಕಿಯ ಬಳಿ ಇರುವ ಕಾಗೆ. ರೆಜಿನಾ voice recorderಅನ್ನು pause ಮಾಡುವಳು. ತನ್ನ ಕೈಯಲ್ಲಿರುವ juiceನ last sipಅನ್ನು ಕುಡಿದು ಅಡುಗೆ ಮನೆಯಿಂದ ಹೊರಬರುವಳು.

ಉಯ್ಯಾಲೆಯ ಮೇಲೆ ಕೂತು cardboardನಲ್ಲಿ ಹೊಸ ಹಾಳೆಯನ್ನು ಇಟ್ಟು ಅದರ ಮೇಲೆ 'Chapter 5: Ka' ಎಂದು ಬರೆಯುವಳು

CUT TO:

EXT. NIGHT: MALPE SCHOOL

Split screen. ಎರಡು screen ಬಳಿಯು ಎರಡು glassಗಳಿವೆ. ಒಂದನೆ glassನಲ್ಲಿ 60ml whisky ಬಂದು ಬೀಳುತ್ತದೆ. ಇನ್ನೊಂದು glass ತುಂಬುವಷ್ಟು whisky ಬೀಳುತ್ತದೆ. 60ml ಹಾಕಿರುವ whisky glassಗೆ, ತುಂಬುವಷ್ಟು ನೀರು ಬೀಳುತ್ತದೆ. ತುಂಬಿರುವ whisky glassಗೆ ಸ್ವಲ್ಪ ನೀರನ್ನು ಸಿಂಪಡಿಸುವರು. ಎರಡೂ glassಅನ್ನು ಎರಡು ಕೈ ಬಂದು ಎತ್ತಿಕೊಳ್ಳುತ್ತದೆ. Close shot of ಬಾಲು ಹಾಗು ಮುನ್ನ, split screenನಲ್ಲಿ ಕುಡಿಯುತ್ತಾರೆ. ಅಲ್ಲಿ ಒಂದು ಕಡೆ ಕಾಗೆ ಕಿರುಚುತ್ತದೆ. **'ಭಾಗ ೫: ಕಾ'** ಎಂದು ಹೆಸರು ತೆರೆಯ ಮೇಲೆ ಬರುತ್ತದೆ.

CUT TO:

Split on ಕಾಗೆ ಹಾಗು ಬಾಲು ಮತ್ತು ಅವನ gestures.

ಬಾಲು

ಸತ್ತಿಕು ಹೇಳ್ತೆ, ನಾವ್ ಈ ಬೆಚ್ಚಪ್ಪಂಗೆ ಏನ್ ಮರೆದಿ ಕೋಡ್ಕಿದ್ದಿತ್, ಅದನ್ನ ಕೊಡ್ಲಾ. ನಮ್ ಬೆಚ್ಚಪ್ಪ, ರಾತ್ರಿ ಹಗ್ಲ ಅಂದೆಳಿ ಕಾಣದೆ, ಈ ಕಾಕಿ ಮಾತ್ರ ಅಲ್ಲಾ... ನಾಯಿ, ನರಿ, ಹಂದಿ, ಎಲ್ಲದ್ರಿಂದು ಕಾಪಾಡ್ತ... ಆರೆ ನಾವ್ ಅಂವನಿಗ್ ಎಂತ ಮಾಡಿತಂದೆಳಿ ಬೇಕಲೆ? ಸುಟ್ಕ ತಿಂಬ್ಕ್ ಒಂದ್ ಪ್ರಸಂಗು ಇಲ್ಲ...

Wide shot, ಮುನ್ನ ಹಾಗು ಬಾಲು ಇಬ್ಬರು ಕುಡಿದ ಗ್ಲಾಸನ್ನು ಕೆಳಗಿಡುವರು

ಬಾಲು

ನನ್ ಕೇಂಡ್ರೆ ಇವ್ನ್ ಹೆಸ್ರಗೆ ಒಂದ್ ಯಕ್ಷಗಾನ ಪ್ರಸಂಗ್ವೆ ಮಾಡ್ಕ್. ಬೆಚ್ಚಪ್ಪನ ಮಹಿಮೆ... ಹ್ಯಾಂಗೆ? ಅವ್ನ್ ವಾಲಿಕಳುಕೆ... ಕೃಷ್ಣ ಅಜರ್ಜುನ ಕಾಳ್ಗಾ ಅಂಬ್ರ್, ಬೀಷ್ಮ್ ವಿಜಯ ಅಂಬ್ರ್. ಈ ಕೃಷ್,ಣ ಅಜರ್ಜುನ ಅಥವಾ ಬೀಷ್ಮ, ಯಾರಾರು ಬಂದ್ ಈ ಕಾಕಿಯಿಂದ ನಮ್ಮನ್ ಉಳ್ಸಿರಾ? ಇಲ್ಲಪ್ಪ. ಇವ್ರಿಗ್ ಮತ್ತ್ ಹರುಕ ಪ್ರಸಂಗ? ಆರೆ ನಮ್ಮ್ ಬೆಚ್ಚಪ್ಪ ನಮ್ಮೊಟ್ಟಿಗ್ ಯಾವತ್ತು ಇದ್ದ.

ಇಬ್ಬರು ಇನ್ನೋಂದು ಪೆಗ್ ಹಾಕಿಕೊಂಡು ಕುಡಿಯಲು ಪ್ರಾರಂಭಿಸುವರು

ಬಾಲು

ಏಯ್ ನಿಮ್ ಬದಿ ಬೆಚ್ಚಪನ್ನ ಎಂತ ಅಂದೇಳಿ ಕರಿತ್ರಿಯಾ?

ಮುನ್ನಾ

ಬೆದರು ಗೊಂಬೆ...

ಬಾಲು

ಆಹಾ... ರೂಪ ಒಂದೆ ನಾಮ ಹಲವು.

ಅವರ ಹಿಂದೆ ಹುಲಿಗಳಿಗೆ painting ನಡೆಯುತ್ತಿರುತ್ತದೆ. ಒಬ್ಬ painter ಬಂದು ಬಾಲುವನ್ನು

PAINTER3
ಹ್ವಾ, ಬಾಲ್ವಾ ಒಳಗ್ ಬಾರಾ. ಕೆಳ್ಗ್ paint ಮಾಡ್ವೋ.

ಬಾಲು ಹಿಂದೆ ನೋಡುತ್ತಾ...

ಬಾಲು
ಕೆಳಗ್ ಎಲ್ಲ್, ನನ್ ಸಾಮನಿಗನ? ಒಂದ್ನಿಮಿಷ ಇರ್ ಮಾರೆಯ,
ತಲಿತಿನ್ಬೇಡೆ. ಉಳ್ದರದ್ ಮುಗ್ಸ್ಕೊ...

PAINTER3
ಉಳ್ದರದ್ದೆಲ್ಲಾ ಆತಾ ಬಂತ್ ಮರಾಯ...

ಎಂದು ಅವನು ಅಲ್ಲಿಂದ ಹೋಗುವನು. ಬಾಲು ಅದನ್ನು ಲೆಕ್ಕಿಸದೆ

ಬಾಲು
ಬೆದರು ಗೊಂಬೆ... ಹೆಸ್ರ್ ಬಾಳ ಸಾದಾರ್ಣ ಆಯಿತ್
ಅಂಬಗಿಲ್ವಾನ? ಎಂತಾರು strooonnggg ಹೆಸ್್ರ
ಕೊಡ್ಕಿದ್ದಿತ್... ಕ್ರಾಂತಿವೀರ... ಮಹಾ ಪ್ರಚಂಡ...
ಬೆದರುಗೊಂಬೆ ಕೇಂಬ್ಕೆ ಖಡಕ್ಕ್ ಇಲ್ಲ. ಸತ್ತಿಕಾರು ಹೇಳ್ತೆ, ನಿಮ್ಗ್
ಗಟ್ಟದ್ ಮೇಲಿನರಿಗೆ ಹೇಸ್ರಿಡುಕೆ ಬತ್ತಿಲ್ಲ.

ಮುನ್ನಾ
ತಲ್ ಕೆಟ್ಟದೇನ್ಲಾ... ಬೆದರ್ ಗೊಂಬೆನ, ಬೆದರ್ ಗೋಂಬೆ
ಅಂತ್ ಕರಿದೆ ಇನ್ನೇನ್ಲಾ ಕರಿಯಕ್ ಆಯ್ತದೆ?

ಬಾಲು ಇನ್ನೋಮ್ಮೆ ಎಣ್ಣೆಯನ್ನು ಎರಡು ಗ್ಲಾಸಿಗೆ ಹಾಕಿ ಕುಡಿದು ಕಾಲಿ ಮಾಡುವನು

ಬಾಲು
(ಮುನ್ನನಿಗೆ) ಹ್ವಾ... ಹಂಗಾರ್ ನಮ್ಮ್ ಬೆಚ್ಚಪ್ಪನ್ ಅಂದ್ರೆ
ಅಷ್ಟ್ ಸಸಾರ್ವನ ನಿಂಗೆ? ಆ ಬೇವರ್ಸಿ ಕಾಕಿ ಎಷ್ಟದಿನದ್ ನಿದ್ರಿ
ಹಾಳ್ಮಾಡಿತ್ ಗುತೀತಾ? ಒಂದ್ ವಾರ ಇಡಿ ನಂಗ್ ಮನಿಕಂಬಕ್
ಬಿಡಲ್ಲಾ. ಎಷ್ಟ್ ಬೆಸರ್ಸುಕ್ ಕಂಡ್ರು ಹ್ವಾತಿಲ್ಲಾ ಅಂತೆ. ಕಡೀಕ್
ನಾ ಗೆದ್ದಿಯಗ್ ಹೋಯಿ ಬೆಚ್ಚಪ್ಪನ್ ಬುಡ್ದಗೆ settle
ಆಯಿಬಿಟ್ಟೆ..

CUT TO

INSERT ಬಾಲು ಗದ್ದೆಯಬಳಿ ಬಿದಿರು ಗೋಂಬೆಯ ಪಕ್ಕದಲ್ಲಿ ಮಲಗಿರುವುದು ಹಾಗು ಇನ್ನಷ್ಟು ದೃಶ್ಯಗಳು

ಬಾಲು (VOICE OVER )
ನಾಕ್ ದಿನ... ನಾಕ್ ದಿನ... ನಾನ್ ಅವ್ನ್ ಬದಿಯಗೆ ಚಾಪಿ
ಹಾಯಿಕಂಡ್ ಮನಿಕಂಡಿದೆ. ಅವ್ನ ಪಕ್ಕದಗೆ ಊಟ, ಅವ್ನ್
ಪಕ್ಕದಗೆ ಸ್ನಾನ, ಅವ್ನ ಪಕ್ಕದಗೆ ಮಲ ಮೂತ್ರ... ಒಳ್ಳೆ
ನಿದ್ರೆ. ನಾಕ್ನೆ ರಾತ್ರಿ ಬೆಚ್ಚಪ್ಪ ನನ್ನ್ ಕನ್ಸಗ್ ಬಂದ್ ಹೇಳ್ದಾ.
ಹೋಗುಮಗನೆ, ನನ್ನ ಅಭಯ ಹಸ್ತ ಸದಾ ನಿನ್ನ ಮೇಲಿದೆ.
ಹೋಗಿ ನನ್ನ್ ಮಹಿಮೆಯನ್ನು ಲೋಕಕ್ಕೆ ತಿಳಿಸು. ನಿನಗೆ
ಎಣಿಸಲಾಗದಷ್ಟು ಹಣ ಬರುವಂತೆ ನಾನು ಮಾಡುತ್ತೇನೆ.

CUT TO:

ಬಾಲು ಮತ್ತು ಮುನ್ನ ನೆಲದ ಮೇಲೆ ಹಿಂದಿನ ಹಾಗೆ ಕೂತಿದ್ದಾರೆ

ಬಾಲು

ಕಡೀಕ್ ಅಲ್ಲಿಂದ ಹೊರಟೆ. ಈ ಕಾಕಿ ಆ ನಾಕ್ ದಿನ ನನ್ನ
ಬದಿಗ್ ಸುಳಿಲ್ಲಾ ಕಾಣ್. ಸತ್ತಿಕಾರು ಹೇಳ್ತೆ, ಈ ಕಾಕಿಗಳ್
ಬೇಚ್ಚಪ್ಪನ್ ಕಂಡ್ರೆ ಹೆದ್ರಿ ಸಾಯಿತೊ. ನನ್ನ್ ಕೈಗೆ ದುಡ್ ಬರ್ಲಿ
ಹೇಳ್ತ್ ನಾ... ಅವ್ನ್ ಹೆಸ್ರುಗೊಂದ್ ಪ್ರಸಂಗ ಮಾಡಿ ಅವ್ನ್
ಮಹಿಮೆನ ಇಡಿ ಊರಿಗೆಲ್ಲ ಸಾತರ್ತೆ.

ಮುನ್ನ

ಅಲ್ಲಾ... ಯಾವ್ದೋ ಕನ್ಸ್ ಬಿತ್ತು ಅಂದ್ಬಿಟ್ಟೂ, ಬೆದರ್ ಗೊಂಬೆನ
ವಲ್ಡಾಗ್ ಇಡ್ದೆ ದೇವಸ್ಥಾನದ್ ತಾಕ್ ಇಡ್ತಿನಿ ಅಂತೇಳ್ತಿಯಲ್ಲಾ,
ನಿಂಗ್ ಏನ್ ಎಳ್ಳಿ...

ಬಾಲು

ನಿಮ್ಮದ್ ಬರೀ ಇದೇ ಆಯ್ ಅಕಾ... ಸತ್ತಿಕಾರು ಹೇಳ್ತೆ, ನಿವ್
ಗಟ್ಟದ್ ಮೇಲಿನರ್ ಯಾರನ್ನೊ ನಂಬುದಿಲ್ಲ

ಬಾಲು ತನ್ನ ಜೇಬಿನಲ್ಲಿ ಏನನ್ನೋ ಹುಡುಕುತ್ತ, ಒಂದು ಚೀಟಿಯನ್ನು ತೆಗೆದು ನೋಡಿ ಅದನ್ನು ಮುನ್ನನಿಗೆ ಕೊಡುತ್ತಾನೆ. ಮುನ್ನ ಅದನ್ನ ನೋಡಿದಾಗ, ಅದರಲ್ಲಿ 'ಮಾಸರ್ಸೆಲ್ಲಸ್ ವೆಲ್ಲೆಸ್' ಎಂದು ಬರೆದಿರುತ್ತದೆ. ಬಾಲು ಚೀಟಿಯ ಕಡೆ ತೋರಿಸುತ್ತ

ಬಾಲು

ಫೋರಿನ್ ಅಂವ. ಅವನೆ ಅದನ್ ತೆಕ್ಕಂತಿಪ್ಪುದ್. ಭಯಂಕರ
ದುಡ್ಡಿನ್ ಪಾರ್ಟಿಯ. ಕೋಟಿಗಟ್ಲೆ ಕೊಡಕ್ ರೆಡಿ ಇದ್ದ ಅಂವ.

ಬಾಲು ತನ್ನ glassಗೆ ಕೊನೆಯ ಬಾರಿ whisky ಹಾಕಿ ಅದನ್ನು ಒಂದೇ ಉಸಿರಲ್ಲಿ ಕುಡಿದು ಮುಗಿಸುತ್ತಾನೆ.

ಬಾಲು

ಬಂಗಿ ಎಳಿತಿಯನ?

ಬಾಲು ಗಾಂಜಾದ ಪ್ಯಾಕನ್ನು ತೆಗೆದು, ಅದರಲ್ಲಿ ಅರ್ದ ತೆಗೆದು ಬೀಡಿಯ ಎಲೆಯೊಳಗೆ ತುಂಬಿಸಿ, ಬಾಲು ಮೂರು drag ಎಳೆದು ಮುನ್ನನಿಗೆ ಕೊಡುವನು. ಮುನ್ನ ಒಂದು drag ಎಳೆದು ಕೊಟ್ಟಾಗ

ಬಾಲು

ಇನ್ನೋಂದೆರಡ್ ಧಮ್ಮ್ ಎಳಿಯಾ...

ಮುನ್ನಾ

ಏಯ್ ಬ್ಯಾಡಪ್ಪೋ... ನಂಗ್ ನಶೆ ತಲೆಗ್ ಏರ್ಬಿಟ್ರೆ ನಾನ್
ಏನ್ ಮಾಡ್ತಿನಿ ಅಂತಾನೆ ಗೊತ್ತಾಗಕಿಲ್ಲ.

ಮುನ್ನ cigaretteಅನ್ನು ಬಾಲುಗೆ ಕೊಡುತ್ತಾನೆ. ಬಾಲು, drag ಎಳೆಯುತ್ತ

ಬಾಲು

ಕೋಟಿ ಅಂದ್ರೆ ಎಷ್ಟು ದುಡ್ಡ್ ಆತ್ ಮಾರ್ರೆ? ನಿಂಗ್, ಕೋಟಿಗ್
ಸೊನ್ನೆ ಎಷ್ಟ್ ಗೊತಿತ್ತಾ? ನೀ ಕಾಣ್ ಬೇಕಾರೆ. ಬೆಚ್ಚಪ್ಪನ್
ಮಾತ್ ಸುಳ್ಳ್ ಆತಿಲ್ಲ

ಎಂದು ಹೇಳಿ ಮುನ್ನನ ಕಡೆ ನೋಡಿದಾಗ, ಮುನ್ನ ತನ್ನ ಕಣ್ಣು ಮುಚ್ಚೆ feelingನಲ್ಲಿ ಇದ್ದಾನೆ

ಬಾಲು

ಅಯ್ಯೊ ನಿನ್ ವಾಲಿ ಕಳೂಕೆ. ನನ್ ಎದ್ರಿಗೆ, ನನ್ ತಂಗಿ ಬಗ್ಗೆ
ಕನ್ಸ್ ಕಾಂತಿಯನ?

ಮುನ್ನನಿಗೆ ಹೇಗೆ ಪ್ರತಿಕ್ರಹಿಸುವುದು ಎಂದು ತಿಳಿಯದೆ ಅಲ್ಲಿಂದ ಎದ್ದು ಹೋಗುವನು. ಬಾಲು, ಅವನು ಹೋಗುತ್ತಿರುವುದನ್ನು ನೋಡುತ್ತ

ಬಾಲು
ಸತ್ತಿಕಾರು ಹೇಳ್ತೆ, ಈ ಗಟ್ಟದ್ ಮೇಲಿನರಿಗೆ ಒಂಚೂರು
control ಇಲ್ಲ.

ಬಾಲು ಉಳಿದಿರುವ ಗಾಂಜಾವನ್ನು ಮುಗಿಸುವನು. ಕಾಗೆ ಕೂಗುವ ಶಬ್ದ ಕೇಳುತ್ತದೆ. ಬಾಲು ಕಾಗೆಯನ್ನು ನೋಡುವನು

CUT TO:

INT. NIGHT: MALPE SCHOOL

ಒಂದು ಹಳೆಯ ಶಾಲೆಯ ಕೋಣೆಯಲ್ಲಿ ಹುಲಿ ವೇಷಧಾರಿಗಳಿಗೆ ಬಣ್ಣ ಬಳಿಯಲಾಗುತ್ತಿದೆ. ಕೆಲವೊಂದು ಹುಲಿವೇಷಧಾರಿಗಳು ಅರ್ಧ ಮೈಗೆ ಬಣ್ಣ ಬಳಿಸಿಕೊಂಡು, ಬಣ್ಣ ಒಣಗಲು ಕಾಯುತ್ತ ಅಲ್ಲಿ ಇಲ್ಲಿ ಓಡಾಡುತ್ತಿದ್ದಾರೆ. Painter ನಾರಾಯಣ ಬಾಲುಗೆ ಬಣ್ಣ ಬಳಿಯುತ್ತಿದ್ದಾನೆ.

ನಾರಾಯಣ
ಕಂಬ್ಳದ ಎತ್ತಿಗೆ ಲಗಾಮ್ ಹಾಕಿ ಎಳೆದ್ರೇ, ಎತ್ತು ಹೋ ಅಂತ
ಓಡದಲ್ವ. ಹುಡುಗ್ರನ್ನ್ ಕಂಡ್ರೆ ಹಾಗೆ ಓಡ್ತಾಳೆ ಮಾರ್ರೆ
ಅವಳು...

ಬಾಬಣ್ಣ
ಇವ್ರಿಗೆಲ್ಲ ಅಷ್ಟು ಸುಲ್ಬಾಗ್ ಸೊಪ್ಪ್ ಹಾಕುದಿಲ್ಲ ಅವಳ್. ಅಲ್ದಿರೆ
ಎಷ್ಟ್ ಗಂಡ್ಗಳ್ tender ಹಾಕಲ್ಲ ಅವ್ಳಿಗೆ? ಒಂದು ಪಾಸ್
ಆಯಿಲ್ಲ... (Tiger1 ಅನ್ನು ಕಂಡು) ಅಲ್ದನಾ?

TIGER1
ಎಲ್ಲಿ ಜಾರಿತೋ ಮನವು?

ಎಂದು ಹೊಗೆಯಲ್ಲಿ ಮಗ್ನನಾಗುತ್ತಾನೆ.

ಬಾಬಣ್ಣ
ಕಚ್ಚೆ ಜಾರುಕಿತ್ತಾ ಹೋ... ಜಾಗ್ರತಿ

ಕೋಣೆಯ ಹೊರಗಿನಿಂದ ಕಾಗೆ ಕೂಗುವ ಸದ್ದು ಕೇಳಿಬರುತ್ತಿದೆ. ಬಾಲು ಅದನ್ನು ಗಮನಿಸಿತ್ತಿದ್ದಾನೆ. ಇಲ್ಲಿಂದ camera ಬಾಲುವಿನ ಮೇಲೆ concentrate ಮಾಡುತ್ತದೆ ಹಾಗೆ ಇತರರ ಎಲ್ಲಾ ಮಾತುಗಳು ಬರೀ backgroundನಲ್ಲಿ ನಡೆಯುತ್ತದೆ. ಕೆಲವೊಮ್ಮೆ ಕೆಲವೊಂದು shotsಗಳು ಇತರರ ಮಾತುಕತೆಯ ಮೇಲೆ ಹೊಗುವುದು

TIGER1
ಎಂತದ ನಿಂದು. ಸಮ ಮಾಡಿ ಬಣ್ಣ ಬಳಿಯ...

ಬಾಬಣ್ಣ
ಹಾಂಗಲ್ಲ ಹೇಳದ್... ಯಾರ್ಯರ್ ಕಚ್ಚೆ ಹ್ಯಾಂಗ್ಯಾಗ್ ಹರ್ದ್
ಉದ್ರಿ ಬೀಳತ್ತ್ ಅಂದೇಳಿ ಹೇಳುಕ್ಕ್ ಆತಿಲ್ಲ ಮಾರ್ರೆ...

TIGER2 (ಜೋರಾಗಿ ನಗುತ್ತ)
ಕಚ್ಚೆ ಕೇಸ್ ಸುದ್ದಿಯ?

ಬಾಲುವನ್ನು ದಾಟಿ Tiger1, ಕೋಣೆಯಿಂದ ಹೊರಗೆ ಹೋಗುವನು. ಬಾಲು foregroundನಲ್ಲಿ ಇದ್ದು, ಬಾಬಣ್ಣ Tiger1 ಕೋಣೆಯಿಂದ ಜಾರುವುದನ್ನು ವ್ಯಂಗ್ಯವಾಗಿ ಸನ್ನೆಮಾಡಿ ತೋರಿಸುತ್ತಾರೆ. Focus ಬಾಬಣ್ಣನಿಂದ ಬಾಲುಗೆ shift ಆಗುತ್ತದೆ

ಬಾಬಣ್ಣ
ಗುಂಬಳ ಕಾಯ್ ಕದ್ದದ್ ಯಾರ್ ಅಂದ್ರೆ, ಹೆಗ್ಲ್ ಮುಟ್ಕಂಡ
ಅಂಬ್ರ. ಓಡತ್ ಕಾಣ್ ಅಂವ. ಕದ್ರ್ ಮೇಲೆ ಏಗಳಿಕೂ ಸಿಕ್ಕ
ಬಿಳುಕ್ಕಾಗ್ದ...

ನಾರಾಯಣ
ಎಂತ ಕಚ್ಚೆ ಕೇಸ್?

ಬಾಬಣ್ಣ ನಗುವನು. Paint ಮಾಡುವುದನ್ನು ನಿಲ್ಲಿಸಿ

ಬಾಬಣ್ಣ
ನಾಯಿನ್ ತೆಕಂಡ್ ಹೋಯಿ ದಂಡಿಗೆ ಮೇಲ್ ಕೂರ್ಸ್ರೇ, ಹೇಲ್ ಕಂಡಲೆ ಕೆಳಗ್ ಹಾರತಂಬ್ರ್. ಊರ್ ತುಂಬಾ ಹುಲಿ ವೇಷ ಹಾಯ್ಕಂಡ್ ತಿರ್ಗ್ತಿದ್ದನಿಗೆ ಯಕ್ಷಗಾನ್ದಗೆ ವೇಷ ಹಾಕ್ ಅಂದೇಳಿ ಕರ್ಸ್ರೆ, ಇಂವ ಅಲ್ಲಿಗ್ ಹೋಯ್ ಮಾಡದ್ ಎಂತ ಗೊತ್ತಿತಾ?

ಕಾಗೆಯ ಸದ್ದು ಜೋರಾಗುತ್ತದೆ. ಬಾಲು ತಳಮಳಗೊಂಡು ಅಲುಗಾಡುವನು. ನಾರಯಣನು ಕೋಪಗೊಂಡು

ನಾರಾಯಣ (ಬಾಲುಗೆ)
ಏ ಬಾಲು. ಸಮ ನಿಂತ್ಕೊಳ...

ಬಾಲು ನೇರವಾಗಿ ನಿಲ್‌ಲವನು. ಕಾಗೆ ಕೂಗುವುದು ಕಾಣುತ್ತದೆ. ಬಾಲು ಅದನ್ನೇ ನೋಡುವನು. ಬಾಲು ಕಾಗೆ track song ಶುರುವಾಗುತ್ತದೆ.

CUT TO:

EXT. DAY: JODRASTE

ಬೆಳಗಿನ ಜಾವ ಎಲ್ಲಾ ಹುಲಿವೇಷಧಾರಿಗಳು ವೃತ್ತಾಕಾರವಾಗಿ ನಿಂತಿದ್ದಾರೆ. ಒಂದು ತೆಂಗಿನ ಕಾಯಿಯ ಮೇಲೆ ಕಪರ್ಪೂರವನ್ನು ಹಚ್ಚಲಾಗಿದೆ. ಅದನ್ನು (slow motion) ಒಡೆದಾಗ ಅಲ್ಲಿ ನಿಂತಿರುವ ಹುಲಿಗಳು ಅದರ ಬಳಿ ಓಡಿಹೋಗಿ ಕುಣಿಯಲು ಪ್ರಾರಂಭಿಸುವರು. ಎಲ್ಲ ಹುಲಿಗಳ ಬಾಯಿಯಲ್ಲಿ ನಿಂಬೆಹಣ್ಣು ಇರುತ್ತದೆ

CUT TO:

Wide shot ಕಾಲಿ ಇರುವ ಅಗಲವಾದ ರಸ್ತೆಯಲ್ಲಿ ದೂರದಲ್ಲಿ ಹುಲಿಗಳು ನಡೆದು ಕೊಂಡುಬರುತ್ತಿವೆ.

CUT TO:

ಒಂದು ಮನೆಯಲ್ಲಿ ಹುಲಿವೇಷ ಕುಣಿತ ನಡೆಯುತ್ತಿರುತ್ತದೆ. ಮಧ್ಯಯದಲ್ಲಿ ಒಂದು ತಟ್ಟೆಯನ್ನಿಟ್ಟು ಅದರಲ್ಲಿ ಹಣವನ್ನು ಇಡಲಾಗಿದೆ. ಬಾಲು ಗಾಂಜವನ್ನು ಎಳೆಯುತ್ತ ಅಲ್ಲಿಗೆ ಬಂದು ಉಳಿದ ಹುಲಿಗಳ ಜೊತೆ ಸೇರಿ ಅವನು ಕುಣಿಯಲು ಪ್ರಾರಂಭಿಸುವನು. ಬಾಲು ಕುಣಿಯುತ್ತಾ ಕುಣಿಯುತ್ತಾ, ಅವನಿಗೆ ನಶೆ ಏರುವುದು. ಆಗ ವಾದ್ಯಗಳ ಶಬ್ದ ಕಡಿಮೆಯಾಗಿ ಪುನಃ ಕಾಗೆ track ಪ್ರಾರಂಭವಾಗುತ್ತದೆ.

ಬಾಲುವಿನ ಚಿತ್ತ ಕುಣಿತದಿಂದ ಕಾಗೆಯಕಡೆಗೆ ಹೋಗುತ್ತಿದೆ. ಅವನು ಕುಣಿತದ ಕಡೆಗೆ ಗಮನಹರಿಸಲು ಪ್ರಯತ್ನಿಸುವನು ಆದರು ಅವನ ಗಮನ ಕಾಗೆಯಕಡೆಗೆ ಹೋಗುತ್ತದೆ. ಅಲ್ಲಿಂದ ಹಣತೆಗೆದುಕೊಂಡು ಎಲ್ಲಾ ಹುಲಿಗಳು ಆ ಮನೆಯಿಂದ ಹೊರಬರುವರು. ರಸ್ತೆಯಕಡೆಗೆ ಬಂದಾಗ ಅಲ್ಲಿ ಜನ ಸೇರಿರುತ್ತಾರೆ. ಹುಲಿಗಳು ಜನರ ಮುಂದೆ ಕುಣಿಯಲು ಪ್ರಾರಂಭಿಸುವರು. ಬಾಲು ಅವರೊಂದಿಗೆ ಕುಣಿಯುತ್ತಾ ಮತ್ತೆರಡು ಬಾರಿ ಕಾಗೆಯನ್ನು ನೋಡುವನು. ಕುಣಿದು ಕುಣಿದು ದಣಿವಾಗಿ ಆ ವೃತ್ತದಲ್ಲಿ ಕೂರುವನು(ಕಾಗೆ track ಮುಗಿಯುವುದು).

ಹುಲಿವೇಷದ ವಾದ್ಯ ಪ್ರಾರಂಭವಾಗುವುದು. ಸ್ವಲ್ಪಸಮಯ ಉಳಿದವರು ಕುಣಿಯುವುದನ್ನು ಬಾಲು ನೋಡುವನು. ನಂತರ ಅವನ ಜೇಬಿನಲ್ಲಿರುವ ಗಾಂಜಾವನ್ನು ಅಂಟಿಸಲು ಹೊರಬರುವನು. ಆ ಜನರಿಂದ ಹೊರಬಂದು ಗಾಂಜ ಅಂಟಿಸುತ ರಸ್ತೆಯನ್ನು ದಾಟಿ ಇನ್ನೊಂದು ಬದಿಗೆ ಹೋಗುವನು. ಕಾಗೆಯ ಕಿರುಚಾಟ ನಿಧಾನವಾಗಿ ಕೇಳುತಿದೆ. ಹುಲಿವೇಷದ ವಾದ್ಯ ಜೋರಾಗಿ ಕೇಳುತಿದೆ. Close on ಬಾಲು. ಅವನು ಇನ್ನಷ್ಟು ಗಾಂಜ ಎಳೆಯುತ್ತಿದ್ದಂತೆ ಕಾಗೆಯ ಶಬ್ದ ಜೋರಾಗುತ್ತ ಹೋಗಿ ವಾದ್ಯದ ಶಬ್ದ ಕಡಿಮೆಯಾಗುತ್ತಿದೆ. ಬಾಲು ಕಾಗೆಯ ಶಬ್ದ ಕೇಳಿ ಕುಸಿದುಹೋಗಿ ತನ್ನ ಕಿವಿಯನ್ನು ಮುಚ್ಚಿಕೊಳ್ಳುವನು. ತಡೆಯಲಾಗದೆ ಆ ಕಾಗೆಗೆ ಕಲ್ಲು ಹೊಡೆಯಲು ಪ್ರಾರಂಭಮಾಡುವನು. ಮೂರು ನಾಲ್ಕು ಕಲ್ಲು ಹೊಡೆದ ನಂತರ ಯಾರೋ ಹಿಂದಿನಿಂದ ಅವನ ತಲೆಗೆ ಹೊಡೆಯುವರು. ಅವನು ಅಲ್ಲಿಯೇ ಕುಸಿದು ಬೀಳುವನು. Camera

ನಿಧಾನವಾಗಿ top angleನಿಂದ ಅವನ ಬಳಿ ಇಳಿಯುತ್ತದೆ. ಬಾಲುವಿನ close ups. ಆಗ ಒಂದು ಕಾಲು ಬಾಲುವನ್ನು ಒದೆಯುತ್ತದೆ. ಯಾರೋ ಇಬ್ಬರು ಅವನನ್ನು autoಗೆ ಹಾಕುವರು. Backgroundನಲ್ಲಿ ರಿಚ್ಚಿಯ ಮಾತುಗಳು ನಿಧಾನವಾಗಿ ಕೇಳುತ್ತಿರುತ್ತದೆ. ಬಾಲುವಿಗೆ ಸನ್ನಿವೇಷವು ಅಸ್ಪಷ್ಟವಾಗಿ ಗೋಚರಿಸುವುದು. Auto ಅಲ್ಲಿಂದ ಹೊರಡುವುದು. ಬಾಲುವಿನ ದೃಷ್ಟಿಕೋನದಿಂದ ಕೆಲವೊಂದು traveling shots . Auto ಮಲ್ಪೆ ಹಾರ್ಬರಿಗೆ ಬರುವುದು. Gate ತೆರೆಯುತ್ತದೆ. Auto ಹಾರ್ಬರ್ ಒಳ ಹೋಗುವುದು.

CUT TO:

EXT. DAY: FISHING BOAT

ಬಾಲು ಮೀನಿನ ಬಲೆಯಲ್ಲಿರುವನು. Camera ಬಲೆಯಲ್ಲಿಯೇ ಇದೆ. ಬಾಲು ನೀರಿನ ಓಳಗೆ ಹೋಗಿ ಸ್ವಲ್ಪಹೊತ್ತಿನ ನಂತರ ಹೊರಬಂದು ಕಿರುಚುವನು. ಇದೇ ರೀತಿ ಮೂರು ನಾಲ್ಕು ಬಾರಿ ಆಗುವುದು. ನಂತರ ಬಲೆಯನ್ನು ಎತ್ತಿ ಹಡಗಿನ ಒಳಗೆ ಹಾಕುವರು. ಎದೆಲ್ಲ ನಡೆಯುವಾಗ ರಿಚ್ಚಿಯ ಮಾತುಗಳು ನಿಧಾನವಾಗಿ ಕೇಳುತ್ತಿದೆ. ಅದೆ ಹಡಗಿನ ಒಂದು ಕಂಬದ ಮೇಲೆ ಒಂದು ಕಾಗೆ ಕುಳಿತು ನೋಡುತ್ತಿದೆ. ಕಾಗೆ ಒಮ್ಮೆ ಬಾಲುವನ್ನು ನೋಡಿ ಇನ್ನೊಮ್ಮೆ ರಾಘುವಿನ ಕೈಯಲ್ಲಿರುವ bagಅನ್ನು ನೋಡುತ್ತಿದೆ. ರಿಚ್ಚಿ ಬಾಲುವಿಗೆ ಒದೆಯುತ್ತ ಏನೋ ಬಯ್ಯುತ್ತಿದ್ದಾನೆ. ಕಾಗೆ ನೋಡುತ್ತಿದೆ. ರಿಚ್ಚಿಯ ಮಾತುಗಳು ಈಗ ಸ್ಪಷ್ಟವಾಗಿ ಕೇಳುತ್ತಿದೆ ( D.A.F C.2). ಬಾಲು ಬಿದ್ದಿರುವಲ್ಲಿಂದ ರಿಚ್ಚಿಯನ್ನು ನೋಡುವನು, low angle .

ರಿಚ್ಚಿ
ಎಯ್... ಸಾಕಾಗಿಲ್ಲ... ನಮ್ಮ ಹುಲಿಗೆ ಇಷ್ಟು ಮಾತ್ರ ಸಾಕಾಗ್ತದಾ? ಇನ್ನು ಕಲಿಯುವಂತ ಪಾಠ ಸುಮಾರಿದೆ

ಅತ್ತಂಬೆ. ನನಲ ಕಲ್ಪೆರೆ ಸುಮಾರ್ ಉಂಡತಾ? ನಮ್ಮ ಹುಲಿಗೆ ಕಲಿಯುವಂತಾ ಪಾಠ ಸುಮಾರಿದೆ

ರಿಚ್ಚಿ ಅವನ gun ತೆಗೆದು, ಬಾಲುವಿನ ಬಳಿ ಇಳಿದು ಅವನ ಸೇವಂತಿಮಾಲೆಯನ್ನು ಬಾಲುವಿನ ಕತ್ತಿಗೆ ಸುತ್ತುತ್ತ

ರಿಚ್ಚಿ
ನಿನಗೆ ನಾನು ಯಾವಗಾದ್ರು Cuba ಹಾಗು ಮಾಂಡ್ವದ್ ಹುಡುಗರ ಬಗ್ಗೆ ಕಥೆ ಹೇಳಿದ್ದೇನ? ಆ Cubaದ್ ಹುಡುಗ ಮಾಂಡ್ವದ್ ಹುಡುಗನ ಮುಂದೆ ಬಂದಾಗ್ಲೆಲ್ಲಾ ನಗ್ತಾ ನಗ್ತಾ Spanish ಬಾಷೆಯಲ್ಲಿ ಬೈದದ್ದು. ಒಂದಿನ ಮಾಂಡ್ವದ್ ಹುಡುಗ Cubaದ್ ಹುಡುಗನನ್ನು ಕೆಳಗೆ ಹಾಕೊಂಕಂಡು ಅವನ ಮೂಗು ಒಡ್ ಹೋಗೋಹಾಗೆ ಹೊಡ್ದದ್ದು. ಆಮೇಲೆ ಆ Cubaದ್ ಹುಡುಗ ಬೈತಿದ್ದದ್ದಲ್ಲಾ, wish  ಮಾಡ್ತಿದ್ದದ್ದು ಅಂತ ಗೊತ್ತಾಗಿದ್ದು. ಈಗಾ, ಆ ಮಾಂಡ್ವದ್ ಹುಡುಗ Cubaದ್ ಹುಡುಗೆನ್ನ ಕೆಳಗ್ ಹಾಕ್ಕೊಂಡ್ ಡಾಣ್ ಡಾಣ್ ಡಾಣ್ ಅಂತ ಹೋಡಿತಿಬರ್ಬೇಕಾದ್ರೆ, ಈ Cubaದ್ ಹುಡುಗನ್ ತಲೆಯಲ್ಲಿ ಎಂತ ಒಡ್ತಿರ್ಬಹುದು? ನಿನ್ನನ್ನ್ ಆ ಜಾಗದಲ್ಲಿ ಹಾಕ್ಕೊಂಡ್ ನೋಡು. ಯಾರಾದ್ರು, ಎಂತಸ ಕಾರಣ ಇಲ್ದೆ ನಿನಗೆ ಹಾಗೆ ಹೊಡೆದ್ರೆ, ನಿನ್ನ್ ತಲೆಯಲ್ಲ್ಲ ಎಂತ ಓಡ್ತಹುದು? Full confusion ಆಗ್ಬಹುದಲ್ವ. ನಿಂಗೆ ಈಗ confusion ಆಗ್ತಾ ಇದ್ಯಾ? ಇಲ್ಲ. ನಿಂಗೆ confusion ಆಗ್ತಿಲ್ಲಾ

ಎಂದು ಅಲ್ಲಿಂದ ಎದ್ದು ಅವನಿಗೆ ಒದೆಯುತ್ತಾ. ಉಳಿದವರಿಗೆ

ರಿಚ್ಚಿ
ನಮ್ಮ ಹುಲಿಗೆ confusion ಆಗ್ತಾ ಇಲ್ಲ. ಯಾಕಂತ ಹೇಳಿದ್ರೆ, ನಮ್ಮ ಹುಲಿಗೆ ನಾನ್ ಎಂತಕ್ಕೆ ಹೊಡಿತಿದ್ದೇನೆ ಅಂತ ಗೊತ್ತುಂಟು.

ಎನ್ನುತ್ತ ಬಾಲುವಿಗೆ point ಮಾಡುವ gun out of frame ಹೋಗುವುದು. Fire ಆಗುವ ಶಬ್ದ ಕೇಳುವುದು. Mid to ರಿಚ್ಚಿ gunಅನ್ನು cameraದ ಪಕ್ಕಕ್ಕೆ ಹಿಡಿದಿರುವನು. gunಇಂದ ಹೊಗೆ

ಬರುತ್ತಿರುವುದು. Smile ಮಾಡಿ ಇನ್ನೆರಡು ಬಾರಿ fire ಮಾಡುವನು. ರಾಘುವಿಗೆ ಮೂರು ಬುಲೆಟ್ ಬಿದ್ದಿರುವುದು. ರಾಘು ತನ್ನ ದೇಹವನ್ನು ನೋಡಿ ನಂತರ ಗೊಂದಲದಿಂದ ರಿಚ್ಚಿಯನ್ನು ನೋಡುವನು

ರಿಚ್ಚಿ (ಕಿರುಚುತ್ತಾ)
Confusion ಆಗ್ತ ಉಂಟಲಾ? Remand home ಅಂದ್ರೆ
ಹೇಗ್ ಇರ್ತದೆ ಅಂತ ಗೊತ್ತುಂಟ ನಿಂಗೆ? ನರಕ. ೮
ವರ್ಷ... ಎಲ್ಲ ನಿನ್ನೋಸ್ಕರ. ನಾಯಿ ಸೂಳೆಮಗ್ನೆ... ನೀನ್
ಎಷ್ಟ್ ಸುಲಭವಾಗ್ ಓಡಿಹೋದೆ ಅಲಾ... ಯಾವತ್ತಾದ್ರು ನನ್
ಬಗ್ಗೆ ಯೋಚನೆ ಮಾಡಿದ್ಯಾ. ಈಗ ಸಾಯಿ...

ಹಿಂದೆ ತಿರುಗಿ ದಿನೇಶ ಹಾಗು ಸುಧಿಯನ್ನು ನೋಡುವನು. ಅವರಿಬ್ಬರು shockನಲ್ಲಿದ್ದಾರೆ. ಅವರಿಗೆ ರಿಚ್ಚಿ

ರಿಚ್ಚಿ
ಬೋಳಿಮಗನ್ನು ಕಟ್ಟಿಹಾಕಿಯ...

ಎಂದಾಗ ದಿನೇಶ ಹಾಗು ಸುಧಿ, ಇಬ್ಬರು ರಾಘುವನ್ನು ಹಗ್ಗದಿಂದ ಕಟ್ಟಿ ಅವನಿಗೊಂದು ಕಲ್ಲು ಕಟ್ಟಿ ನೀರಿಗೆ ಎಸೆಯುವರು. ರಿಚ್ಚಿ ತಿರುಗಿ ಹೆದರಿರುವ ದಿನೇಶನನ್ನು ನೋಡುವನು

ರಿಚ್ಚಿ
ನನ್ನ ಮುಖ ನೋಡ್ತಾ ಇಬರ್ಬೇಡ... bag check
ಮಾಡು...

ರಿಚ್ಚಿ ಬಾಲುವಿನ ಕಡೆ ನಡೆದುಕೊಂಡು ಬರುವಾಗ ಹಿಂದೆ ದಿನೇಶ ರಾಘುವಿನ bag ತೆರೆದು ನೋಡುವನು. Bagನಿಂದ golden light ಬರುವುದು. ದಿನೇಶ ಅದನ್ನು ನೋಡಿ ಬೆರಗಾಗುವನು. ಬಾಲು ಇದನ್ನು ನೋಡುವನು. ರಿಚ್ಚಿ ಬಾಲುವಿಗೆ (Cameraಗೆ) ಒದೆಯುವನು

CUT TO:

INSERT ರೆಜಿನಾ ಮನೆಯ ಹೊರಾಂಗಣದಲ್ಲಿ ಕುಳಿತಿದ್ದಾಳೆ. ಅವಳ ಕೈಯಲ್ಲಿ cardboard ಇರುವುದು. ಬರೆದಿರುವ ಹಾಳೆಯ ಮೇಲೆ chapter ಮುಗಿಸುವಳು.

ರೆಜಿನಾ (VOICE OVER)
ಪ್ರತಿ ಕಥೆಗೂ ಒಂದು ಕೊನೆ ಇರುತ್ತೆ, ಪ್ರತೀ ಕೊನೆಯ ಹಿಂದೆ
ಸುಮಾರು ಕಥೆಗಳಿರುತ್ತೆ. ಐದು ಕಥೆಗಳನ್ನು ಹೇಳಿದ್ದೀನಿ.
ಹೇಳಲು ಕಾರಣ? ಸಮುದ್ರದ ಅಲೆಗಳು ಎಲ್ಲವನ್ನು ಮುಟ್ಟಕ್
ಆಗಲ್ವಲ್ಲಾ.

ಅವಳ ಮನಸ್ಸಿನ ಮಾತುಗಳು ಹೇಳುತ್ತಿದ್ದಂತೆ ಅವಳು ಏನೋ ಬರೆಯುತ್ತಿದ್ದಾಳೆ. ಬರೆದಿರುವ ಹಾಳೆ ಅವಳ ಕೈಯಿಂದ ಹಾರಿ ಹೋಗುವುದು ಅದನ್ನು ಹಿಡಿಯಲು ಹಾಳೆಯ ಹಿಂದೆ ಹೋಗುವಳು. ಒಂದು ಕಡೆ ಹೋಗಿ ಆ ಹಾಳೆಯನ್ನು ಹಿಡಿಯುವಳು. ಹಿಡಿದು ಆ ಹಾಳೆಯನ್ನು ನೋಡುವಳು. ಆ ಹಾಳೆಯಮೇಲೆ Final chapter : REASONS ಎಂದು ಬರೆದಿರುವುದು. **'ಕೊನೆಯ ಭಾಗ: ನಿಮಿತ್ತ'** ಎಂದು ಪರದೆಯ ಒಂದು ಕಡೆ ಬರುವುದು

CUT TO:

EXT. DAY: MALPE HARBOR

ಹದಿನೈದು ವರ್ಷಗಳ ಹಿಂದೆ ಮಲ್ಪೆ ಹಾರ್ಬರ್ ನಲ್ಲಿ 12 ರಿಂದ 17 ವರ್ಷದ ಹುಡುಗರು ಲಗೋರಿ ಆಡುತ್ತಿರುವರು. ಸ್ವಲ್ಪ ಹೊತ್ತು ಆಟವಾಡುತ್ತಿದ್ದ ಹುಡುಗರಲ್ಲಿ, ಓರ್ವ 17 ವರ್ಷದ ಲೋಕಿ 12 ವರ್ಷದ ರಾಘುವಿಗೆ ಹೊಡೆಯುತ್ತಿರುವನು. ರಾಘು ಲೋಕಿಗೆ ಬೈಯುವನು, ಆಗ ಅವರ ಮಧ್ಯೆ ಗಲಾಟೆಯು ಜಾಸ್ತಿಯಾಗಿ ಹೊಡೆದಾಡುವರು. ಲೋಕಿ ರಾಘುವಿಗೆ ಹೊಡೆಯುತ್ತಿರುವಾಗ ಅವನಿಗೆ ಏನೋ ಅನ್ನಿಸಿ ತನ್ನ ತೋಳ ಕೆಳಗೆ ಎದೆಯ ಪಕ್ಕದಲ್ಲಿ ನೋಡುವನು. ಒಂದು ಚಾಕು ಹಾಕಿರುವ ಗಾಯದಿಂದ ರಕ್ತ ಸುರಿಯುತಿರುವುದು. ಪಕ್ಕದಲ್ಲಿ ರಿಚ್ಚಿ ತನ್ನ ಕೈಯಲ್ಲಿ ಚಾಕು ಹಿಡಿದು ನಿಂತಿದ್ದು, ಲೋಕಿ ನೆಲಕ್ಕೆ ಬೀಳುವನು. ಬಿದ್ದ ಲೋಕಿಯನ್ನು ರಾಘು ನೋಡುತ್ತಾನೆ. ನಂತರ ರಿಚ್ಚಿ ಹಾಗು ರಾಘು ಇಬ್ಬರು ಒಬ್ಬರನ್ನೊಬ್ಬರು ನೋಡಿಕೊಳ್ಳುವರು. ರಾಘು ಅಲ್ಲಿಂದ ಓಡಲು ಪ್ರಾರಂಭಿಸುವನು. ಅವನ ಹಿಂದೆ ರಿಚ್ಚಿಯು ಓಡುವನು. ಓಡುತ್ತಾ ಒಂದುಕಡೆ ರಿಚ್ಚಿ ನಿಂತು ರಾಘುವನ್ನು ಕರೆಯುವನು. ಆಗ ರಾಘು

ಓಡುವುದನ್ನು ನಿಲ್ಲಿಸುವುದಿಲ್ಲಾ. ರಿಚ್ಚಿಗೆ ರಾಘು ತನ್ನಿಂದ ದೂರ ಹೋಗುತ್ತಿರುವುದರ ಅರಿವಾಗುತ್ತದೆ.

ರಾಘು ಮಲ್ಪೆ ಹಾರ್ಬರಿಗೆ ಓಡಿಬಂದು ಒಂದು boatನಲ್ಲಿ ಅಡಗಿ ಕುಳಿತುಕೊಳ್ಳುವನು. ನಿಟ್ಟುಸಿರು ಬಿಡುತ್ತಾ ಯೋಚನಾಮಗ್ನನಾಗಿ ಕುಳಿತರಬೇಕಾದರೆ, ಆ boat ಅಲ್ಲಿಂದ ಹೊರಡುವುದು. ರಾಘು ಉಳಿದವರಿಂದ ಕಣ್ಣುತಪ್ಪಿಸಿಕೊಂಡು ಹೊರಗೆ ಬಂದುನೋಡಿದಾಗ ಹಡಗು ಮಲ್ಪೆ ಹಾರ್ಬರ್ನಿಂದ ಹೊರಬರುತಿರುತದೆ. ರಿಚ್ಚಿ ಕೈಯಲ್ಲಿ ಚಾಕುಹಿಡಿದು ಅಲ್ಲಿರುವ ಒಂದು ಕಲ್ಲಿನ ಮೇಲೆ ನಿಂತು ನೋಡುತ್ತಿರುವನು. ಅದನ್ನು ಕಂಡ ರಾಘುವಿಗೆ ಅವನ ಕಣ್ಣುಗಳನ್ನು ನೋಡಲಾಗುವುದಿಲ್ಲ.

CUT TO:

EXT. NIGHT: SHANKER POOJARY'S HOUSE

ರಿಚ್ಚಿ ಗಾಡವಾದ ಯೋಚನೆಯಲ್ಲಿದ್ದಾನೆ. ತನ್ನ ಹದಿನೈದು ವರ್ಷದ ಸೇಡು ತೀರಿದರು ಅವನು ಅಸಮದಾನದಿಂದ ಕುಳಿತಿದ್ದಾನೆ. ಹುಲಿ ವೇಷದ ಇನ್ನೊಂದು ತಂಡ ಶಂಕರ್ ಪೂಜಾರಿಯ ಮನೆಯ ಅಂಗಳದಲ್ಲಿ ವೃತ್ತಾಕಾರದಲ್ಲಿ ಕುಳಿತಿರುವರು...

CUT TO:

EXT. NIGHT: MALPE BEACH

ಸೂಯರ್ಯಾಸಮದ ವೇಳೆ, ಮುನ್ನ, beachನಲ್ಲಿ ಕೂತಿದ್ದಾನೆ. ಅವನ ಮುಂದೆ, ರಿಚ್ಚಿ ಹಾಗು ಅವನ ಸ್ನೇಹಿತರು, ಹಿಂದಿನ ರಾತ್ರಿಯ, ಆರಿಹೋಗಿರುವ campfire ಇರುತ್ತದೆ. Beachಅನ್ನು ನೋಡುತ್ತ ಕುಳಿತಿರುವ ಮುನ್ನನಿಗೆ, ಅಲ್ಲೊಂದು role ಆಗಿರುವ ಗಾಂಜ ಕಾಣುತ್ತದೆ. ಅದನ್ನು ತೆಗೆದು ಮೂಸಿ ನೋಡುತ್ತಾನೆ. ಅದನ್ನು ಅಂಟಿಸಿಕೊಂಡು ಒಂದು drag ಎಳೆಯುತ್ತಾನೆ. ಆಗ ಅವನಿಗೆ ದಿನೇಶ ಶಂಕರ್ ಪೂಜಾರಿ ಮನೆಯ ಅಂಗಣದಲ್ಲಿ ಹೇಳಿರುವ ಮಾತುಗಳು ನೆನಪಾಗುತ್ತದೆ. ಇನ್ನೊಂದು drag ಎಳೆದಾಗ, ಬಾಲು ಹಾಗು ಶಾರದಾಳ ಬಗ್ಗೆ ನೆನಪಾಗುತ್ತದೆ. ನಂತರ, ಕೊನೆಯ drag ಎಳೆದು ತನ್ನ bulletನ ಕಡೆ ಹೊರಡುವನು.

CUT TO:

INSERT ಮುನ್ನನ ಕಾಲುಗಳು ಬೈಕಿನ ಬಳಿ ಹೋಗಿ bike ಮೇಲೆ ಕುಳಿತುಕೋಳ್ಳುವನು

CUT TO:

INSERT slow motion ನಲ್ಲಿ ಮುನ್ನಾ ತನ್ನ ಬೈಕ್ ನಲ್ಲಿ ಬರುತ್ತಿರುವನು. ಬೈಕ್ ಶಾರದಾಳ ಮನೆಯಬಳಿ ಬಂದು ನಿಲ್ಲುವುದು. ಶಾರದ ತಲೆಯ ಮೇಲೆ ಕೈ ಇಟ್ಟುಕೋಂಡು ಬೇಸರದಲ್ಲಿ ತನ್ನ ಅಣ್ಣನಿಗಗಿ ಕಾಯುತ್ತಿರುವಳು. ಅವಳನ್ನು ನೋಡಿ ಮುನ್ನ ಬೇಸರಗೊಳ್ಳುತ್ತಾ, ತಟ್ಟನೆ ಕೋಪಗೊಳ್ಳುವನು. ಕೋಪದಲ್ಲೆ ಮುನ್ನಾ ಅಲ್ಲಿಂದ ಹೊರಡುತ್ತಾನೆ. ನಂತರ ಇನ್ನೋಂದು ಕಡೆಯಿಂದ ಬಾಲು ಬರುವನು. ಅವನ ದೇಹದ ಮೇಲೆ ರಕ್ತದ ಕಲೆಗಳಿವೆ. ಶಾರದ ಓಡಿಬರುವಳು

CUT TO:

ಶಂಕರ ಪೂಜಾರಿಯ ಮನೆಯಲ್ಲಿ ರಿಚ್ಚಿ ನಡೆದು ಕೊಂಡು ಬಂದು ಹುಲಿಗಳ ಜೋತೆ ಅವನು ಕುಣಿಯಲು ಪ್ರಾರಂಭಿಸುವನು. ಇನ್ನೋಂದು ಕಡೆ ಮುನ್ನ bulletನಲ್ಲಿ ಬರುತಿರುವನು. ಮುನ್ನ ಶಂಕರ ಪೂಜಾರಿಯ ಮನೆಯ ಬಳಿಬಂದು ತನ್ನ bullet ನಿಲ್ಲಿಸುವನು. ಸ್ವಲ್ಪ ಸಮಯ ಹುಲಿವೇಷದವರ ಜೊತೆ ಕುಣಿಯುತಿರುವ ರಿಚ್ಚಿಯನ್ನು ನೋಡುತ್ತಿರುವನು. ಮುನ್ನನಿಗೆ ಕೋಪ ಏರುತಿರುತದೆ. ಅಲ್ಲಿಯೇ ಪಕ್ಕದಲ್ಲಿ ನಿಂತಿರುವ ದಿನೇಶನ ಬೆಲ್ಟಿನಲ್ಲಿ gun ಇರುವುದನ್ನು ನೋಡಿ, ಅದನ್ನು ತನ್ನ ಕೈಗೆ ತೆಗೆದುಕೊಂಡು ರಿಚ್ಚಿಗೆ ಗುಂಡು ಹಾರಿಸುವನು. ಕುಣಿಯುತಿದ್ದ ರಿಚ್ಚಿ ತನ್ನ ಎದೆಗೆ ಗುಂಡು ಬಿದ್ದಾಗ ನೆಲಕ್ಕೆ ಬೀಳುವನು. ಸ್ವಲ್ಪಸಮಯ ಎಲ್ಲವೂ ನಿಶಬ್ದವಾದರೂ ಉಳದವರು ರಿಚ್ಚಿಯು ಬಿದ್ದಿರುವುದನ್ನು ನೋಡದೆ, ಅವರ ಪಡಿಗೆ ಕುಣಿಯುತಿದ್ದಾರೆ. Camera ನಿಧಾನವಾಗಿ ರಿಚ್ಚಿಯ ಬಳಿ ಚಲಿಸಿದರೆ, ಎಲ್ಲರೂ ಕುಣಿಯುವುದನ್ನು ನಿಲ್ಲಿಸುವರು. ನೆಲ ನೋಡಿಕೊಡು ಬಿದ್ದಿರುವ ರಿಚ್ಚಿ ಹಿಂದೆ ತಿರುಗುತ್ತಾ ಮುನ್ನಾ ಗನ್ ಹಿಡಿದುಕೊಂಡಿರುವುದನ್ನು ನೋಡುವನು. ಮುನ್ನನ ಕೈಯಲ್ಲಿ gun ಇರುವುದನ್ನು ಎಲ್ಲರು ನೋಡಿ ಒಂದು ಹೆಜ್ಜೆ ಹಿಂದೆ ಸರಿಯುವರು.

ರಿಚ್ಚಿ (VOICE OVER)
ಆ ಮಾಂಡ್ವದ್ ಹುಡುಗ Cubaದ್ ಹುಡುಗನ್ನ ಕೆಳಗ್ ಹಾಕ್ಕೊಂಡ್

ಡಾಣ್ ಡಾಣ್ ಡಾಣ್ ಅಂತ ಹೋಡಿತಿಬರ್ಬೇಕಾದ್ರೆ, ಈ Cubaದ್ ಹುಡುಗನ್ ತಲೆಯಲ್ಲಿ ಎಂತ ಒಡ್ತಿರ್ಬಹುದು? ನಿನ್ನನ್ನ್ ಆ ಜಾಗದಲ್ಲಿ ಹಾಕ್ಕೊಂದ್ ನೋಡು. ಯಾರಾದ್ರು, ಎಂತಸ ಕಾರಣ ಇಲ್ದೆ ನಿನಗೆ ಹಾಗೆ ಹೊಡ್ದ್ರೆ, ನಿನ್ನ್ ತಲೆಯಲ್ಲಿ ಎಂತ ಓಡ್ಬಹುದು? Full confusion ಆಗ್ಬಹುದಲ್ಲಾ. ನಿಂಗೆ ಈಗ confusion ಆಗ್ತಾ ಇದ್ಯಾ? ಇಲ್ಲಾ. ನಿಂಗೆ confusion ಆಗ್ತಿಲ್ಲ

ನೆಲದ ಮೇಲೆ ರಕ್ತ ಹರಿಯುತ್ತಿದೆ. ದಿನೇಶ ಮುನ್ನನನ್ನು ನೋಡುತ್ತಿರುವನು. ಅಪ್ಪುನ ರಿಚ್ಚಿಯ ಬಳಿ ಹೋಗಲು ಪ್ರಯತ್ನಿಸುವನು, ಆದರೆ ಮುನ್ನನ ಕೈಯಲ್ಲಿ gunಅನ್ನು ನೋಡಿ, ಏನು ತೋಚದೆ ಕೆಲವೊಂದು ಕ್ಷಣ ಹಿಂಜರಿದರೂ, ಧೈರ್ಯ ಮಾಡಿ ರಿಚ್ಚಿಯ ಬಳಿ ಹೋಗಿ ರಿಚ್ಚಿಯನ್ನು ಹಿಡಿದುಕೊಳ್ಳುವನು. ಸಂಪೂರ್ಣ ಅಮಲಿನಲ್ಲಿರುವ ಮುನ್ನ ಸ್ವಲ್ಪ ಸಮಯದ ನಂತರ ವಾಸ್ತವಕ್ಕೆ ಬಂದು, ಅವನ ಕೈಯಲ್ಲಿರುವ gunಅನ್ನು ಕೈ ಬಿಡುವನು. ನಿಧಾನವಾಗಿ ತಿರುಗಿ ನಡೆದುಕೊಂಡು ತನ್ನ bulletಅನ್ನು ನೋಡದೆ ದಾಟಿಕೊಂಡು ಹೋಗುವನು. ಸ್ವಲ್ಪ ಸಮಯದ ನಂತರ ನಡೆಯುತ್ತಾ ಕಣ್ ಮುಚ್ಚುವನು. ಅಲೆಗಳ ಶಬ್ದ ಕೇಳುವುದು

CUT TO:

INSERT ಮುನ್ನ ಬೀಚ್ ನಲ್ಲಿ ಇರುವನು. ದೂರದಲ್ಲಿ ಶಾರದಾಳು ಕುಳಿತಿದ್ದಾಳೆ. ಅವಳನ್ನು ಕಂಡು 20 ಅಡಿ ಅಂತರದಲ್ಲಿ ಹೋಗಿ ನಿಲ್ಲುವನು. ತಟ್ಟನೆ ಒಂದು ಬುಲೆಟ್ fire ಆಗುವ ಶಬ್ದ ಕೇಳುವುದು

ಮುನ್ನನ ಹಿಂದೆ ದಿನೇಶ out of focusನಲ್ಲಿ fire ಮಾಡಿದ್ದಾನೆ. ಮುನ್ನ ನೆಲಮುಖನಾಗಿ ಬಿದ್ದಿದ್ದಾನೆ. ದಿನೇಶ ಆಚೆ ಇಚೆ ನೋಡಿ ಅಲ್ಲಿಂದ ಓಡಿಹೋಗುವನು. ಕೆಳಗೆ ಬಿದ್ದಿರುವ ಮುನ್ನ smile ಮಾಡಿಕೊಂಡು ಮತ್ತೆ ಕಣ್ ಮುಚ್ಚಿಕೊಳ್ಳುವನು

CUT TO:

INSERT 20 ಅಡಿ ದೂರದಲ್ಲಿರುವ ಮುನ್ನ ನಡೆದುಕೊಂಡು ಹೋಗಿ ಶಾರದಾಳ ಪಕ್ಕದಲ್ಲಿ ಕುಳಿತುಕೋಳ್ಳುವನು. Camera ವೃತ್ತಾಕಾರದಲ್ಲಿ ತಿರುಗಿ ಅವರ ಬಳಿ ಬಂದಾಗ ಇಬ್ಬರು ಒಬ್ಬರನ್ನೊಬ್ಬರು ನೋಡಿ smile ಮಾಡುವರು. Camera ಅವರನ್ನು ಸುತ್ತಿ ಹಿಂದೆ ಬಂದಾಗ ಮುನ್ನ ನಡೆದು ಬಂದಿರುವ ಹೆಜ್ಜೆ ಗುರುತು ರಕ್ತದ ಮಡುವಾಗಿರುತ್ತದೆ

CUT TO:

ನಗುತ್ತಿರುವ ಮುನ್ನನ ಮುಖವು ನಿಧಾನವಾಗಿ ಕಾಂತಿಹೀನವಾಗುತ್ತದೆ

CUT TO:

INSERT ಬಾಲು ಶಾರದಾಳ ತೊಡೆಯ ಮೇಲೆ ಮಲಗಿರುವನು. ಶಾರದ ಅವನ ತಲೆ ಸವರುತ್ತಿರುವಳು. ಬಾಲು ಕೋಪದಲ್ಲಿ ಕಣ್ಣು ತೆರೆದು ಮರದ ಕಡೆ ನೋಡುವನು. ಅಲ್ಲಿ ಏನು ಇರುವುದಿಲ್ಲಾ. ಮರಕ್ಕೆ ಕಲ್ಲು ಎಸೆಯುವನು, ಮತ್ತೆ ಮತ್ತೆ ಕಲ್ಲೆಸೆಯುತ್ತಾ, ಎಲ್ಲಿ ಎಸೆಯಬೇಕೆಂದು ತಿಳಿಯದೆ ಎಲ್ಲಾ ಕಡೆ ಕಲ್ಲು ಎಸೆಯಲು ಪ್ರಾರಂಭಿಸುವನು. ಇದನ್ನು ಶಾರದಾಳು ಆಶ್ಚರ್ಯ ಹಾಗು ಭಯದಿಂದ ನೋಡುವಳು. ನಂತರ ಬಾಲು ಎಲ್ಲಾಕಡೆ ನೋಡಿ ಓಡಿಕೊಂಡು ಮನೆಯ ಒಳಗೆ ಹೋಗಿ ಬಾಗಿಲನ್ನು ಹಾಕಿಕೋಳ್ಳುವನು.

CUT TO:

INT. NIGHT: REGINA'S HOUSE

ರೆಜಿನಾಳ ಮನೆಯಲ್ಲಿ party ನಡೆಯುತ್ತಿರುವುದು. ರೆಜಿನಾಳ ತಂದೆ cake cut ಮಾಡಿ ರೆಜಿನ ಹಾಗು ಅವಳ ತಾಯಿಗೆ ತಿನಿಸುವರು. ನಂತರ ಇತರರಿಗೆ ತಿನುಸುವಾಗ camera ನಿಧಾನವಾಗಿ ರೆಜಿನಾಳ ಕಡೆ ಚಲಿಸಿದರೆ ರೆಜಿನಾಳ ಏಕಾಗ್ರತೆ party ಇಂದ ಬೇರ್ರೆಲ್ಲೊ ಸಾಗಿ ನಗುತ್ತಿದ್ದ ಅವಳ ಮುಖದ ಭಾವನೆಗಳು ಬದಲಾಗುವುದು

ರೆಜಿನಾ (V.O.)
ನಿಜ್ವಾಗ್ಲು ಏನ್ ನಡೀತು ಅಂತ ಯಾರಿಗು ಗೊತ್ತಿಲ್ಲ...

CUT TO:

INSERT ರೆಜಿನಾ ಹಾಗು ದಿನೇಶ ಇಬ್ಬರು, cellನಲ್ಲಿರುವರು.

ದಿನೇಶ
ಇಲ್ಲಾ.. ಇಲ್ಲಾ... ರಿಚ್ಚಿ ಅವನನ್ನಾ ಕೊಂದಿಲ್ಲ... ನಾನ್ ಅಲ್ಲೆ ಇದ್ನಲ್ಲ... ಅವರಿಬ್ರು ಬಾಲ್ಯದ್ ಸ್ನೇಹಿತರು, ಅವನನ್ನ ಯಾಕ್ ಕೊಲ್ತಾನೆ?

ರೆಜಿನಾ
ಹಾಗಾದ್ರೆ ಆ ರಾತ್ರಿ ಅವ್ನ್ ತಾಯಿಯನ್ನ ಯಾಕ್ meet ಆಗ್ಲಿಲ್ಲ?

ದಿನೇಶ
(ಸ್ವಲ್ಪ ಯೋಚಿಸಿ) ಅದೇನ್ ಅಂತ ಗುತ್ತಿಲ್ಲಾ.. ನಾವು ಹಡಗನ್ನ ದಡಕ್ಕೆ ಎಳಿಬೇಕಾದ್ರೆ ರಿಚ್ಚಿಗ್ ಹೇಳಿ Dubaiಗೆ trunk call book ಮಾಡಿಸ್ದ. ಸ್ವಲ್ಪ ಹೊತ್ತಿನ ನಂತರ call ಮಾಡಿ ವಾಪಸ್ ಬಂದವ, ಅರ್ಜೆಂಟಾಗಿ ಹೊರಡ್ಬೇಕು ಅಂತ ಹೇಳಿ ಹೋರಟ್ ಹೋದ. ಎಲ್ಲಿಗೆ ಹೋಗ್ತಿದ್ದಾನೆ ಅಂತ ಏನು ಹೇಳಿಲ್ಲ

Close on ರೆಜಿನಾ...

ರೆಜಿನಾ (V.O.)
ಪ್ರತಿ ಒಬ್ಬರ ಕಥೆ ಕೇಳ್ತಾಗ್ಲುನು, there is this strange feeling. You feel it is true yet different from the other.

CUT TO:

INSERT ಬಾಲು bus stand ಬಳಿ

ಬಾಲು
ಬೊಂಬಾಯಗ್ ಅದ್ ಕಳ್ಳ್ ಹೊಯ್ತಲೆ... ಅದನ್ನ ಹೆಚ್ಚಪೊಕ್ಷ ರಾಘುವೆ ಕದ್ದದ್ದಾ ಅಂದೇಳಿ? ಅಂವ ದುಬಾಯ್ಗ್ ಹೋಯಿ ಅದನ್ನ ಮಾರಿ ಅಲ್ಲೆ settle ಆಪ್ ಅಂದಾಜಗಿದ್ದಿದಾ.. ಆರೆ ನಾನ್ ಹೇಳ್ತ್ಯಾ ಅದ ಶನಿ ಬೆನ್ನ ಹತ್ತದಾಗ್... ನಮ್ಮ ಜೀವೆತೆಗಿತ್ ಅದ...

INSERT ರೆಜಿನಾಳ ಮನೆಯಲ್ಲಿ close on ರೆಜಿನ

ರೆಜಿನಾ (V.O.)
ಘಟನೆ ಒಂದಾದ್ರುನು, ನೋಡಿರೊ ಮುಖಗಳು ಬೇರೆ ಬೇರೆ. Perspectives... ಯಾವುದು ಸರಿ, ಯಾರ್ ಸರಿ? ಅವರವರ ದೃಷ್ಠಿಕೋನದಲ್ಲಿ ನೋಡದಾಗ ಎಲ್ಲಾನು ಬದಲಾಗುತ್ತೆ...

CUT TO:

INSERT ಶೈಲು ಹಾಗು ರೆಜಿನಾ ರತ್ನಕ್ಕಳ ಮನೆಯ ಹೊರಗೆ zen ಕಾರಿನಲ್ಲಿ ಕುಳಿತಿದ್ದಾರೆ

ಶೈಲು
ಅವನ್ ಇಲ್ಲಿಗ್ ಬಂದ್ದದ್ ಬೊಂಬಾಯರಿಗ್ ಗುತ್ತಾಯಿತ್ ಅಂದೇಳಿ ಯಾರಿಗು ಹೇಳ್ದೆ, ಅಮ್ಮನ್ನು ಕಾಣ್ದೆ ಹೊರಟ್ನಾ? ದುಬಾಯಗ್ ಇಪ್ಪುದ್ ಹೌದಾರ್ ನಂಗ್ ಫೋನ್ ಮಾಡಿಯೇ ಮಾಡ್ತ...

CUT TO:

INSERT ರೆಜಿನಾಳು ಮನೆಯ ಹೊರಗೆ ನಡೆದು ಕೊಂಡು ಬಂದು ಹೊರಾಂಗಣದಲ್ಲಿ ನಿಲ್ಲುತ್ತಾಳೆ. ಹಿಂಬದಿಯಲ್ಲಿ ಇನ್ನೂ partyಯ ವಾತಾವರಣ

ರೆಜಿನಾ (V.O.)
..... and how am I supposed to come to a conclusion? In fact ನಾನೇ ಒಂದು conclusion ಕೊಟ್ಟೊಂಡು ಕಥೆ ಹೇಳಿದ್ರೆ ತಪ್ಪಾಗುತ್ತೆ. ಅದ್ರ ಬದ್ಲು ಯಾವೊಂದು ಚಿಕ್ಕ ಅಂಶಗಳನ್ನು ಬಿಡದೆ, ಅವರವರ ದೃಷ್ಟಿಕೊನದಲ್ಲಿ, ಅವರವರು ಹೇಳಿದ ಹಾಗೆ ಕಥೆ ಹೇಳಿದ್ರೆ, ನೀವು ನಿಮ್ಮದೆ ಆದ ಉತ್ತರಾನ ಹುಡ್ಕೋತೀರಾ ಅಂತ ಅನ್ಕೋತೀನಿ..

CUT TO:

INSERT ರಾಘು ಹಡಗಿನಲಿ ಒಬ್ಬನೆ ನಿಂತಿದ್ದಾನೆ. Camera ನಿಧಾನವಾಗಿ ಹಿಂದಕ್ಕೆ ಸರಿದರೆ, ಅವನ ಮೈಯಿಂದ ರಕವು ಸುರಿಯುತಿದೆ, ಆದರೆ ಅವನ ಮುಖದಲ್ಲಿ ಯಾವ ಭಾವನೆಯು ಕಾಣುವುದಿಲ್ಲ. Camera ಇನ್ನೊ ಹಿದಕ್ಕೆ ಸರಿದರೆ, ಹಡಗು ಆಳ ಸಮುದ್ರದ ಮಧ್ಯೆಯಲ್ಲಿ ಇದ್ದು ಅದರಲ್ಲಿ ರಾಘುವಿನ ಹೊರತು ಬೇರೆ ಯಾತೂ ಇರುವುದಿಲ್ಲ.

INSERT ರತ್ನಕ್ಕ ಮನೆಯ ಹೊರಗೆ ತಟ್ಟೆಯಲ್ಲಿ ಮೀನ್ curry ಹಾಕಿಕೊಂಡು ಕಾಯುತ್ತಿದ್ದಾಳೆ

INSERT ಮನೆಯ ಹೊರಗೆ ಶಾರದ ಬಾಗಿಲನ್ನು ಬಡಿಯುತ್ತಿದ್ದಾಳೆ, ಒಳಗೆ ಬಾಲು ನೆಲದ ಮೇಲೆ ಬಿದ್ದು ಅಳುತ್ತಿದ್ದಾನೆ

INSERT ಮುನ್ನನ ಹೆಣ ರಸ್ತೆಯಲ್ಲಿ ಬಿದ್ದಿದೆ

INSERT ರಿಚ್ಚಿ ಆಕಾಶನೋಡಿಕೊಂಡು ನೆಲದ ಮೇಲೆ ಬಿದ್ದಿದ್ದಾನೆ. ಅವನ ತಲೆಯ ಪಕ್ಕದಲ್ಲಿ ರಕ್ತ ಹರಿಯುತ್ತಿದೆ. Camera ನಿಧಾನವಾಗಿ top angleನಿಂದ ಅವನ ಕಡೆ ಚಲಿಸುತ್ತದೆ. ಹತ್ತಿರ ಹೋದಾಗ ಅಲುಗಾಡುವ ಕಣ್ಣಿನ ಗುಡ್ಡೆಗಳು ಸ್ತಬ್ಧಗೊಳ್ಳುತ್ತದೆ.

DISSOLVE TO:

End Credits